ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೬೯
ವಿಚಾರ ಸಾಹಿತ್ಯಮಾಲೆ – ೮೨
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ನಮ್ಮ ದೇಶದ ಆಧ್ಯಾತ್ಮಿಕ ವ್ಯಕ್ತಿಗಳು: ಒಂದು ನೋಟ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ

ಮೂಲ ಸಂಪಾದಕರು

**ಆರ್. ಆರ್. ದಿವಾಕರ್**

**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ

**ಲೀಲಾವತಿ ಮುನ್ಷಿ** – ಅಧ್ಯಕ್ಷೆ

**ಕೆ. ಕೆ. ಬಿರ್ಲಾ** – ಸದಸ್ಯರು

**ಎಸ್. ಜಿ. ನೇವಾತಿಯ** – ಸದಸ್ಯರು

**ಜಿ. ಎಚ್. ದವೆ** – ಸದಸ್ಯರು

**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**

(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ನಮ್ಮ ದೇಶದ ಆಧ್ಯಾತ್ಮಿಕ ವ್ಯಕ್ತಿಗಳು: ಒಂದು ನೋಟ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**

**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**

**–ಋಗ್ವೇದ, I ೮೯–೧**


ಮೂಲ

**ಇ. ಟಿ. ಶಂಕರನ್ ಕುಟ್ಟಿ**

ಅನುವಾದ

**ಕೆ. ಶೈಲಾ ಕುಮಾರಿ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು

ಮತ್ತು

**ಭಾರತೀಯ ವಿದ್ಯಾ ಭವನ,** ಮೈಸೂರು

**Namma Deshada Adhyathmika Vyaktigalu– Ondu Nota:** Kannada translation of *A Glimpse on Spiritual Personages of Our Country* : **E. T. Sankran Kutty;** Kannada translation by **K. Shyla Kumari;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 102. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxii + ೧೦೨
ಬೆಲೆ : ರೂ. ೧೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**‘ಕನಕದಾಸರ ಕೃತಿ’**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ  ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



# ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ<br>ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**<br>ಅಧ್ಯಕ್ಷ

# ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

'ನಮ್ಮ ದೇಶದ ಆಧ್ಯಾತ್ಮಿಕ ವ್ಯಕ್ತಿಗಳು: ಒಂದು ನೋಟ' ಇ.ಟಿ.ಶಂಕರನ್ ಕುಟ್ಟಿ ಅವರ *A Glimpse on Spiritual Personages of Our Country* ಎಂಬ ಪುಸ್ತಕದ ಕನ್ನಡ ಅನುವಾದ. ಇದನ್ನು ಕೆ. ಶೈಲಾ ಕುಮಾರಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



# ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ  ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಮೂಲ ಲೇಖಕರ ಮುನ್ನುಡಿ

ವಿಶ್ವದ ಹನ್ನೊಂದು ಪ್ರಮುಖ ಧರ್ಮಗಳಲ್ಲಿ ನಾಲ್ಕು ಧರ್ಮಗಳು ಭಾರತದಲ್ಲಿ ಹುಟ್ಟಿವೆ. ೧. ಸನಾತನ ಧರ್ಮ ಅಥವಾ ಭಾರತೀಯರು ಹೇಳಿಕೊಳ್ಳುವಂತೆ ವೇದ ಧರ್ಮ ಮತ್ತು ಪಾಶ್ಚಾತ್ಯರು ಹೇಳುವಂತೆ ಹಿಂದೂ ಧರ್ಮ (ಇದರ ಆರಂಬ ಯಾರಿಗೂ ತಿಳಿಯದು; ಅಷ್ಟು ಪುರಾತನ). ೨. ಬೌದ್ಧ ಧರ್ಮ (ಕ್ರಿ.ಪೂ. ೬ನೇ ಶತಮಾನ), ೩. ಜೈನ ಧರ್ಮ (ಕ್ರಿ.ಪೂ. ೬ನೇ ಶತಮಾನ) ಮತ್ತು ೪. ಸಿಕ್ಖ್ ಧರ್ಮ (ಕ್ರಿ.ಪೂ. ೧೬ನೇ ಶತಮಾನ).

ಕಳೆದ ಎರಡು ಸಹಸ್ರಮಾನಗಳ ಅವಧಿಯಲ್ಲಿ ಭಾರತಮಾತೆಯ ಹಲವಾರು ಆಧ್ಯಾತ್ಮಿಕ ಪುಣ್ಯ ಪುರುಷರಿಗೆ ಜನ್ಮ ನೀಡಿದೆ. ಮಾನವರ ಕಷ್ಟಕೋಟಲೆಗಳನ್ನು ಪರಿಹರಿಸಿ ಅವರನ್ನು ದೇವರ ಕಡೆಗೆ ಮುಖ ಮಾಡುವಂತೆ ಪ್ರಯತ್ನಿಸುವುದ ಅವರ ಗುರಿಯಾಗಿತ್ತು. ಅವರು ಕತ್ತಿಯಿಂದ ಅಥವಾ ಬಲವಂತದಿಂದ ತಮ್ಮ ಉದ್ದೇಶ ಈಡೇರಿಸಿಕೊಳ್ಳಲಿಲ್ಲ. ಬದಲಾಗಿ ಪ್ರೀತಿ, ಪ್ರೇಮ ಮತ್ತು ಅಂತಃಕರಣ ಪೂರಿತವಾದ ಸೇವೆಯಿಂದ ಮನುಕುಲವನ್ನು ಹಿಡಿದೆತ್ತಲು ಪ್ರಯತ್ನಿಸಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿ ಹೋದರು. ಮುಂದಿನ ತಲೆಮಾರುಗಳಿಗೆ ಒಳಿತನ್ನುಂಟುಮಾಡಿದರು.

ಅಂಥವರ ಪರಿಚಯವನ್ನು ಅಕಾರಾದಿಯಲ್ಲಿ ಮಾಡಿ ಅವರ ಉಪದೇಶಗಳನ್ನು ಸಂಕ್ಷಿಪ್ತವಾಗಿ ನೀಡುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಿದ್ದೇನೆ.

ವಿಶ್ವದ ಎಲ್ಲೆಡೆ ವಾಸಿಸುತ್ತಿರುವ ನಮ್ಮ ದೇಶದ ಕಿರಿಯ ತಲೆಮಾರಿನ ಯುವಕರಿಗೆ ಈ ಪುಸ್ತಕವನ್ನು ಅರ್ಪಿಸುತ್ತಿದ್ದೇನೆ. ನಮ್ಮ ದೇಶದ ಅಧ್ಯಾತ್ಮಿಕ ಹಿರಿಜೀವಗಳ ಬಗ್ಗೆ ಅವರು ಓದಿ ತಿಳಿದುಕೊಂಡು ಪ್ರಭಾವ ಪ್ರೇರಣೆ ಪಡೆಯಲಿ ಮತ್ತು ಭಾರತೀಯರಾಗಿ ಹುಟ್ಟಿದ್ದಕ್ಕೆ ಅಥವಾ ವಿದೇಶಗಳಲ್ಲಿ ಭಾರತೀಯ ತಂದೆ–ತಾಯಿಗಳಿಗೆ ಮಕ್ಕಳಾಗಿ ಹುಟ್ಟಿದ್ದಕ್ಕೆ ಹೆಮ್ಮೆ ಪಡಲಿ ಎಂಬ ಆಶಯ ನನ್ನದು.

**ಇ. ಟಿ. ಶಂಕರನ್ ಕುಟ್ಟಿ**

## ಕೃತಜ್ಞತೆಗಳು

ಈ ಪುಸ್ತಕದಲ್ಲಿ ವಿವೇಚಿಸಿರುವ ವಿಷಯ ಅಧ್ಯಾತ್ಮ. ನನಗೆ ಈ ವಿಷಯದಲ್ಲಿರುವ ಅಜ್ಞಾನ ಅಥವಾ ಅರೆಜ್ಞಾನದಿಂದಾಗಿ ಪ್ರಸಿದ್ಧ ಲೇಖಕರು ಮತ್ತು ಪ್ರಕಾಶಕರು ಪ್ರಕಟಿಸಿರುವ ಲೇಖನಗಳು ಹಾಗೂ ಪುಸ್ತಕಗಳಿಂದ ಮಾಹಿತಿಗಳನ್ನು ಕಲೆ ಹಾಕಬೇಕಾಯಿತು. ಒಂದು ಅರ್ಥದಲ್ಲಿ ಈ ಪುಸ್ತಕದಲ್ಲಿ ಕಾಣಬರುವ ವಿಷಯಗಳೆಲ್ಲವೂ ಮೇಲೆ ಹೇಳಿದ ಆಧಾರ ಗ್ರಂಥಗಳಿಂದ ಕಲೆಹಾಕಿದ ಸಂಗತಿಗಳು. ಆದರೆ ನನ್ನ ಗುರಿ ಮತ್ತು ಉದ್ದೇಶಗಳಿಗನು ಗುಣವಾಗಿ ಈ ಸಂಗತಿಗಳನ್ನು ಕ್ರಮದಲ್ಲಿ ನೀಡಿರುವುದೇ ನನ್ನ ಪ್ರಯತ್ನ. ಅದೇನೇ ಆಗಲಿ, ಈ ಕೆಳಗೆ ಕಾಣಿಸಿರುವ ಲೇಖಕರು ಮತ್ತು ಪ್ರಕಾಶಕರುಗಳಿಗೆ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಅದ್ವೈತ ಆಶ್ರಮ, ಮಾಯಾವತಿ, ಪಿತೋರ್‌ಗಡ, ಹಿಮಾಲಯ.
ಭವನ್ಸ್ ಬುಕ್ ಯೂನಿವರ್ಸಿಟಿ, ಮುಂಬೈ.
ಚಿನ್ಮಯ ಮಿಷನ್, ಮುಂಬೈ ಮತ್ತು ಚೆನ್ನೈ.
ಕಲ್ಯಾಣ ಕಲ್ಪತರು, ಗೋರಖ್‌ಪುರ, ಉತ್ತರ ಪ್ರದೇಶ.
ರಾಮಕೃಷ್ಣಮಠ, ಚೆನ್ನೈ, ಕೊಲ್ಕತ್ತ ಮತ್ತು ತ್ರಿಶ್ಯೂರ್.
ಶಂಕರಮಠ, ಕಾಂಚೀಪುರ ಮತ್ತು ಶೃಂಗೇರಿ.
ಶಿರ್ಡಿ ಸಂಸ್ಥಾನ್, ಶಿರ್ಡಿ.
ಬುಕ್ಸ್ ಫಾರ್ ಆಲ್, ದೆಹಲಿ.

ಭಾರತೀಯ ವಿದ್ಯಾಭವನದ ಚೆನ್ನೈ ಕೇಂದ್ರದ ಉಪನಿರ್ದೇಶಕರಾದ ಶ್ರೀ ಕೆ. ಎನ್. ರಾಮಸ್ವಾಮಿಯವರು ಹಾಗೂ ಶ್ರೀಮತಿ ಉಷಾ ಮಾಧವನ್ ಅವರಿಗೂ ಮತ್ತು ವಿಜಯ್ ನಿಕೋಲ್ ಇಂಪ್ರಿಂಟ್ಸ್ ಪ್ರೈ. ಲಿಮಿಟೆಡ್, ಚೆನ್ನೈ, ಅವರ ಸಹೋದ್ಯೋಗಿಗಳು ಈ ಪುಸ್ತಕವನ್ನು ಸಕಾಲದಲ್ಲಿ ಹೊರತರಲು ನೀಡಿದ ಸಹಕಾರಕ್ಕಾಗಿಯೂ ಹಾಗೂ ಪ್ರೋತ್ಸಾಹಕ್ಕಾಗಿಯೂ ವಿಶೇಷ ಕೃತಜ್ಞತೆಯನ್ನು ದಾಖಲಿಸುತ್ತೇನೆ.

**ಇ. ಟಿ. ಶಂಕರನ್ ಕುಟ್ಟಿ**



## ಪರಿವಿಡಿ

ಮುನ್ನುಡಿ v
ಸಂದೇಶ vii
ಹಾರೈಕೆ viii
ಪ್ರಾಸ್ತಾವಿಕ ನುಡಿ ix
ಪೀಠಿಕೆ xi
ಅರಿಕೆ xiv
ಕುಲಪತಿಗಳ ಪ್ರಸ್ತಾವನೆ xv
ಮೂಲ ಲೇಖಕರ ಮುನ್ನುಡಿ xvii
ಕೃತಜ್ಞತೆಗಳು xviii

೧. ಪೀಠಿಕೆ ೩
೨. ಶ್ರೇಷ್ಠ ಆಧ್ಯಾತ್ಮಿಕ ವ್ಯಕ್ತಿಗಳ ಪರಿಚಯ ೭
೩. ಹಿಂದೂ ಧಾರ್ಮಿಕ ಚಳವಳಿಯೊಂದಿಗೆ ಸಂಪರ್ಕ ಹೊಂದಿದ್ದ ಆಧ್ಯಾತ್ಮಿಕ ಗುರುಗಳು ೭೫
೪. ಜೀವಂತ ದೇವ ಮಾನವರು ೮೪
೫. ಭಾರತದ ಇತರ ಧರ್ಮಗಳ ಆಧ್ಯಾತ್ಮಿಕ ಗುರುಗಳು ೮೮

Blank



# ನಮ್ಮ ದೇಶದ ಆಧ್ಯಾತ್ಮಿಕ ವ್ಯಕ್ತಿಗಳು: ಒಂದು ನೋಟ

## ನಿರೂಪಣೆಗಳು

ಆಚಾರ್ಯ : ಉದಾಹರಣೆಗಳೊಂದಿಗೆ ಹಿಂದೂ ಧರ್ಮದ ಆಧ್ಯಾತ್ಮಿಕ ವಿಚಾರಗಳನ್ನು ತಿಳಿಯಪಡಿಸುವ ವಿದ್ವಾಂಸ.

ಸ್ವಾಮಿ : ಧಾರ್ಮಿಕ ವಿಚಾರಗಳನ್ನು ತಿಳಿಯಪಡಿಸುವ ಗುರುಗಳಿಗೆ ಹಿಂದೂ ಧರ್ಮದಲ್ಲಿ ಬಳಸುವ ಒಂದು ಉಪಾಧಿ.

ಸಾಧು : ಪುಣ್ಯಾತ್ಮವುಳ್ಳ ಭಕ್ತನಿಗೆ ಹಿಂದೂ ಹಾಗೂ ಜೈನಧರ್ಮಗಳಲ್ಲಿ ಈ ಪದವನ್ನು ಬಳಸಲಾಗುತ್ತದೆ.

ಸಂತ : ಸ್ವಾರ್ಥರಹಿತವಾದ ಸನ್ಯಾಸಿಗೆ ಸಂತ ಎಂಬ ಪದವಿಯನ್ನು ಹಿಂದೂ ಮತ್ತು ಸಿಕ್ಖ್ ಧರ್ಮಗಳಲ್ಲಿ ಬಳಸಲಾಗುತ್ತದೆ.

ಸಿದ್ಧ : ದೈವೀಶಕ್ತಿಯನ್ನು ಗಳಿಸಿ ಯೋಗಿಯ ಪದವಿಯನ್ನು ಗಳಿಸಿದ ಮಹಾತ್ಮನಿಗೆ ಹಿಂದೂ ಹಾಗೂ ಸಿಕ್ಖ್ ಧರ್ಮಗಳಲ್ಲಿ ಉಪಯೋಗಿಸುವ ಪದ.

ಮಾಂಕ್ : ಸ್ವಾರ್ಥರಹಿತವಾಗಿ ಆಧ್ಯಾತ್ಮಿಕ ಜೀವನ ನಿರ್ವಹಿಸುವ ವ್ಯಕ್ತಿಗೆ ಯಹೂದ್ಯರಲ್ಲಿ ಬಳಸಲಾಗುವ ಪದ.

ಭಿಕ್ಕು : ಬೌದ್ಧರಲ್ಲಿ ಸಾಧುಗಳಿಗೆ ಬಳಸುವ ಪದ.

ಪ್ರವಾದಿ : ದೇವರ ಮಾತನ್ನು ಮನುಜನಿಗೆ ಕೊಟ್ಟವನಿಗೆ ಇಸ್ಲಾಂ ಧರ್ಮದಲ್ಲಿ ಉಪಯೋಗಿಸುವ ಶಬ್ದ.

ಪೀರ್ : ಇಸ್ಲಾಂನಲ್ಲಿ ಸಾಧುಗಳಿಗೆ ಬಳಸುವ ಶಬ್ದ.

ಆಳ್ವಾರ್ : ದೇವರ ಪ್ರೀತಿಯಲ್ಲಿ ಮುಳುಗಿದವನಿಗೆ, ದೇವರ ಆಶೀರ್ವಾದ ದೊರೆತವನಿಗೆ ಹಿಂದೂ ಧರ್ಮದಲ್ಲಿ ಬಳಸುವ ಪದ.

ಹರಿದಾಸ : ಹರಿಯ ಸೇವಕ, 'ಹರಿ' ಎಂದರೆ ಕೃಷ್ಣ (ವಿಷ್ಣು). ಹಿಂದೂ ಧರ್ಮದಲ್ಲಿ ಈ ಪದವನ್ನ ಬಳಸಲಾಗುತ್ತದೆ.

ನಾಯನ್ಮಾರ್: ಶಿವಭಕ್ತರು.

ಗುರು : ಕತ್ತಲೆಯನ್ನು ಕಳೆಯುವವನು (ಹಿಂದೂ ಮತ್ತು ಸಿಕ್ಖ್‌ರಲ್ಲಿ ಈ ಪದ ಬಳಸುತ್ತಾರೆ) 'ಗು' ಮತ್ತು 'ರು' ಎರಡು ಅಕ್ಷರಗಳಲ್ಲಿ 'ಗು'

ಕತ್ತಲೆಯನ್ನೂ, 'ರು' ಆ ಕತ್ತಲೆಯನ್ನು ಹೊಡೆದೋಡಿಸುವುದನ್ನು ಸೂಚಿಸುತ್ತದೆ.

"ಗುರುವಿಗಿಂತ ಮಿಗಿಲಾದವನು ಈ ಜಗತ್ತಿನಲ್ಲಿ ಬೇರೆ ಇಲ್ಲ. ದಿವ್ಯ ಜ್ಞಾನವನ್ನು ಶಿಷ್ಯನಿಗೆ ನೀಡುವಾತ ಗುರು. ಹಾಗಾಗಿ ಅವನನ್ನು ಭಕ್ತಿಯಿಂದ ಪೂಜಿಸಬೇಕು" ಎನ್ನುತ್ತದೆ ಯೋಗ ಶಿಕ್ಷಾ ಉಪನಿಷತ್ತು (೫-೫೩)

"ಮಾರ್ಗದರ್ಶನವಿಲ್ಲದ ಅಥವಾ ಸಹಾಯವಿಲ್ಲದ ಪ್ರಯತ್ನ ಬಹಳ ದೂರ ನಮ್ಮನ್ನು ಕೊಂಡೊಯ್ಯುವುದಿಲ್ಲ'' ಎನ್ನುತ್ತದೆ 'ಕುಲಾರ್ಣವ ತಂತ್ರ' ೧೩-೧೨೬)

ಆರು ರೀತಿಯ ಗುರುಗಳಿರುತ್ತಾರೆ:

೧. ಪ್ರೇರಕ – ಶಿಷ್ಯನನ್ನು ಪ್ರೇರಣೆಗೊಳಿಸುವವನು.

೨. ಸೂಚಕ – ಆಧ್ಯಾತ್ಮಿಕ ಬದುಕನ್ನು ಯಾವ ರೀತಿ ಕೈಗೊಳ್ಳಬೇಕೆಂದು ಸೂಚಿಸುವವನು.

೩. ವಾಚಕ – ಆಧ್ಯಾತ್ಮಿಕ ಪ್ರಕ್ರಿಯೆಯನ್ನು ವಿವರಿಸುವವನು.

೪. ದರ್ಶಕ – ಆ ಪ್ರಕ್ರಿಯೆಯನ್ನು ತೋರಿಸುವವನು.

೫. ಶಿಕ್ಷಕ – ಆ ಪ್ರಕ್ರಿಯೆಯ ಕುರಿತಾಗಿ ಪಾಠ ಮಾಡುವವನು.

೬. ಬೋಧಕ – ಶಿಷ್ಯನಲ್ಲಿ ತಿಳಿವಳಿಕೆಯ ಜ್ಞಾನದ ದೀಪವನ್ನು ಹಚ್ಚುವವನು.



## ೧. ಪೀಠಿಕೆ

ವೇದಕಾಲ ಹಾಗೂ ವೇದೋತ್ತರ ಕಾಲಘಟ್ಟದಲ್ಲಿ ನಮ್ಮ ದೇಶದಲ್ಲಿ ಆಗಿ ಹೋದ ಆಧ್ಯಾತ್ಮಿಕ ಪುರುಷರ ಒಂದು ಬಹುದೊಡ್ಡ ಪರಂಪರೆ ಜಗತ್ತಿನ ಬೇರಾವ ದೇಶದಲ್ಲೂ ಕಂಡುಬರುವುದಿಲ್ಲ. ಕಳೆದೆರಡು ಸಹಸ್ರಮಾನದ ಅವಧಿಯಲ್ಲಿ ನಮ್ಮ ದೇಶದಲ್ಲಿ ಆಗಿಹೋದ ಮೊದಲ ಸಾಲಿನ ಧಾರ್ಮಿಕ ಮಹಾಚೇತನಗಳ ಒಂದು ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲು ಈ ಕೃತಿಯಲ್ಲಿ ಪ್ರಯತ್ನಿಸಲಾಗಿದೆ.

ಆ ದಿವ್ಯಾತ್ಮಗಳು ನಮ್ಮ ಮಹಾನ್ ದೇಶ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಅದರಲ್ಲೂ ಕಡುಬಡತನದ ಕುಟುಂಬಗಳಲ್ಲಿ ಜನಿಸಿ ಬಂದವರು. ಕೆಲವರಂತೂ ಹುಟ್ಟಿದ್ದು ಕೂಡಾ ಎಲ್ಲರಂತಲ್ಲ; ಉದಾಹರಣೆಗೆ, ನಾಮದೇವ ಭೀಮರಥಿ ನದೀ ದಂಡೆಯಲ್ಲಿ ಹುಟ್ಟಿದರೆ, ಕಬೀರ ಭಾಗೀರಥೀ ನದಿಯ ದಂಡೆಯಲ್ಲಿ ಹುಟ್ಟಿದರು.

ಹಲವರು ಶಾಲಾ ಕಾಲೇಜಿನ ಸಾಂಪ್ರದಾಯಿಕ ಶಿಕ್ಷಣವನ್ನೂ ಪಡೆಯಲಿಲ್ಲ. ಆದರೆ, ಬದುಕಿನ ಒಂದಲ್ಲ ಒಂದು ಹಂತದಲ್ಲಿ ಆಧ್ಯಾತ್ಮ ಗುರುವೊಬ್ಬ ಅವರ ಜೀವನದಲ್ಲಿ ಪ್ರವೇಶಿಸಿ ಅವರ ಅಂಧಕಾರವನ್ನು ಕಳೆದು ಜ್ಞಾನದ ಕಣ್ಣನ್ನು ತೆರೆಸಿದ್ದನ್ನು ನೋಡುತ್ತೇವೆ.

ಮಾನವೀಯ ಅಂತಃಕರಣವುಳ್ಳ ಇಂತಹ ಹಲವು ಮಹನೀಯರು ನಿಜನಾಮದಲ್ಲಿ ಗುರುತಿಸಿಕೊಳ್ಳದೆ ಅನಂತರ ಗಳಿಸಿಕೊಂಡ ಹೆಸರಿನಿಂದ ಪ್ರಸಿದ್ಧರಾದರು. ಜನರನ್ನು ತಿದ್ದುವ ಅಥವಾ ಸರಿದಾರಿಯನ್ನು ತೋರಿಸುವ ಒಂದು ಧ್ಯೇಯ ಅವರಲ್ಲಿದ್ದುದರಿಂದ ಅವರು ಜನಸಾಮಾನ್ಯರೊಂದಿಗೆ ಮಿಳಿತವಾಗಿಯೇ ಜೀವಿಸಿದರು. ಅವರು ತಮ್ಮ ಉಡುಗೆ-ತೊಡುಗೆ ಮತ್ತು ಬಾಹ್ಯ ಅಲಂಕಾರಗಳ ಬಗೆಗೆ ಕೂಡಾ ನಿಷ್ಕಾಳಜಿಯಿಂದ ಇರುತ್ತಿದ್ದರು. ಅಥವಾ ಹೆಚ್ಚಾಗಿ ಅವರು ಒಂದು ತುಂಡು ಉಡುಗೆಯಲ್ಲಿ ಇರುತ್ತಿದ್ದರು. ಆ ತುಂಡು ಬಟ್ಟೆಯು ಮಾನ ಮುಚ್ಚಲು, ಹಾಸಲು-ಹೊದೆಯಲು ಬಳಕೆಯಾಗುತ್ತಿತ್ತು. ರಾಜಕೀಯ ಅಥವಾ ಆರ್ಥಿಕ ಚಟುವಟಿಕೆಗಳಲ್ಲಿ ಅವರೆಂದೂ ಭಾಗಿಯಾಗುತ್ತಿರಲಿಲ್ಲ. ಅವರು ಶುದ್ಧ

ಶಾಖಾಹಾರಿಗಳಾಗಿರುತ್ತಿದ್ದರು ಮತ್ತು ಯಾವ ದುರ್ವ್ಯಸನಗಳನ್ನೂ ಹತ್ತಿರ ಸೇರಿಸುತ್ತಿರಲಿಲ್ಲ.

ಬದುಕಿನ ದುಃಖಾರ್ತ ಭಾವಗಳನ್ನು ಅವರ ಬಾಹ್ಯ ಜೀವನದಿಂದ ಕಂಡುಕೊಳ್ಳ ಬಹುದಾಗಿತ್ತಾದರೂ ಆಂತರಿಕವಾಗಿ ಅವರು ಅತ್ಯಂತ ಸುಖಿಗಳಾಗಿರುತ್ತಿದ್ದರು. ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರ– ಎಂಬ ಷಡ್ವೈರಿಗಳನ್ನು ಗೆದ್ದ ಅವರು ಅತ್ಯಂತ ಸರಳ ಜೀವನ ಮಾಡುತ್ತ ತನು–ಮನ–ಧನಗಳ ಬಗ್ಗೆ ನಿರ್ಲಿಪ್ತವಾಗಿ ಇರುತ್ತಿದ್ದರು. ಕೆಲವರಂತೂ ತಾವು ಗಳಿಸಿದ್ದ ಎಲ್ಲವನ್ನೂ ತ್ಯಾಗ ಮಾಡಿ, ಸನಾತನ ಧರ್ಮದ ದೇವರೊಬ್ಬನನ್ನು ಹೃದಯದಲ್ಲಿ ತುಂಬಿಕೊಂಡು ಸದಾ ಭಕ್ತಿಯಲ್ಲಿ ತಲ್ಲೀನರಾಗಿರುತ್ತಿದ್ದರು.

ಅವರಿಗೆ ತಮ್ಮ ಜಾತಿಯಾಗಲಿ (ಮೇಲ್ಜಾತಿ ಅಥವಾ ಕೆಳಜಾತಿ) ಪಂಗಡ ಗಳಾಗಲಿ (ಮುಂದುವರಿದ ಅಥವಾ ಹಿಂದುಳಿದ), ಲಿಂಗವಾಗಲಿ (ಪುರುಷ ಅಥವಾ ಸ್ತ್ರೀ), ಶಿಕ್ಷಣವಾಗಲೀ (ಅರ್ಹತೆ ಇರುವುದು ಅಥವಾ ಇಲ್ಲದಿರುವುದು) ಅಥವಾ ಸಾಮರ್ಥ್ಯವಾಗಲಿ (ಇರುವುದು ಅಥವಾ ಇಲ್ಲದಿರುವುದು) ಇತ್ಯಾದಿ ಬಾಹ್ಯ ಅಂಶಗಳು ಹೃದಯದಲ್ಲಿ ಭಕ್ತಿರಸವನ್ನು ತುಂಬಿಕೊಂಡು ಮೋಕ್ಷ ಸಂಪಾದನೆ ಮಾಡುವಲ್ಲಿ ಯಾವುದೇ ತೊಡಕನ್ನುಂಟುಮಾಡಲಿಲ್ಲ.

ಕುಂಬಾರ ಜಾತಿಯ ಗೋರಕುಂಬಾರ, ಮಾಲಿಕೆಲಸ ಮಾಡುತ್ತಿದ್ದ ಸಾವತ, ಅಸ್ಪೃಶ್ಯ ಜನಾಂಗದ ಚೋಕ, ಚಿನಿವಾರನಾದ ನರಹರಿ ಸೊನಾಲ್, ದರ್ಜಿ ವೃತ್ತಿಯ ನಾಮದೇವ, ಕ್ಷೌರಿಕ ಸೇನಾನ್‌ಹವಿ, ಬೆಸ್ತಕುಲದ ಅಡಿಪತ್ತರ್, ಈಡಿಗ ವೃತ್ತಿಯ ಎನಡಿನಾಥ, ಮಡಿವಾಳ ಕುರಿಪ್ಪು ತೊಂಡರ್, ಬೇಟೆಗಾರ ಬೇಡರ ಕಣ್ಣಪ್ಪ, ಕುರಿಗಾಹಿ ಕನಕದಾಸ, ಶೂದ್ರ ಜನಾಬಾಯಿ, ಬ್ರಾಹ್ಮಣಳಾದ ಕುರೂರು ಅಮ್ಮ, ಕ್ಷತ್ರಿಯ ಮೀರಾಬಾಯಿ, ವೈಶ್ಯ ಪುರಂದರ ದಾಸ, ಮುಸ್ಲಿಂ ಕಬೀರದಾಸ, ಜೈನ ತಿರುಜ್ಞಾನ ಸಬಂದರ್ ಮುಂತಾದ ಪ್ರತಿಯೊಬ್ಬರೂ ಬೇರೆ ಬೇರೆ ಜಾತಿ, ಪಂಗಡ, ಕುಲ, ಗೋತ್ರ, ವೃತ್ತಿಗಳ ಹಿನ್ನೆಲೆಯಿಂದ ಬಂದವರು. ಆದರೆ ಈ ಪುಣ್ಯ ಹೃದಯಿಗಳ ಜೀವಾತ್ಮ ಮಾತ್ರ ಅತ್ಯಂತ ಪರಿಶುದ್ಧವಾದುದು. ಅವರ ಹೃದಯ ಸಿಂಹಾಸನದಲ್ಲಿ ಆಸೀನವಾಗಿದ್ದ ದೇವರನ್ನು ಕುರಿತಾದ, ಅವರ ಶ್ರದ್ಧಾಭಕ್ತಿ ಅನುಪಮವಾದದ್ದು; ತಮ್ಮ ಸ್ವ ಸಂತೋಷಕ್ಕೆ ತಮ್ಮ ಇಷ್ಟದೇವತೆಯನ್ನು ಕುರಿತು ತಮ್ಮ ತಮ್ಮ ಮಾತೃಭಾಷೆಯಲ್ಲಿಯೇ ಸಾರ್ವಜನಿಕ ಸ್ಥಳಗಳಲ್ಲೋ, ದೇವಸ್ಥಾನಗಳಲ್ಲಿ ದೇವರ ಮುಂದೆಯೋ, ಮಠಗಳಲ್ಲೋ, ಛತ್ರಗಳಲ್ಲೋ ಹೃದಯ ತುಂಬಿ ಹಾಡಿದರು. ಆ ಮೂಲಕ ಸಾರ್ವಜನಿಕರಲ್ಲಿ ಆಧ್ಯಾತ್ಮಿಕತೆಯನ್ನು, ಭಕ್ತಿಯನ್ನು ತುಂಬಿದರು.



ದೇವರ ಪ್ರತಿನಿಧಿಗಳೆಂದು ಸಾರ್ವಜನಿಕರಿಂದ ಮನ್ನಿಸಲ್ಪಟ್ಟ ಇಂತಹ ಅವತಾರ ಪುರುಷರು ಬೇರೆ ಬೇರೆ ಕಾಲಘಟ್ಟಗಳಲ್ಲಿ ಜನ್ಮ ತಾಳಿ ತಮ್ಮ ಸುತ್ತಲಿನ ಜನಮಾನಸವನ್ನು ತಿದ್ದಿದರು. ತಮ್ಮ ಮಾತು ಮತ್ತು ಕೃತಿಗಳಿಂದ ಜನರ ಬದುಕನ್ನು ವಿಸ್ತರಿಸಿ ಸದ್ದಿಲ್ಲದೆ ಮರೆಯಾದರು. ಕೆಲವರು ಜೀವಂತ ಮರೆಯಾದರೆ, ಮೀರಾ, ಮಧ್ವಾಚಾರ್ಯ, ಪೂಂತಾನಂ ನಂಬೂದಿರಿ, ನಾಮದೇವ, ಅಭಿನವ ಗುಪ್ತ, ಜ್ಞಾನದೇವ, ತುಕಾರಾಮ, ನಂದನಾರ್ ಮೊದಲಾದವರು ಜನರ ಉಪಯೋಗಕ್ಕಾಗಿ ತಮ್ಮ ಉಪದೇಶ, ಹಾಡುಗಳು ಮೊದಲಾದವನ್ನು ಗುರುತುಳಿಸಿ ಹೋದರು. ಮಂತ್ರಾಲಯದ ಗುರು ರಾಘವೇಂದ್ರ ಸ್ವಾಮಿ, ಶಿರಡಿಯ ಸಾಯಿಬಾಬಾ, ತಿರುವೊಟ್ಟಿಯೂರ್‌ನ ಪತ್ತಿನತ್ತರ್ ಮುಂತಾದ ಕೆಲವರು ಸಮಾದಿಸ್ಥರಾಗಿ ಅಲ್ಲಿಂದಲೇ ತಮ್ಮ ಪ್ರಭಾವವನ್ನು ಭಕ್ತರ ಮೇಲೆ ಬೀರಿದರು.

ತಮ್ಮ ನಿಷ್ಕಲ್ಮಷ ಶುದ್ಧ ಭಾವದಿಂದಾಗಿ ಅವರು ಯಾವಾಗ ಬೇಕೆಂದಾಗ ದೇವರೊಂದಿಗೆ ಸಂಭಾಷಿಸುವ ಚೈತನ್ಯ ಪಡೆದುಕೊಂಡಿದ್ದರು. ಅವರಲ್ಲಿ ಬಹಳಷ್ಟು ಮಂದಿ ಭಕ್ತಿಯ ಅಥವಾ ತಾತ್ವಿಕ ವಿಚಾರಗಳ ಸಂವಹನಕ್ಕೆ ಸಂಗೀತವನ್ನು ಒಂದು ಮಾಧ್ಯಮವಾಗಿ ಬಳಸಿಕೊಂಡರು. ಹಿಂದೂಧರ್ಮದ ಬೇರೆ ಬೇರೆ ದೇವರುಗಳನ್ನು ತಮ್ಮ ಅಧಿದೈವವಾಗಿ ಪರಿಗಣಿಸಿಕೊಂಡ ಅವರು ಆತನ ಲೀಲಾವಿನೋದಗಳನ್ನು ಹಾಡಿಹೊಗಳುತ್ತಿದ್ದರು. ಉದಾಹರಣೆಗೆ ಗಣೇಶನನ್ನು ಅವ್ವೆಯಾರ್, ಬಾಲಕೃಷ್ಣನನ್ನು ಮೀರಾಬಾಯಿ, ಹಸುಳೆ ಕೃಷ್ಣನನ್ನು ಕುರೂರ್ ಅಮ್ಮ, ಶ್ರೀರಾಮನನ್ನು ತುಳಸೀದಾಸ, ವಿಠೋಬನನ್ನು ತುಕಾರಾಮ, ಶ್ರೀ ವೆಂಕಟೇಶ್ವರನನ್ನು ಅಣ್ಣಮಯ್ಯ, ಕಾಳಿ ದೇವತೆಯನ್ನು ರಾಮಕೃಷ್ಣ ಪರಮಹಂಸ, ಹರಿಯನ್ನು ಆಳ್ವಾರರು ಮತ್ತು ಹರಿದಾಸರು, ಶಿವನನ್ನು ನಾಯನ್ಮಾರರು, ಸುಬ್ರಹ್ಮಣ್ಯ ಅಥವಾ ಕಾರ್ತಿಕೇಯನನ್ನು ಅರುಣಗಿರಿ ನಾಥರ್, ಗುಹ ಅಥವಾ ಸುಬ್ರಹ್ಮಣ್ಯನನ್ನು ಮುತ್ತುಸ್ವಾಮಿ ದೀಕ್ಷಿತರ್, ತಮ್ಮ ರಚನೆಗಳ ಮೂಲಕ ಹಾಡಿಹೊಗಳಿದರು. ಎಲ್ಲರ ಉದ್ದೇಶ ಒಂದೇ– ತಮ್ಮ ಇಷ್ಟದೇವರ ಅನುಭೂತಿಯನ್ನು ಭಕ್ತಿಯ ಮೂಲಕ ತೋರ್ಪಡಿಸಿ ಆತ್ಮಸಂತೋಷ ಸಾಧಿಸಿ ಕೊಳ್ಳುವುದು.

**ಸ್ಮೃತಿ:**

ಒಬ್ಬ ಮನುಷ್ಯ ಯಾವಾಗ ದೇವರು ತನ್ನಲ್ಲಿರುವನೆಂಬ ಅತಿಮಾನುಷ ಶಕ್ತಿಯನ್ನು ಪ್ರದರ್ಶಿಸುತ್ತಾನೋ, ಆಗ, ಅದು ನನ್ನಿಂದ ಪ್ರೇರಿತವಾಗಿ ಬಂದಿದೆ ಎಂಬುದನ್ನು ತಿಳಿ– ಮಹಾಭಾರತ

* ಎಲ್ಲಿ ವೈಭವ, ಸಂಪತ್ತು, ಕೀರ್ತಿ, ಶೌರ್ಯ, ಶಕ್ತಿ, ಪ್ರತಾಪ, ಸೌಂದರ್ಯ, ಚೇತನ, ಗೌರವ, ದಾನ, ತ್ಯಾಗ, ಸತ್ಯ ನಿಷ್ಠೆ– ಮೊದಲಾದವು ಕಂಡು ಬರುವವೋ ಅದು ನನ್ನದೇ ಪ್ರಕಟರೂಪವೆಂಬದನ್ನು ತಿಳಿ.

–ಶ್ರೀಮದ್ ಭಗವದ್ಗೀತಾ ೧೧–೧೬–೪೦.

* ಯಾವ ಜೀವಿ ವೈಭವ, ಬುದ್ಧಿಶಕ್ತಿ ಮತ್ತು ಚೈತನ್ಯ ಶಕ್ತಿಯನ್ನು ಪ್ರದರ್ಶಿಸುತ್ತದೋ ಅದು ನನ್ನ ಚೇತಸ್ಸಿನ ಒಂದು ಭಾಗ ಎಂಬುದನ್ನು ತಿಳಿ.

–ಶ್ರೀಮದ್ ಭಗವದ್ಗೀತಾ ೧೦.೪೧

* * * *



# ೨. ಶ್ರೇಷ್ಠ ಆಧ್ಯಾತ್ಮಿಕ ವ್ಯಕ್ತಿಗಳ ಪರಿಚಯ

**ಶ್ರೀ ಅಣ್ಣಮಾಚಾರ್ಯ** ಅಥವಾ ಅಣ್ಣಮಯ್ಯ. **೧೪೦೮–೧೫೦೩,** ತಾಳ್ಳಪಾಕ್ಕಂ ಗ್ರಾಮ, ಕಡಪ ಜಿಲ್ಲೆ, ಆಂಧ್ರಪ್ರದೇಶ.

ಈ ಸಂತ ಕವಿ ತನ್ನ ಹದಿನಾರನೇ ವರ್ಷದಿಂದ ಮಾತೃಭಾಷೆ ತೆಲುಗಿನಲ್ಲಿ ಭಕ್ತಿಗೀತೆಗಳನ್ನು ರಚಿಸಿ ಹಾಡತೊಡಗಿದ. ತನ್ನ ರಚನೆಗಳಿಂದಾಗಿ ಆತನಿಗೆ 'ಪದಕವಿ ಪಿತಾಮಹುಡು' ಅಥವಾ 'ತೆಲುಗು ಪದಕಾವ್ಯದ ಪಿತಾಮಹ' ಎಂಬ ಬಿರುದು ಲಭ್ಯವಾಯಿತು. ಜನಸಾಮಾನ್ಯರ ಮೇಲೆ ಅಗಾಧ ಪರಿಣಾಮ ಬೀರಿದುದರಿಂದ ಆತನನ್ನು 'ಪ್ರಜಾಕವಿ' ಎಂದೂ ಕರೆಯುತ್ತಾರೆ. ಸುಮಾರು ೩೨ ಸಾವಿರ ಸಂಕೀರ್ತನೆಗಳನ್ನು ಈ ಭಕ್ತ ರಚಿಸಿದ್ದಾನೆಂಬ ಐತಿಹ್ಯವಿದ್ದರೂ ಲಭ್ಯವಾಗಿರುವುದು ಸುಮಾರು ೧೨ ಸಾವಿರ ರಚನೆಗಳು. ಪಾಪನಾಶಕ ಎಂದೇ ಹೆಸರಾಗಿರುವ ತಿರುಮಲ ತಿರುಪತಿಯ ಭಗವಾನ್ ವೆಂಕಟರಮಣ ಅಥವಾ ವೆಂಕಟೇಶ್ವರ(ಕೃಷ್ಣ)ನನ್ನು 'ಏಡು ಕೊಂಡಲವಾಡ' (ಏಳು ಪರ್ವತಗಳ ಒಡೆಯ) ಎಂದೇ ಆತ ಕೀರ್ತಿಸುತ್ತಾನೆ. ಈ ಅಂಕಿತದಿಂದಲೇ ಆತನ ಬಹುತೇಕ ರಚನೆಗಳು ಕೊನೆಗೊಳ್ಳುತ್ತವೆ.

'ದೇವರು ಒಬ್ಬನೇ' ಅಥವಾ 'ಬ್ರಹ್ಮ ಒಕ್ಕಟ್ಟೇ' ಎಂಬುದು ಆತನ ಪ್ರಸಿದ್ಧ ಕೀರ್ತನೆಗಳಲ್ಲಿ ಒಂದು. ಈ ಸಂತ ಕವಿಯ ಜೋಗುಳ ಹಾಡುಗಳಿಗೆ ಮಹಾದೇವ ವೆಂಕಟೇಶ್ವರನು ಮಲಗಿ ನಿದ್ರಿಸುತ್ತಿದ್ದ ಮತ್ತು ಏಳುತ್ತಿದ್ದ ಎಂಬ ಐತಿಹ್ಯಗಳಿವೆ.

**ಶ್ರೀ ಅಭಿನವಗುಪ್ತ, ೯೭೫–೧೦೨೫ ಕಾಶ್ಮೀರ:**

ಈತನ ಆರಂಭಿಕ ಜೀವನದ ಬಗ್ಗೆ ಮಾಹಿತಿ ಇಲ್ಲ. ಸುಪ್ರಸಿದ್ಧ ವೇದಾಂತ ಗುರುಗಳಾದ ಶಂಭುನಾಥ ಎಂಬಾತನ ಶಿಷ್ಯನಾಗಿದ್ದನೆಂದು ತಿಳಿದುಬರುತ್ತದೆ. ಆದರೆ ಆತ ಇನ್ನೂ ಹಲವಾರು ಗುರುಗಳ ಶಿಷ್ಯವೃತ್ತಿ ಸ್ವೀಕರಿಸಿದ್ದ ಮತ್ತು ವ್ಯಾಪಕವಾಗಿ ಸಂಚಾರ ಮಾಡಿದವನೆಂದು ತಿಳಿದುಬರುತ್ತದೆ. ಕಾಶ್ಮೀರೀ ಶೈವಮತ ಸ್ಥಾಪಕರಲ್ಲಿ ಈತ ಪ್ರಮುಖ. ಈತ ಅದ್ವೈತ ಪ್ರತಿಪಾದಕನಾದರೂ ಶ್ರೀ ಶಂಕರಾಚಾರ್ಯರ ಅದ್ವೈತ ಮತಕ್ಕಿಂತ ಈತನದು ಭಿನ್ನವಾದುದು. ಈ ಜಗತ್ತು ಸತ್ಯವಾದುದು ಮತ್ತು ಅನಂತ ವೈವಿಧ್ಯಗಳಿಂದ ಕೂಡಿದೆ. ಆದರೆ ಅದೂ ಶ್ರೇಷ್ಠ ಶಿವನಿಗಿಂತ ಭಿನ್ನವಾದುದೇನಲ್ಲ ಎಂದು ಆತ ಹೇಳಿದ. ಈತ ಒಬ್ಬ ಅಸ್ಖಲಿತ ಸಾಹಿತಿ. ಸುಮಾರು ಐವತ್ತಕ್ಕಿಂತ

ಹೆಚ್ಚು ಕೃತಿಗಳು ಈತನ ಹೆಸರಲ್ಲಿವೆ. ಈತನ ಪ್ರಸಿದ್ಧ ಕೃತಿ "ತಂತ್ರ–ಆಲೋಕ" (ತಂತ್ರದ ಮೇಲೆ ಒಂದು ಬೆಳಕು). ಇದು ಆಗಮಿಕ ಶೈವ ಶಾಸ್ತ್ರ ಮತ್ತು ತಂತ್ರದ ಅನ್ವಯ ಶಾಸ್ತ್ರ ಹಾಗೂ ಪೂಜಾ ವಿಧಿವಿಧಾನಗಳ ಮೇಲೆ ಬೆಳಕು ಚೆಲ್ಲುತ್ತದೆ. ಈತನ ಇನ್ನೊಂದು ಪ್ರಸಿದ್ಧ ಕೃತಿ 'ಬೋಧ ಪಂಚದಶಿಕಾ' ಅಥವಾ ಜ್ಞಾನದ ಹದಿನೈದು ವಚನಗಳು. ಸ್ಥಳೀಯ ಐತಿಹ್ಯದ ಪ್ರಕಾರ ತನ್ನ ಒಂದು ಸಾವಿರದ ಇನ್ನೂರು ಅನುಯಾಯಿಗಳೊಂದಿಗೆ ಕಾಶ್ಮೀರದ ಮಗಂ ಗ್ರಾಮದಲ್ಲಿರುವ ಭೈರವ ಗುಹೆಯನ್ನು ಹೊಕ್ಕ ಬಳಿಕ ಅವರನ್ನು ಮರಳಿ ಕಂಡವರಿಲ್ಲ.

**ಅವ್ವಯ್ಯಾರ್, ಕ್ರಿ.ಪೂ. ೨ನೇ ಶತಮಾನ (ಸಂಗಂ ಯುಗ), ತಿರುವಣ್ಣಾಮಲೈ, ಮದುರೆ, ತಮಿಳುನಾಡು:**

ಎರಡು ಸಾವಿರ ವರುಷಗಳ ಹಿಂದೆ ಜೀವಿಸಿದ್ದ ಈಕೆ ಗಣೇಶನ ಮಹಾಭಕ್ತೆ ಮತ್ತು ಚಕಿತಗೊಳಿಸುವ ಜ್ಞಾನ ಸಂಪನ್ನೆ. ತನ್ನ ಮೂರನೇ ವರ್ಷಕ್ಕೆ "ನಿನ್ನ ಪಾದಕೆ, ನಿನ್ನ ಪಾದಕೆ, ನನ್ನ ಆತ್ಮ ಸಮರ್ಪಣೆ" ಎಂದು ಭಕ್ತಿ ಭಾವದಿಂದ ಗಣಪತಿಯನ್ನು ಆರಾಧಿಸತೊಡಗಿದವಳು. ಆಕೆಯ ನಿಜನಾಮ ಯಾರಿಗೂ ತಿಳಿಯದು. ಐತಿಹ್ಯದ ಪ್ರಕಾರ ಮದುವೆಯಾಗುವುದರಿಂದ ತಪ್ಪಿಸಿಕೊಳ್ಳಲು ತನ್ನ ಸುಂದರ ಕಾಯವನ್ನು ಮುದುಕಿಯಾಗಿ ಪರಿವರ್ತಿಸಿಕೊಂಡಾಕೆ. ಜನರು ಗೌರವ ಭಾವದಿಂದ ಈ ಭಕ್ತ ಸಂತಳನ್ನು 'ಅವ್ವಯಾರ್' ಅಥವಾ 'ಅಜ್ಜಿ' ಎಂದೇ ಕರೆದರು. ಸಣ್ಣ ವಯಸ್ಸಿನಲ್ಲೇ ಆಕೆ ಕುಟುಂಬವನ್ನು ತೊರೆದು ಊರೂರು ಸುತ್ತತೊಡಗಿದಳು. ಮತ್ತು ಎಲ್ಲ ಕಡೆಗಳಲ್ಲಿರುವ ಸುಬ್ರಹ್ಮಣ್ಯ, ಗಣೇಶ ಮತ್ತು ಶಿವ ದೇವಸ್ಥಾನಗಳನ್ನು ಸಂದರ್ಶಿಸಿದಳು. ನೈತಿಕತೆ ಮತ್ತು ಆಧ್ಯಾತ್ಮಿಕತೆಗಳನ್ನು ಪ್ರತಿಪಾದಿಸುವ ನೂರಾರು ಕೀರ್ತನೆಗಳನ್ನು ರಚಿಸಿದಳು. ಆಕೆ ಬರೆದ 'ಆತ್ತಿಚ್ಚೂಡಿ' ಹಾಡುಗಳು ತುಂಬಾ ಪ್ರಸಿದ್ಧವಾಗಿವೆ. ಆಕೆಯ ಬುದ್ಧಿಮತ್ತೆ ಮತ್ತು ಜ್ಞಾನವನ್ನು ಪರೀಕ್ಷಿಸಲು ಕಾರ್ತಿಕೇಯನು ತನ್ನ ಮಧುರವಾದ ಬಾಲ್ಯಸ್ವರದಿಂದ ಆಕೆಗೆ ನಾಲ್ಕು ಪ್ರಶ್ನೆಗಳನ್ನು ಹಾಕಿದನು. "ಅಜ್ಜಿ, ನನಗೆ ನಿನ್ನ ಸಿಹಿಯಾದ ಮಾತುಗಳನ್ನು ಕೇಳಬೇಕಾಗಿದೆ. ನಿನ್ನ ಜ್ಞಾನವನ್ನು ಅರಿಯಬೇಕಾಗಿದೆ. ಜಗತ್ತಿನ ಕಲ್ಯಾಣಕ್ಕಾಗಿ ನಾಲ್ಕು ಪ್ರಶ್ನೆಗಳನ್ನು ಕೇಳುತ್ತೇನೆ: ದಯವಿಟ್ಟು ಉತ್ತರಿಸು: ೧. ಕಷ್ಟವಾದುದು ಯಾವುದು? ೨. ಸಿಹಿಯಾದುದು ಯಾವುದು?, ೩. ದೊಡ್ಡದು ಯಾವುದು? ೪. ಅಪರೂಪವಾದುದು ಯಾವುದು? ಈ ನಾಲ್ಕೂ ಪ್ರಶ್ನೆಗಳಿಗೂ ಅವ್ವಯ್ಯಾರ್ ನಾಲ್ಕು ದೀರ್ಘ ಹಾಡುಗಳ ಮೂಲಕ ಉತ್ತರಿಸುತ್ತಾಳೆ. ಸಂಕ್ಷಿಪ್ತವಾಗಿ,

೧. ಬಡತನ ಕಡುಕಷ್ಟ. ಅದರಲ್ಲೂ ಚಿಕ್ಕಪ್ರಾಯದಲ್ಲಿ ಬರುವ ಬಡತನವಂತೂ ವರ್ಣಿಸಲಸದಳ. ಕಷ್ಟವೆಂಬುದು ಪರಸ್ಪರ ನಂಬಿಕೆ ಇರದ ದಂಪತಿಯಂತೆ.



ಕಡುಕಷ್ಟವೆಂಬುದು ನಿಮ್ಮನ್ನು ಪ್ರೀತಿಸದವರ ಕಡೆಯಿಂದ ಆಹಾರ ತೆಗೆದುಕೊಂಡಂತೆ.

೨. ಏಕಾಂತವೆಂಬುದು ಸಿಹಿ. ತುಂಬಾ ಸಿಹಿಯೆಂದರೆ, ಆ ಏಕಾಂತದಲ್ಲಿ ದೇವರನ್ನು ಪೂಜಿಸುವುದು. ಇನ್ನೂ ಸಿಹಿಯೆಂದರೆ ಜೊತೆಗೆ ಗುರುವೊಬ್ಬನಿರುವುದು. ಮತ್ತೂ ಸಿಹಿಯೆಂದರೆ ತನ್ನಂತರಂಗದೊಳಗೆ ಹಗಲೂ ರಾತ್ರಿ ಶೋಧಿಸಿಕೊಳ್ಳುವುದು.

೩. ಈ ಜಗತ್ತು ದೊಡ್ಡದು. ಆದರೆ ಜಗತ್ತಿನ ಸೃಷ್ಟಿಕರ್ತ ಬ್ರಹ್ಮನಾಗಿರುವನು. ಬ್ರಹ್ಮನು ವಿಷ್ಣುವಿನ ನಾಭಿಯಿಂದ ಬಂದಿರುವನು. ವಿಷ್ಣುವಾದರೋ ಭಕ್ತರ ಹೃದಯದಲ್ಲಿ ನೆಲೆಸಿರುವವನು. ಆದ್ದರಿಂದ ಭಕ್ತನೇ ಅತ್ಯಂತ ದೊಡ್ಡವನು.

೪. ಅಪರೂಪವೆಂದರೆ ಮನುಷ್ಯ ಜನ್ಮ. ಇನ್ನೂ ಅಪರೂಪವೆಂದರೆ ಜ್ಞಾನಿಯಾದ ಮನುಷ್ಯ ಜನ್ಮ. ಇನ್ನೂ ಅಪರೂಪವಾದದ್ದೆಂದರೆ ಭಕ್ತಿ ಮತ್ತು ತ್ಯಾಗದಿಂದೊಡಗೂಡಿದ ಜ್ಞಾನ. ಪ್ರಚಲಿತ ನಂಬಿಕೆಗಳ ಪ್ರಕಾರ ಭಗವಾನ್ ಗಣೇಶನು ತನ್ನ ಸೊಂಡಿಲಿನಿಂದ ನೇರವಾಗಿ ಆಕೆಯನ್ನು ಕೈಲಾಸಕ್ಕೆ ಎತ್ತಿ ಕೂರಿಸಿಕೊಂಡನಂತೆ.

ಆಕೆ ಹೇಳಿದಳು: "ನಾವು ತಿಳಿದಿರುವುದು ಒಂದು ಹಿಡಿ ಮಣ್ಣಿನಷ್ಟು, ತಿಳಿಯ ಬೇಕಾಗಿರುವುದು ಈ ಜಗತ್ತಿನಷ್ಟು."

**ಶ್ರೀ ಅರುಣಗಿರಿ ನಾಥರ್ (ಕ್ರಿ.ಶ. ೧೪–೧೫ನೇ ಶತಮಾನ), ತಿರುವಣ್ಣಾಮಲೈ, ತಮಿಳುನಾಡು:**

ಸಣ್ಣ ವಯಸ್ಸಿನಲ್ಲಿಯೇ ತಂದೆ–ತಾಯಿಗಳನ್ನು ಕಳೆದುಕೊಂಡ ಬಾಲಕ ಬೀದಿಬೀದಿಯಲ್ಲಿ ಬೆಳೆಯುತ್ತ ಎಲ್ಲ ಕೆಟ್ಟ ಅಭ್ಯಾಸಗಳನ್ನೂ ರೂಢಿಸಿಕೊಂಡ. ಸ್ವಚ್ಛಂದ ಬದುಕಿನಿಂದಾಗಿ ಕಾಲಕ್ರಮೇಣ ಜೀವನದಲ್ಲಿ ಜುಗುಪ್ಸೆ ಬಂತು. ಆತನ ಅನೈತಿಕ ಬದುಕನ್ನು ಬದಲಿಸಿ ಒಬ್ಬ ಪುಣ್ಯಪುರುಷನನ್ನಾಗಿ ಪರಿವರ್ತಿಸುವಲ್ಲಿ ಆತನ ಅಕ್ಕನ ಪಾತ್ರ ಬಹಳ ದೊಡ್ಡದು. ತನ್ನ ತಪ್ಪಿನ ಅರಿವಾಗಿ, ಆರಾಧ್ಯದೈವ ಸುಬ್ರಹ್ಮಣ್ಯನ ಪಾದಪದ್ಮಗಳಲ್ಲಿ ಬಿದ್ದು ಸಂಪೂರ್ಣ ಶರಣಾಗತನಾದ ಈ ಸಂತಕವಿ ಸುಮಾರು ಹದಿನಾರು ಸಾವಿರದಷ್ಟು ಕೀರ್ತನೆಗಳನ್ನು ರಚಿಸಿರುವನೆಂದು ತಿಳಿದು ಬಂದಿದ್ದು, ಕೇವಲ ೧೩೧೧ ಮಾತ್ರ ಉಪಲಬ್ಧ ಇವೆ. ಏಕಾಗ್ರ ಚಿತ್ತದಿಂದ ಸುಬ್ರಹ್ಮಣ್ಯನನ್ನು ಹಾಡುಗಳ ಮೂಲಕ ಭಜಿಸುತ್ತ ಊರೂರು ಅಲೆದ. ತನ್ನ ಅಜರಾಮರ ಹಾಡುಗಳ ಮೂಲಕ ಭಕ್ತರ ಹೃದಯದಲ್ಲಿ ಆತ ನೆಲೆಸಿದ್ದಾನೆ.

ತಮಿಳಿನಲ್ಲಿ ಆತನ ಒಂಬತ್ತು ಪ್ರಮುಖ ಕೃತಿಗಳು ಲಭ್ಯ ಇವೆ. ವಿಶ್ವಾತ್ಮಕ ವಸ್ತು ಮತ್ತು ದೈನಂದಿನ ಜೀವನಕ್ಕೆ ಸಂಬಂಧಿಸಿದ ನುಡಿಗಟ್ಟುಗಳುಳ್ಳ ಆತನ 'ತಿರುಪ್ಪುಗಳ್' ಭಕ್ತಿಭಾವದಿಂದ ರಸಾರ್ದ್ರವಾಗಿವೆ. ಸಂಗೀತದ ಗಂಧದಿಂದ ಭಾವುಕರ

ಹೃದಯದಲ್ಲಿ ಚಿರಸ್ಥಾಯಿಯಾಗಿ ಉಳಿಯಬಲ್ಲ ಆ ಹಾಡುಗಳು ಮನಸ್ಸಿನಲ್ಲಿ ಆಧ್ಯಾತ್ಮಿಕ ಭಾವವನ್ನು ಸ್ಫುರಿಸುತ್ತವೆ. ತಮಿಳುನಾಡಿನಲ್ಲಿರುವ ಎಲ್ಲ ಸುಬ್ರಹ್ಮಣ್ಯ ದೇವಸ್ಥಾನಗಳನ್ನು ಸಂದರ್ಶಿಸುತ್ತ ಜನಪದರ ಸರಳ ಸುಂದರ 'ಇಶೈ ತಮಿಳು' ಭಾಷೆಯಲ್ಲಿ ಆಶುಕವಿತ್ವದಿಂದ ಹಾಡುಗಳನ್ನು ರಚಿಸುತ್ತ ಆತ ಸಾಗಿದ. ಸುಬ್ರಹ್ಮಣ್ಯನ (ಮುರುಗ ಅಥವಾ ಕಾರ್ತಿಕೇಯ) ದಯೆಯಿಂದ ತಾನು ಹಾಡುತ್ತಿದ್ದೇನೆ. ಅವನೇ ತನ್ನಲ್ಲಿ ನೆಲೆಸಿದ್ದಾನೆಂದು ಆತ ಹೇಳುತ್ತಿದ್ದ. ಕಂಥರ್ ಅಲಂಗಾರಂ, ಕಂದರ್ ಅನುಭೂತಿ, ಕಂಥರ್ ಅಂದಾದಿ ಮೊದಲಾದವು ಆತನ ಪ್ರಮುಖ ರಚನೆಗಳು. ಕೊನೆಯ ರಚನೆ ನಾಲ್ಕು ಸಾಲುಗಳ ನೂರು ಪದ್ಯಗಳನ್ನು ಒಳಗೊಂಡಿರುವ ಒಂದು ಗುಚ್ಛ. ಪ್ರತಿಯೊಂದು ಚೌಪದಿಯ ಮೊದಲ ಪದ ಒಂದೇ ಆಗಿದ್ದು, ಪ್ರತಿಯೊಂದು ಕಡೆಯೂ ಬೇರೆ ಬೇರೆ ಅರ್ಥಗಳನ್ನು ಕೊಡುವುದು ಅದರ ವಿಶೇಷತೆ. ಐತಿಹ್ಯವೊಂದರ ಪ್ರಕಾರ, ರಾಜನಿಗೆ ಪಾರಿಜಾತ ಹೂ ತಂದು ಕೊಡುವುದಾಗಿ ತನ್ನ ಯೌಗಿಕ ಶಕ್ತಿಯಿಂದ ಗಿಳಿಯೊಂದರ ದೇಹವನ್ನು ಪ್ರವೇಶಿಸಿ ರಾಜನಿಗೆ ಪಾರಿಜಾತ ಹೂ ತಂದುಕೊಟ್ಟನಂತೆ. ಆದರೆ ಹೂ ತರುವಷ್ಟರಲ್ಲಿ ಆತನ ವಿರೋಧಿಗಳು ಆತ ಬಿಟ್ಟುಹೋಗಿದ್ದ ದೇಹವನ್ನು ಅರ್ಧ ಸುಟ್ಟು ಹಾಕಿದ್ದರಂತೆ. ಅನಂತರ ಗಿಳಿಯ ದೇಹದಲ್ಲೇ ಆತನ ಜೀವಾತ್ಮ ಉಳಿಯಬೇಕಾಗಿ ಬಂದು, ಅಲ್ಲಿಂದಲೇ ದೇವರೊಂದಿಗೆ ಐಕ್ಯ ಹೊಂದಿದನಂತೆ. ಪಾಪಾತ್ಮನೂ ಪಶ್ಚಾತ್ತಾಪದಿಂದ ದಗ್ಧನಾದರೆ ಆತ್ಮಸಾಕ್ಷಾತ್ಕಾರದ ತುಟ್ಟ ತುದಿ ತಲಪಬಲ್ಲನೆಂಬುದನ್ನು ಆತನ ಬದುಕು ಸಂಕೇತಿಸುತ್ತದೆ.

ಆತ ಹಾಡಿದ–

"ಕೇವಲ ಓದಿನಿಂದ, ಶಿಕ್ಷಣದಿಂದ ಪರಮಾತ್ಮನ ದರ್ಶನ ಸಾಧ್ಯವಿಲ್ಲ; ಕೇವಲ ಕಾಯಕದಿಂದಲೂ ಆತ ದೊರೆಯಲಾರ; ಯಾವ ರೀತಿಯಿಂದಲೂ ಆತನನ್ನು ವರ್ಣಿಸಲು ಸಾಧ್ಯವಿಲ್ಲ; ಹೃದಯ ನಿರ್ಮಲವಾಗಿರದವರಿಗೆ, ಶುದ್ಧಾಂತಃಕರಣ ಇರದವರಿಗೆ ಆತನನ್ನು ಊಹಿಸಲೂ ಸಾಧ್ಯವಿಲ್ಲ. ಭಕ್ತರ ಹೃದಯದಲ್ಲಿ ಮಾತ್ರ ಆತ ಸದಾ ನೆಲೆಸುತ್ತಾನೆ."

**ಆಳ್ವಾರರು (ಅ):**

ತಮಿಳಿನಲ್ಲಿ 'ಆಳ್ವಾರ್' ಎಂದರೆ ದೈವೀಪ್ರೇಮದ ಅನುಭವದಲ್ಲಿ ಮಿಂದವರು ಎಂದಾಗಿದೆ. ಒಬ್ಬ ಮಹಿಳೆಯೂ ಸೇರಿದಂತೆ ಒಟ್ಟು ಹನ್ನೆರಡು ಮಂದಿ ಇರುವ ಆಳ್ವಾರರು ಭಕ್ತಿಯೋಗದಲ್ಲಿ ಮುಳುಗಿದವರು. ಇವರೆಲ್ಲರೂ ತಮಿಳುನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಕ್ರಿ.ಶ. ೭ರಿಂದ ೯ನೇ ಶತಮಾನದ ಕಾಲಘಟ್ಟದಲ್ಲಿ ಕಂಡುಬಂದರಲ್ಲದೆ, ಸಮಾಜದ ಬೇರೆ ಬೇರೆ ಜಾತಿ ಪಂಗಡಗಳಿಗೆ ಸೇರಿದವರು.



ಭಗವಾನ್ ವಿಷ್ಣುವಿನ ಭಕ್ತರಾದ ಇವರ ರಚನೆಗಳಲ್ಲಿ ಭಕ್ತಿಭಾವಾರ್ಚನೆಯ ನವೀನತೆಯನ್ನು ಕಾಣಬಹುದು. ಮಹಾವಿಷ್ಣುವಿನ ಅವತಾರಗಳನ್ನು ಹಾಡಿ ಹೊಗಳುವ ಬಹು ಸುಂದರ ಕಾವ್ಯಗಳನ್ನು ಅವರು ರಚಿಸುತ್ತ ಒಂದು ಪುಣ್ಯಸ್ಥಳದಿಂದ ಇನ್ನೊಂದು ಪುಣ್ಯಸ್ಥಳಕ್ಕೆ ಸಂಚರಿಸುತ್ತಿದ್ದರು.

ಬೇರೆ ಬೇರೆ ಕಾಲಘಟ್ಟಗಳಲ್ಲಿ ಮತ್ತು ಪ್ರದೇಶಗಳಲ್ಲಿ ರಚನೆಯಾಗಿ ಹರಿದು ಹಂಚಿಹೋಗಿದ್ದ ಅವನ್ನೆಲ್ಲ ಸಂಗ್ರಹಿಸಿ ಸಂಪಾದಿಸಿ "ನಾಲಾಯಿರ ದಿವ್ಯಪ್ರಬಂಧಂ' (ನಾಲ್ಕು ಸಾವಿರ ದಿವ್ಯ ಪ್ರಬಂಧಗಳು) ಎಂಬ ಹೆಸರಿನಿಂದ ಸಂತ ನಾಥಮುನಿ ಎಂಬಾತ ಪ್ರಕಟಪಡಿಸಿದ. ಭಕ್ತಿಭಾವ ಜಿನುಗುವ ಈ ಸಾಹಿತ್ಯ ನಿಜವಾಗಿಯೂ ಶ್ರೇಷ್ಠ ಗ್ರಂಥಗಳೇ ಸರಿ. ನಾಲ್ಕು ವೇದಗಳ ಸಾರವನ್ನು ಈ ಸಾಹಿತ್ಯ ಒಳಗೊಂಡಿದೆ.

**ಹನ್ನೆರಡು ಆಳ್ವಾರರ ಹೆಸರುಗಳು:**

೧. **ಪೊಯ್ಗೈ ಆಳ್ವಾರ್:–** 'ಸಾರಯೋಗಿ' ಅಥವಾ 'ಪದ್ಮಮುನಿ' ಎಂಬ ಹೆಸರಿನಿಂದಲೂ ಕರೆಯಲ್ಪಡುವ ಈತ ೭ನೇ ಶತಮಾನಕ್ಕೆ ಸೇರಿದವನು. ಕಾಂಚೀಪುರಂನಲ್ಲಿ ಹುಟ್ಟಿದ. ಈತನ ಹಾಡುಗಳನ್ನು 'ಮುದಲ್ ತಿರುವಂದಾದಿ' ಎಂಬ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಈತನನ್ನು ಮಹಾವಿಷ್ಣುವಿನ ಪಾಂಚಜನ್ಯದ ಅವತಾರವೆಂದು ನಂಬಲಾಗಿದೆ.

೨. **ಪೂದತ್ ಆಳ್ವಾರ್:–** ಕ್ರಿ.ಶ. ೭ನೇ ಶತಮಾನದಲ್ಲಿ ಚೆನ್ನೈಯ ಮೈಲಾಪುರದಲ್ಲಿ ಜನಿಸಿದ ಈತನನ್ನು 'ಭೂತಯೋಗಿ' ಎಂದೂ ಕರೆಯಲಾಗಿದೆ.

೩. **ಪೇಯ್ ಆಳ್ವಾರ್:–** ೭ನೇ ಶತಮಾನಕ್ಕೆ ಸೇರಿದ ಈತನನ್ನು ಬೃಂದಯೋಗಿ ಎಂದು ಕರೆಯಲಾಗಿದೆ. ಚೆನ್ನೈಯ ಮೈಲಾಪುರದಲ್ಲಿ ಜನಿಸಿದ. ಮಹಾವಿಷ್ಣುವಿನ ಖಡ್ಗ ನಂದಕನ ಅಪರಾವತಾರ ಎಂದು ಭಾವಿಸಲಾಗಿದೆ.

೪. **ತಿರುಮಳಿಸೈ ಆಳ್ವಾರ್:–** ಈತ ಕೂಡ ೭ನೇ ಶತಮಾನಕ್ಕೆ ಸೇರಿದವನು. ಮಳಿಸೈ ಪಿರಾನ್ ಎಂಬ ಉಪನಾಮಧೇಯ ಕೂಡ ಈತನಿಗಿದೆ. ಚೆನ್ನೈ ಬಳಿ ತಿರುಮಳಿಸೈ ಎಂಬಲ್ಲಿ ಜನಿಸಿದ ಈತ ತನ್ನ ತಾತ್ವಿಕ ಚಿಂತನೆಗಳಿಂದಾಗಿ ಪ್ರಸಿದ್ಧವಾಗಿದ್ದಾನೆ. 'ನಾನ್ ಮುಹನ್ ತಿರುವಂದಾದಿ' ಮತ್ತು 'ತಿರುಚಂದ ವಿರುತ್ತಮ್' ಈತನ ಪ್ರಸಿದ್ಧ ಕೃತಿಗಳು. ಮಹಾವಿಷ್ಣುವಿನ ಸುದರ್ಶನ ಚಕ್ರದ ಅವತಾರ ಎಂದು ಈತನನ್ನು ನಂಬಲಾಗಿದೆ.

೫. **ತಿರುಮಂಗೈ ಆಳ್ವಾರ್:–** ೮ನೇ ಶತಮಾನಕ್ಕೆ ಸೇರಿದ ಈತನನ್ನು ಕಲಿಯನ್ ಅಥವಾ ಮಂಗಯರ್‌ಕೋಣೆ ಎಂದೂ ಕರೆಯುತ್ತಾರೆ. ತಮಿಳುನಾಡಿನ ತಿರುಕುರಯಾಲೂರು ಎಂಬಲ್ಲಿ ಜನಿಸಿದ. ಆರಂಭದಲ್ಲಿ ಹೆದ್ದಾರಿ ದರೋಡೆಕೋರನಾಗಿದ್ದ. ಈತ ಅನಂತರ ಋಷಿಯಾಗಿ ಪರಿವರ್ತಿತನಾದ. ಈತನ ಆರು

ಕೃತಿಗಳನ್ನೂ ವೇದಾಂಗಗಳೆಂದು ಭಾವಿಸಲಾಗಿದೆ. ಅವುಗಳೆಂದರೆ– ೧. ಪೆರಿಯ ತಿರುಮೊಳಿ, ೨. ತಿರುಕ್ಕುರುದ್ದಾಂಡಹಂ, ೩. ತಿರುನೇಡು ದಾಂಡಹಂ, ೪. ತಿರುವಳು ಕೂತ್ತಿರುಕ್ಕೈ, ೫. ಸಿರಿಯ, ೬. ಪೆರಿಯ ತಿರುಮಡಲ್.

ಮಹಾವಿಷ್ಣುವಿನ ಆಯುಧ ಸಾರಂಗ (ಖಡ್ಗ)ದ ಅವತಾರವೆಂದು ಈತನನ್ನು ಪರಿಗಣಿಸಲಾಗಿದೆ.

**೬. ತೊಂಡರಡಿಪ್ಪೊಡಿ ಆಳ್ವಾರ್:–** ವಿಪ್ರನಾರಾಯಣರ್ ಅಥವಾ ತಿರುಮಂಡಂಗುಡಿಯಾರ್ ಎಂದೂ ಹೇಳಲಾಗುವ ಈ ಆಳ್ವಾರ್ ೮ನೇ ಶತಮಾನಕ್ಕೆ ಸೇರಿದವನು. ತಮಿಳುನಾಡಿನ ತಿರುಮಂಡಂಗುಡಿ ಪ್ರಾಂತಕ್ಕೆ ಸೇರಿದವನಾಗಿದ್ದು, ಈತನ 'ತಿರುಮಾಲೈ' ಮತ್ತು 'ತಿರುಪ್ಪಳ್ಳಿ ಎಳಿಚ್ಚಿ' ಕೃತಿಗಳು ತುಂಬ ಪ್ರಸಿದ್ಧವಾಗಿದೆ.

ಮಹಾವಿಷ್ಣುವಿನ ಕಂಠಹಾರ ವನಮಾಲೆಯ ಅವತಾರ ಈತನೆಂದು ಹೇಳಲಾಗಿದೆ.

**೭. ಕುಲಶೇಖರ ಆಳ್ವಾರ್:–** ಕೇರಳದ ಕೋಗುನಂಗಲ್ಲೂರಿನ ತಿರುವಂಜಿ ಕುಳಂನಲ್ಲಿ ಕ್ರಿ.ಶ. ೮ನೇ ಶತಮಾನದಲ್ಲಿ ಹುಟ್ಟಿದ ಈತನನ್ನು ಕೂಡಲನಾಯಕನ್ ಎಂದೂ ಕರೆಯುತ್ತಾರೆ. ಈತ ರಾಜನಾಗಿದ್ದ. ಈತನ ಕೃತಿಗಳಾದ 'ಪೆರುಮಾಳ್ ತಿರುಮೊಳಿ' ಮತ್ತು 'ಮುಕುಂದಮಾಲಾ' ತುಂಬ ಪ್ರಸಿದ್ಧವಾಗಿವೆ.

ಮಹಾವಿಷ್ಣುವಿನ ರತ್ನಖಚಿತ ಕಂಠೀಹಾರ ಕೌಸ್ತುಭದ ಅವತಾರ ಈತನೆಂದು ಹೇಳಲಾಗಿದೆ.

**೮. ತಿರುಪ್ಪಾಣಾಳ್ವಾರ್:–** ತಮಿಳುನಾಡಿನ ಉರೈಯೂರಿನಲ್ಲಿ ಕ್ರಿ.ಶ. ೮ನೇ ಶತಮಾನದಲ್ಲಿ ಹುಟ್ಟಿದ ಈತ ಪಾಣಾರ್ ಅಥವಾ ಮುನಿವಾಹನಾರ್ ಎಂದೂ ಪ್ರಸಿದ್ಧನಾಗಿದ್ದಾನೆ. ಕೀಳು ಜಾತಿಯಲ್ಲಿ ಹುಟ್ಟಿದವನಾದರೂ ಶ್ರೀರಂಗಂನ ಭಗವಾನ್ ರಂಗನಾಥನನ್ನು 'ಅಮಲನಾದಿಪಿರಾನ್' ಎಂದು ಸಂಬೋಧಿಸಿ ಹತ್ತು ಭಕ್ತಿಗೀತೆಗಳನ್ನು ರಚಿಸಿದ್ದಾನೆ. ಮಹಾವಿಷ್ಣುವಿನ ಶ್ರೀವತ್ಸನ ಅವತಾರ ಈತನೆಂದು ಹೇಳಲಾಗಿದೆ.

**೯. ನಮ್ಮಾಳ್ವಾರ್:–** ತಿರುನಗರಿಯಲ್ಲಿ (ಕುರುಹೂರು) ಕ್ರಿ.ಶ. ೯ನೇ ಶತಮಾನದಲ್ಲಿ ಹುಟ್ಟಿದ ಈತ 'ಶಡಗೋಪಂ' ಅಥವಾ 'ಪರಾಂಕುಶಂ' ಎಂಬ ಹೆಸರುಗಳಿಂದಲೂ ಪ್ರಸಿದ್ಧನಾಗಿದ್ದಾನೆ. ಈತನ ಕುರಿತು ಹೆಚ್ಚಿನ ಮಾಹಿತಿಯನ್ನು ಅ–೨ರಲ್ಲಿ ನೀಡಲಾಗಿದೆ. ಮಹಾವಿಷ್ಣುವಿನ ದಂಡನಾಯಕನಾದ ವಿಶ್ವಕ್ಸೇನನ ಅವತಾರ ಈತ ಎನ್ನಲಾಗಿದೆ.

**೧೦. ಮಧುರ ಕವಿ ಆಳ್ವಾರ್:–** ಕ್ರಿ.ಶ. ೯ನೇ ಶತಮಾನದಲ್ಲಿ ತಮಿಳುನಾಡಿನ ತಿರುಕ್ಕೋಳೂರಿನಲ್ಲಿ ಕುಲೀನ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಈತನನ್ನು ಆಳ್ವಾರುಕ್ಕು



ಅಡಿಯಾನ್ ಎಂದೇ ಕರೆಯಲಾಗಿದೆ. ಈತನ ಕೃತಿ 'ಕಣ್ಣಿಣುನ್ಸಿರುತ್ತಾಂಪು' ತುಂಬ ಪ್ರಸಿದ್ಧವಾಗಿದೆ. ಸಂತ ನಮ್ಮಾಳ್ವಾರರ ಶಿಷ್ಯನಾದ ಈತ ಧಾರ್ಮಿಕ ಪ್ರವಚನಗಳಿಗಾಗಿ ಹೆಸರಾದವನು.

ಈತನನ್ನು ಮಹಾವಿಷ್ಣುವಿನ ವಾಹನ ವೈನತೇಯ ಅಥವಾ ಗರುಡನ ಅವತಾರವೆಂದು ಭಾವಿಸಲಾಗಿದೆ.

**೧೧. ಪೆರಿಯ ಆಳ್ವಾರ್:–** ಕ್ರಿ.ಶ. ೯ನೇ ಶತಮಾನದಲ್ಲಿ ಹುಟ್ಟಿದ ಈತನನ್ನು ವಿಷ್ಣುಚಿತ್ತನ್ ಅಥವ ಶ್ರೀವಲ್ಲಿಪುತ್ತೂರನ್ ಎಂದು ಕರೆಯಲಾಗುತ್ತಿದ್ದು, ಈತನ 'ತಿರುಪ್ಪಲ್ಲಾಂಡು' ಹಾಗೂ 'ತಿರುಮೋಳಿ' ಕೃತಿಗಳು ತುಂಬಾ ಪ್ರಸಿದ್ಧವಾಗಿವೆ. ಈತ ತಮಿಳುನಾಡಿನ ಶ್ರೀವಳ್ಳಿ ಪುತ್ತೂರು ಎಂಬ ಪ್ರದೇಶಕ್ಕೆ ಸೇರಿದವನು.

ಮಹಾವಿಷ್ಣುವಿನ ರಥ ಗರುಡನ ಅವತಾರವೆಂದು ಹೇಳಲಾಗಿದೆ.

**೧೨. ಆಂಡಾಳ್ ಅಥವಾ ಗೋದೈ:–** ಚೂಡಿಕೊಡುತ್ತ ನಾಚಿಯಾರ್ ಅಥವಾ ಗೋದೈ ಪಿರಾಟ್ಟಿ ಎಂದು ಕರೆಯಲಾಗುವ ಈಕೆ ಕ್ರಿ.ಶ. ೯ನೇ ಶತಮಾನದಲ್ಲಿ ಶ್ರೀವಳ್ಳಿ ಪುತ್ತೂರಿನಲ್ಲಿ ಜನಿಸಿದಳು. ಈಕೆಯನ್ನು ಮಹಾವಿಷ್ಣುವಿನ ಅರ್ಧಾಂಗಿ ಭೂದೇವಿಯ ಅವತಾರವೆಂದು ಭಾವಿಸಲಾಗಿದೆ. ಕೆಳಗೆ ಅ–೧ರಲ್ಲಿ ಈಕೆಯ ಬಗೆಗಿನ ವಿಸ್ತೃತ ಚಿತ್ರಣ ನೀಡಲಾಗಿದೆ (ಸಂಖ್ಯೆ ೯ ಮತ್ತು ೧೨ರ ಕುರಿತು ಹೆಚ್ಚಿನ ಮಾಹಿತಿ).

**ಭಕ್ತೆ ಆಂಡಾಳ್ (ಅ–೧), ಕ್ರಿ.ಶ. ೯ನೇ ಶತಮಾನ, ಮಧುರೆ, ತಮಿಳುನಾಡು:**

ಪೆರಿಯ ಆಳ್ವಾರರ (ಸಂಖ್ಯೆ ೧೧) ಮಗಳಾಗಿ ತಮಿಳುನಾಡಿನ ಮಧುರೆಯ ಶ್ರೀವಳ್ಳಿ ಪುತ್ತೂರಿನಲ್ಲಿ ಜನಿಸಿದ ಈ ಭಕ್ತೆ, ಆರಂಭದಲ್ಲಿ ತುಳಸೀಗಿಡದ ಬುಡದಲ್ಲಿ ಪ್ರಾರ್ಥಿಸುತ್ತಿದ್ದವಳನ್ನು ಗೋದೈ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಕೃಷ್ಣನನ್ನು ಪರಮಸುಂದರ ಕೃಷ್ಣರೂಪದಲ್ಲಿ ಆರಾಧಿಸುತ್ತಿದ್ದ ಈಕೆಯನ್ನು ಆಂಡಾಳ್ ಎಂದು ಕರೆದರು. ಆಂಡಾಳ್ ಎಂದರೆ ದೇವರ ಹೃದಯವನ್ನು ಗೆದ್ದು, ಆತನನ್ನು ಬೇಕಾದಂತೆ ಆಳುವವರು ಎಂದು ಅರ್ಥ. ಈಕೆ ತಮಿಳಿನಲ್ಲಿ 'ತಿರುಪ್ಪಾವೈ' ಎಂಬ ಮೂವತ್ತು ಹಾಡುಗಳನ್ನು, ಮಕರ ಮಾಸದಲ್ಲಿ ದಿನಕ್ಕೊಂದರಂತೆ ಬರೆದಳು. ಆರಾಧ್ಯ ದೈವ ಕೃಷ್ಣನ ಕುರಿತು ೧೪೩ ವಚನಗಳುಳ್ಳ 'ನಾಚ್ಚಿಯಾರ್ ತಿರುಮೊಳಿ' (ತರುಣಿಯೊಬ್ಬಳ ಪವಿತ್ರ ಹಾಡುಗಳು)ಯನ್ನು ಈಕೆ ಬರೆದಿದ್ದು, ಇದು ಕೂಡ ತುಂಬಾ ಪ್ರಸಿದ್ಧವಾಗಿದೆ. ಆಕೆಯ ಕೃಷ್ಣಭಕ್ತಿ ಎಷ್ಟು ಅಪಾರವಾದದ್ದೆಂದರೆ ಆಕೆ 'ಕೃಷ್ಣಾ' ಎಂದರೆ ಆತ ಕರಗಿ ನೀರಾಗುತ್ತಿದ್ದನಂತೆ! ನಾಚಿಕೆಯೆಂಬುದರ ಲವಲೇಶವಿಲ್ಲದೆ ಕೃಷ್ಣನೊಂದಿಗೆ ಆತ್ಮಗತವಾಗುವ ಆಕೆಯ ವಿವರಣೆ ಶೃಂಗಾರದ ತುಟ್ಟತುದಿಯಲ್ಲಿದೆ. "ಆತನನ್ನಲ್ಲದೆ ತಾನು ಬೇರಾರನ್ನೂ ವರಿಸಲಾರೆ" ಎಂದು ಆಕೆ ಶಪಥ ಮಾಡಿದ್ದಳು.

ಸ್ಥಳೀಯ ಐತಿಹ್ಯವೊಂದರ ಪ್ರಕಾರ ಕೃಷ್ಣ, ಆಕೆ ಧರಿಸಿದ್ದ ಹಾರವನ್ನು ಬೇಡಿದನಂತೆ!

**ಶ್ರೀ ನಮ್ಮಾಳ್ವಾರ್ (೮–೨), ತಮಿಳುನಾಡಿನ ತಿರುನಲ್ವೇಲಿ:**

ಕ್ರಿ.ಶ. ೯ನೇ ಶತಮಾನಕ್ಕೆ ಸೇರಿದವನು. ತಿರುನಲ್ವೇಲಿಯ ತಿರುಕ್ಕುರುಹೂರು (ಇಂದು ಅದನ್ನು ಆಳ್ವಾರ್ ತಿರುನಗರಿ ಎಂದು ಕರೆಯಲಾಗುತ್ತಿದೆ) ಎಂಬಲ್ಲಿ ಮಾರನ್ ಜಾತಿಯ ಸದ್ಭಕ್ತರಾದ ಕಾರಿಯಾರ್ ಮತ್ತು ಉದಯನಂಗೈಯಾರ್ ದಂಪತಿಗಳಿಗೆ ಹುಟ್ಟಿದ ಈತನಿಗೆ ಆರಂಭದಲ್ಲಿ ಮಾರನ್ ಎಂದು ಹೆಸರಿಡಲಾಗಿತ್ತು. ಹುಟ್ಟಿದಾಗ ಈತ ಅಳಲಿಲ್ಲ, ಕಣ್ಣುಗಳನ್ನು ತೆರೆಯಲಿಲ್ಲ. ತಾವೇನೋ ಪಾಪ ಮಾಡಿದ್ದರಿಂದ ಇಂತಹ ಮಗುವೊಂದು ಹುಟ್ಟಿದೆ ಎಂಬ ತಪ್ಪಿತಸ್ಥ ಮನೋಭಾವ ಹೊಂದಿದ ದಂಪತಿಗಳು ಗುಣಪಡಿಸಲೋಸುಗ ಮಗುವನ್ನು ಸ್ಥಳೀಯ ನಂಬಿಕೆಯ ಪ್ರಕಾರ ಹತ್ತಿರದ ದೇವಸ್ಥಾನದ ಬಳಿಯ ಹುಣಸೆ ಮರವೊಂದರ ಬುಡದಲ್ಲಿ ಕೂರಿಸುತ್ತಿದ್ದರಂತೆ. ಹಾಗೆಯೇ ಹದಿನಾರು ವರ್ಷಗಳು ಕಳೆದುಹೋದವು. ಆಶ್ಚರ್ಯವೆಂದರೆ ಪರ್ಯಟನ ಮಾಡುತ್ತ ಅಲ್ಲಿಗೆ ಬಂದ ಸಂತ ಮಧುರಕವಿ ಈ ಬಾಲಕನ ತಲೆಯ ಮೇಲೆ ಕೈಯಾಡಿಸಿ, ಆಧ್ಯಾತ್ಮಿಕ ಪ್ರಶ್ನೆಯೊಂದನ್ನು ಕೇಳುತ್ತಿದ್ದಂತೆ, ಬಾಲಕ ಕಣ್ಣು ತೆರೆದು ಮಾತಾಡಲು ಆರಂಭಿಸಿದನಂತೆ! ಮುಂದೆ ಈತ ಬಹುದೊಡ್ಡ ಸಂತನಾಗಿ ಶಡಗೋಪ ಅಥವಾ ಪರಾಂಕುಶ ಎಂಬ ಹೆಸರನ್ನು ಹೊಂದಿದ. ಆದರೆ ನಮ್ಮಾಳ್ವಾರ್ ಎಂದೇ ಪರಿಚಿತನಾದ. ಮಹಾವಿಷ್ಣುವಿನ ದಂಡನಾಯಕನಾದ ವಿಶ್ವಕ್ಸೇನನ ಅವತಾರವೆಂದು ಈತನನ್ನು ಕರೆಯಲಾಗಿದೆ. ಆಳ್ವಾರರ ಪೈಕಿ ಅತ್ಯುನ್ನತ ಸಾಧನೆ ಸಿದ್ಧಿ ಮಾಡಿದ್ದರಿಂದ ಈತನನ್ನು 'ಆಳ್ವಾರರ ಕುಲಪತಿ' ಎಂದು ಹೇಳಲಾಗಿದೆ.

ಈತನ ಹಾಡುಗಳ ಪ್ರಖ್ಯಾತ ಕೃತಿಗಳೆಂದರೆ

೧. ತಿರುವಿರುತ್ತಂ

೨. ತಿರುವಾಸಿರಿಯಂ

೩. ಪೆರಿಯ ತಿರುವಂದಾದಿ

೪. ತಿರುವಾಯ್‌ಮೊಳಿ

–ಇದು ಅತ್ಯಂತ ದೀರ್ಘವಾಗಿದ್ದು, ಆತನ ಕೊನೆಯ ಕೃತಿ. ಇದಕ್ಕೆ ಸಾಮವೇದಕ್ಕೆ ಸಮನಾದ ಸ್ಥಾನಮಾನ ನೀಡಲಾಗಿದೆ.

ಈತನ ಎಲ್ಲ ಕೃತಿಗಳೂ ವೇದಕ್ಕೆ ಸಮ ಎಂದು ಪರಿಗಣಿತವಾಗಿದೆ. "ಪೂಜಿಸು, ಓ ಮಾನವನೇ, ಆತ ಬ್ರಹ್ಮ ಇರಲಿ, ವಿಷ್ಣು ಇರಲಿ, ಶಿವ ಇರಲಿ, ಅವರ ಕುರಿತು ಧ್ಯಾನಿಸು, ಅವರ ಕುರಿತು ತಿಳಿದುಕೋ, ಮತ್ತೆ ಮತ್ತೆ ಅವರನ್ನು ಭಕ್ತಿಯಿಂದ



ಆರಾಧಿಸು, ಹಾಡು. ಆರಾಧನೆ ಯಾವುದೇ ಇರಲಿ, ಅದು ಆತನನ್ನು ಸೇರುತ್ತದೆ" ಎಂದು ಆತ ಘೋಷಿಸಿದ.

**ಶ್ರೀ ಬಸವೇಶ್ವರ, (ಕ್ರಿ.ಶ. ೧೧೩೧–೧೧೬೭)**

ಕರ್ನಾಟಕ ರಾಜ್ಯದ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ಎಂಬಲ್ಲಿ ಬ್ರಾಹ್ಮಣ ಕುಲದಲ್ಲಿ ಮಾದಲಾಂಬೆ ಎಂಬಾಕೆಯ ಮಗನಾಗಿ ಜನಿಸಿದ. ಶಿವನನ್ನು ಆರಾಧ್ಯದೈವವಾಗಿ ಹಾಡಿಹೊಗಳಿದ ಈತ ತೀರ ಭಿನ್ನವಾದ ಓರ್ವ ಕವಿ. ಶಿವನ ವಾಹನ ನಂದಿಯ ಅವತಾರವೆಂದು ಈತನನ್ನು ವರ್ಣಿಸಲಾಗಿದೆ. ತನ್ನ ಎಂಟನೇ ವರ್ಷಕ್ಕೆ ಪ್ರಾಪಂಚಿಕ ಜೀವನದ ಬಗ್ಗೆ ನಿರಾಸಕ್ತನಾದ ಈತ, ಕೃತ್ರಿಮವಾದ ವ್ಯವಸ್ಥೆಗಳನ್ನು ಮತ್ತು ಜಾತಿ ಪದ್ಧತಿಯನ್ನು ವಿರೋಧಿಸಿದ. ಜಾತಿ ಮತಗಳ ಆಧಾರದಲ್ಲಿ ಬೇಲಿ ನಿರ್ಮಿಸಿಕೊಂಡು ಬೇರೆಬೇರೆಯಾಗುವುದನ್ನು ಆತ ಟೀಕಿಸಿದ. ಅಸ್ಪೃಶ್ಯರೊಂದಿಗೂ ಆತ ಬೆರೆತ ಮತ್ತು ಅಂತರ್ಜಾತೀಯ ವಿವಾಹಗಳನ್ನು ಏರ್ಪಡಿಸಿದ. ಆತ ವೀರಶೈವ (ಲಿಂಗಾಯತ) ಎಂಬ ಮತವನ್ನು ಸ್ಥಾಪಿಸಿ ಭಕ್ತಿಯ ಹಾದಿಯಲ್ಲಿ ಎಲ್ಲ ಮನುಜರೂ ಒಂದೇ ಎಂದು ಪ್ರತಿಪಾದಿಸಿದ. ದೇವರ ಭಕ್ತನೇ ಎಲ್ಲ ಜಾತಿಗಿಂತಲೂ ಶ್ರೇಷ್ಠ ಎಂದು ಹೇಳಿದ. ಕೆಲಕಾಲ ಆತ ಕಲಚೂರಿ ಬಿಜ್ಜಳನಲ್ಲಿ ಮಂತ್ರಿಯಾಗಿದ್ದ. 'ಅನುಭವ ಮಂಟಪ' ಎಂಬ ಆಧ್ಯಾತ್ಮಿಕ ಮಹಾಮನೆ ಸ್ಥಾಪಿಸಿ ಧರ್ಮ, ಮತ, ದೇವರ ಕುರಿತಾದ ಚರ್ಚೆಗಳನ್ನು ಏರ್ಪಡಿಸುತ್ತಿದ್ದ. ಸರಳ ಜೀವನ ಮತ್ತು ಸಮಾನತೆ ಪ್ರತಿಪಾದಿಸಿದ. ಸಹೋದರತ್ವ ಮತ್ತು ಸ್ವಾತಂತ್ರ್ಯವನ್ನು ಒತ್ತಿ ಹೇಳಿದ. ದೇವರಿಗೆ ಬಲಿಕೊಡುವುದನ್ನು, ಉಪವಾಸ ಆಚರಿಸುವುದನ್ನು, ಹಬ್ಬ ಹರಿದಿನಗಳ ಹೆಸರಲ್ಲಿ ಮೂಢನಂಬಿಕೆಗಳನ್ನು ವಿರೋಧಿಸಿದ. ಸದ್ಗುಣವೇ ಸ್ವರ್ಗ ಮತ್ತು ಕಾಯಕವೇ ಕೈಲಾಸ ಎಂದು ನುಡಿದಂತೆ ನಡೆದು ತೋರಿಸಿದ. "ಮೌಢ್ಯದ ಅಂಧಕಾರವನ್ನು ಜ್ಞಾನ ಶಕ್ತಿಯು ತೊಡೆದು ಹಾಕುತ್ತದೆ" ಎಂದ. ಬೆಳಕು ಕತ್ತಲೆಯನ್ನು ಓಡಿಸುತ್ತದೆ. ಬೆಳಕಿನ ಶಕ್ತಿಯು ಅಸತ್ಯವೆಂಬ ಕತ್ತಲೆಯನ್ನು ಓಡಿಸುತ್ತದೆ.

"ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿ ಇರುವುದೊಬ್ಬನೇ ದೇವ– ಕೂಡಲಸಂಗಮ ದೇವ" ಎಂದು ಆತ ಹಾಡಿದ. "ಒಂದು ಸಾರಿ ಶರಣಾಗತನಾಗಿ ಓ! ದೇವರೇ ಎಂದರೆ ಎಲ್ಲ ಪಾಪಗಳೂ ಓಡಿ ಹೋಗುತ್ತವೆ" ಎಂದ.

**ಶ್ರೀ ಚೈತನ್ಯ (೧೪೮೬–೧೫೩೩), ಪಶ್ಚಿಮ ಬಂಗಾಲದ ನವದ್ವೀಪದ ಮಾಯಾಪುರ:**

ಈತನ ನಿಜವಾದ ಹೆಸರು ವಿಶ್ವಂಭರ. ಆದರೆ ಚೈತನ್ಯ ಎಂಬ ಹೆಸರಿನಿಂದ ಪ್ರಸಿದ್ಧನಾದ. ಕೃಷ್ಣನ ಅವತಾರವೆಂದು ನಂಬಲಾದುದರಿಂದ ಕೃಷ್ಣ ಚೈತನ್ಯ ಎಂದೇ ಹೆಸರಾದ. ಕೃಷ್ಣಭಕ್ತನಾದುದರಿಂದ ಕೃಷ್ಣನನ್ನು ಸ್ತುತಿಸುವ ಎಂಟು ವಚನಗಳಿರುವ

'ಕೃಷ್ಣಾಷ್ಟಕ'ವನ್ನು ತನ್ನ ಮಾತೃಭಾಷೆ ಬಂಗಾಳಿಯಲ್ಲಿ ರಚಿಸಿದ. ಕೃಷ್ಣನ ಬಗೆಗೆ ಅದಮ್ಯ ಶ್ರದ್ಧಾಭಕ್ತಿಯಿದ್ದುದರಿಂದ ಭಾವನಿರ್ಭರವಾದ ಆ ರಚನೆಗಳನ್ನು ಕೃಷ್ಣನ ಸಂಕೀರ್ತನೆ ಎಂದೇ ಕರೆಯಲಾಗಿದೆ. ಆತನದು ಭಕ್ತಿ ಪಂಥ. ದೇವರಲ್ಲಿ ಸಂಪೂರ್ಣ ಶರಣಾಗತಿಯನ್ನು ಪ್ರತಿಪಾದಿಸಿದ. ದೇಶದ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಭಾಗಗಳಲ್ಲಿ ಆತ ಸಂಚರಿಸಿದ. ಮತ್ತು ಹೋದೆಡೆಯಲ್ಲೆಲ್ಲಾ ಧಾರ್ಮಿಕ ಮೆರವಣಿಗೆಯನ್ನು ಏರ್ಪಡಿಸುತ್ತಿದ್ದ. ಸಾಮೂಹಿಕವಾಗಿ ಕೃಷ್ಣಮಂತ್ರ ಜಪಿಸುತ್ತ ದೇವರ ಪ್ರೀತಿಯನ್ನು ಸಂಪಾದಿಸಲು ಪ್ರಚೋದಿಸಿದ. ಈ ಚಳವಳಿ 'ಚೈತನ್ಯ ಚಳವಳಿ' ಎಂದು ಪ್ರಸಿದ್ಧವಾಯಿತು. ದೇಹವನ್ನು ತಾಳಕ್ಕೆ ತಕ್ಕಂತೆ ಕುಣಿಸುತ್ತ ಸಾಮೂಹಿಕವಾಗಿ ಕೃಷ್ಣ ಭಜನೆ ಮಾಡುವುದು ಈ ಪಂಥದ ವೈಶಿಷ್ಟ್ಯ. ನಿಸ್ವಾರ್ಥವಾದ ವಿಷ್ಣು ಭಕ್ತಿ ಈ ಚಳವಳಿಯ ಮೂಲ ಗುರಿ. ಹಿಂದೂಗಳು ಮುಸಲ್ಮಾನರು ಎಲ್ಲರೂ ಅವರ ಶಿಷ್ಯರಾದರು. ಇವರಲ್ಲಿ ಕೆಲವರು ದರೋಡೆಕೋರರು ಮತ್ತು ಸೂಳೆಯರೂ ಇದ್ದರು. ಬದುಕಿನ ಬಹುಕಾಲವನ್ನು ಪುರಿಯಲ್ಲಿ ಕಳೆದ ಮತ್ತು ಅಲ್ಲಿ ಸಮುದ್ರ ಹೊಕ್ಕು ತನ್ನ ಬದುಕನ್ನು ನೀಗಿಕೊಂಡ. ಪುರಿಯಲ್ಲಿರುವಾಗ ಹಲವಾರು ಪವಾಡಗಳನ್ನು ಮಾಡಿದ. ಉದಾಹರಣೆಗೆ ಪುರಿಯ ಜಗನ್ನಾಥನ ದೊಡ್ಡದಾದ ರಥವನ್ನು ತನ್ನ ತಲೆಯಿಂದ ಮುನ್ನಡಿಸಿದ; ಕುಷ್ಠರೋಗವನ್ನು ವಾಸಿ ಮಾಡಿದ, ಸತ್ತು ಹೋದ ಮನುಷ್ಯ ಮಾತಾಡುವಂತೆ ಮಾಡಿದ! ಕೃಷ್ಣನಿಗೆ ನೈವೇದ್ಯ ಮಾಡಿದ ಪ್ರಸಾದವನ್ನು ಆತ ಉಣ್ಣುತ್ತಿದ್ದ! "ಕೃಷ್ಣನ ಬಗೆಗಿನ ಭಕ್ತಿಯೇ ಜೀವನದ ಪರಮ ಧ್ಯೇಯ" ಎಂದಾತ ಹೇಳಿದ. ತಾನು ಹುಲ್ಲಿಗಿಂತ ಕನಿಷ್ಠ ಎಂದು ಯಾರು ಭಾವಿಸುತ್ತಾರೋ ಅವರು ಮರಕ್ಕಿಂತಲೂ ಹೆಚ್ಚು ಸಹಿಷ್ಣುಗಳು ಎಂದು ಪ್ರತಿಪಾದಿಸಿದ. ಇತರರಿಂದ ಗೌರವವನ್ನು ಯಾರು ಅಪೇಕ್ಷಿಸುವುದಿಲ್ಲವೋ ಮತ್ತು ಇತರರಿಗೆ ಗೌರವ ಕೊಡುವುದನ್ನೇ ಬಯಸುತ್ತಾರೋ ಅಂಥವರು ದೇವರ ಪುಣ್ಯನಾಮ ಸ್ಮರಣೆ ಮಾಡಲು ಎಲ್ಲ ರೀತಿಯಿಂದಲೂ ಅರ್ಹರಾಗಿರುತ್ತಾರೆ." (ಶಿಕ್ಷಾಷ್ಟಕ–೩)

"ನನಗೇನೂ ಆಸೆಯಿಲ್ಲ ಓ! ದೇವರೇ, ಸಂಪತ್ತಾಗಲೀ, ಸುಂದರ ಹೆಂಗಸರು ಬೇಕೆಂದಾಗಲೀ ಅಥವಾ ಅತ್ಯಂತ ಬುದ್ಧಿವಂತ ಕವಿಯಾಗಲೀ ಆಗಬೇಕೆಂಬ ಆಸೆ ನನಗಿಲ್ಲ. ನನ್ನ ಎಲ್ಲ ಜನ್ಮಗಳಲ್ಲಿಯೂ ನಿನ್ನ ಭಕ್ತನಾಗಿರುವಂತೆ ದಯಪಾಲಿಸು" (ಶಿಕ್ಷಾಷ್ಟಕ–೪)

**ಶ್ರೀ ಚೊಕ್ಕಮಾಲ (೧೨೪೩–೧೩೨೫), ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಮಂಗಳವೇಡಿ.**

ಅಸ್ಪೃಶ್ಯ, ಝಾಡಮಾಲಿಗಳ ಮಹರ್ ಕುಟುಂಬದಲ್ಲಿ ಈತ ಹುಟ್ಟಿದ. ಕುಟುಂಬದ ಎಲ್ಲರೂ ಸಂತರಾಗಿದ್ದರು. ಆತನ ಹೆಂಡತಿ ಸೊಯರಾಬಾಯಿ,



ಆತನ ಅಕ್ಕ ನಿರ್ಮಲ, ಆಕೆಯ ಗಂಡ ಬಾಮಕ ಎಲ್ಲರೂ ಸಂತರಾಗಿ ಪಂಡರಾಪುರದ ಒಡೆಯ ವಿಠೋಬನ (ಕೃಷ್ಣನ) ಭಕ್ತರಾಗಿದ್ದರು. ಮಂಗಳವೇಡಿಯನ್ನು ಬಿಟ್ಟು ಪಂಡರಾಪುರದಲ್ಲಿ ನೆಲಸಿದರು. ದೇವಸ್ಥಾನದ ಹೊರಗೆ ಬಾಗಿಲ ಬಳಿ ಕಣ್ಣಲ್ಲಿ ನೀರು ತುಂಬಿಕೊಂಡು ನಿರ್ಮಲಾಂತಃಕರಣದಿಂದ ತದೇಕಚಿತ್ತದಿಂದ ಕೃಷ್ಣನನ್ನೇ ಕಣ್ಣಿನಲ್ಲಿ ತುಂಬಿಕೊಳ್ಳುತ್ತ ಮರಾಠಿಯಲ್ಲಿ ಭಕ್ತಿಗೀತೆಗಳನ್ನು ರಚಿಸಿ ಹಾಡಿದ. ಅವರು ಎಷ್ಟು ಆಳವಾದ ಭಕ್ತಿಯಿಂದ ಪಂಡರಾಪುರದ ವಿಠೋಬನನ್ನು ಹಾಡಿ, ಹೊಗಳಿ ಭಜಿಸುತ್ತಿದ್ದರೆಂದರೆ ಒಂದು ದಿನ ವಿಠೋಬ ಅವರ ಮನೆಗೆ ಹೋಗುತ್ತಾನೆ. ಚೊಕ್ಕ ಮಾಲನಿಗೆಂದು ತೆಗೆದಿರಿಸಿದ ಆಹಾರವನ್ನು ಸೊಯರಾಬಾಯಿ ವಿಠೋಬನಿಗೆ ನೀಡುತ್ತಾಳೆ.

ಆಗ ವಿಠೋಬ ತಾನಾರೆಂಬುದನ್ನು ತಿಳಿಸಿ, ನಿನಗೆ ಬೇಕಾದ ವರವನ್ನು ಬೇಡು ಎಂದಾಗ, 'ಓ! ದಯಾಮಯನಾದ ಭಗವಂತನೇ, ನಿನ್ನ ಎಂಜಲು ಇರುವ ಈ ತಟ್ಟೆಯಲ್ಲಿ ಉಳಿದಿರುವುದನ್ನು ನನಗೆ ಅನುಗ್ರಹಿಸು!" ಎಂದು ಬೇಡುತ್ತಾಳೆ. ಒಂದು ದಿನ ರಾತ್ರಿ ಭಗವಂತನು ಚೊಕ್ಕಮಾಲನ ಬಳಿ ಬಂದು, ಆತನ ಕೈಹಿಡಿದು ಗರ್ಭಗುಡಿಯ ಒಳಗೆ ಕರೆದುಕೊಂಡು ಹೋಗುತ್ತಾನೆ. ಜೀವಮಾನವಿಡೀ ಯಾವ ಭಗವಂತನ ಅನುಗ್ರಹ ಕಟಾಕ್ಷಕ್ಕಾಗಿ ಕಾದಿದ್ದನೋ ಅದನ್ನು ನೀಡುತ್ತಾನೆ. ವಿಠೋಬನ ದೇವಸ್ಥಾನ ಕಟ್ಟಲಾಗುತ್ತದೆ. ಪ್ರಾಣಪ್ರತಿಷ್ಠೆ ಮಾಡುವ ದಿನ ಭಗವಂತ ಪೀತಾಂಬರ ಉಟ್ಟು ಚೊಕ್ಕಮಾಲನಲ್ಲಿಗೆ ಬರುತ್ತಾನೆ. ಸೋಯರಾಬಾಯಿಯ ಕೈಯಿಂದ ಅಕಸ್ಮಾತ್ತಾಗಿ ಮೊಸರು ಚೆಲ್ಲಿ, ಪೀತಾಂಬರ ಕೊಳೆಯಾಗುತ್ತದೆ. ಸುದ್ದಿ ತಿಳಿದು ದೇವಸ್ಥಾನದ ಅರ್ಚಕ ಬಂದು ನೋಡುತ್ತಾನೆ. ಆಗ ಪಾಂಡುರಂಗನ ರೀತಿಯಲ್ಲಿ ಪೀತಾಂಬರದ ಉಡುಗೆ ತೊಟ್ಟಿದ್ದ ಒಬ್ಬಾತನಿಗೆ ಚೊಕ್ಕಮಾಲ ಉಣ್ಣಿಸುತ್ತಿದ್ದುದನ್ನು ನೋಡಿ ಕೋಪಗೊಂಡು ಚೊಕ್ಕಮಾಲನ ಕೆನ್ನೆಗೆ ಬಾರಿಸುತ್ತಾನೆ. ಆದರೆ ಪೂಜೆಯ ವೇಳೆಗೆ ವಿಠೋಬ ವಿಗ್ರಹದ ಕೆನ್ನೆ ಊದಿಕೊಂಡಿರುವುದು ಅರ್ಚಕನಿಗೆ ಕಾಣಿಸುತ್ತದೆ. ವಿಠೋಬನಿಗೆ ತೊಡಿಸಿದ್ದ ಪೀತಾಂಬರದಲ್ಲಿ ಮೊಸರಿನಿಂದಾಗಿರುವ ಕೊಳೆಯೂ ಕಂಡುಬರುತ್ತದೆ! ತನ್ನ ತಪ್ಪಿನ ಅರಿವಾದ ಅರ್ಚಕ ಚೊಕ್ಕಮಾಲನನ್ನು ಗರ್ಭಗುಡಿಯೊಳಗೆ ಕರೆದುಕೊಂಡು ಹೋಗಿ ತನಗೆ ಇಷ್ಟ ಬಂದಷ್ಟು ಹೊತ್ತು ಅಲ್ಲಿ ಇದ್ದು ಭಗವಂತನೊಂದಿಗೆ ಅನುಸಂಧಾನ ಮಾಡಲು ಅವಕಾಶ ಮಾಡಿಕೊಡುತ್ತಾನೆ. ಅನಂತರ, ಮುಂದೆ, ಅಲ್ಲೇ ಸಮೀಪದಲ್ಲಿ ಒಂದು ಕಟ್ಟಡ ಕುಸಿದು ಬಿದ್ದಾಗ ಅದರ ಕೆಳಗೆ ಸಿಕ್ಕಿಹಾಕಿಕೊಂಡು ಚೊಕ್ಕಮಾಲ ಸಾಯುತ್ತಾನೆ. ಆತನ ಸಮಕಾಲೀನನಾದ, ಇನ್ನೊಬ್ಬ ಸಂತ ಭಕ್ತ ಚೊಕ್ಕಮಾಲನ ದೇಹವನ್ನು ಗುರುತಿಸಿ ಹೇಳುತ್ತಾನೆ– "ಈ ಎಲುಬುಗಳು ನಿರಂತರವಾಗಿ 'ವಿಠಲ'–'ವಿಠಲ' ಎಂದು ಭಜಿಸುತ್ತಿವೆ. ಹಾಗಾಗಿ ಚೊಕ್ಕಮಾಲನ ದೇಹ ಇದೇ!"

"ನಿಜವಾದ ಪಂಡರಿನಾಥ ನನ್ನ ದೇಹದಲ್ಲೇ ಇದ್ದಾನೆ. ಅವನ ಆತ್ಮವೂ ನನ್ನ ಆತ್ಮದಲ್ಲೇ ಇದೆ" ಎಂದು ಚೊಕ್ಕಮಾಲ ಹೇಳಿದ. "ದೇವರಿಗೆ ರೂಪ ಇದೆಯೋ ಎಂದರೆ ಇದೆ; ಇಲ್ಲ ಎಂದರೆ ಇಲ್ಲ" ಎಂಬ ಮಾತನ್ನೂ ಆತ ಹೇಳಿದ.

**ಶ್ರೀ ಏಕನಾಥ (೧೫೩೩–೧೬೦೬), ಪೈಠಣ, ಮಹಾರಾಷ್ಟ್ರ:**

ಚಕ್ರಪಾಣಿ ಮತ್ತು ರುಕ್ಮಿಣಿ ಬಾಯಿ ದಂಪತಿಗಳಿಗೆ ಈತ ಏಕಮಾತ್ರ ಪುತ್ರ. ಹಾಗಾಗಿ ಈತನಿಗೆ ಏಕನಾಥ ಎಂಬುದು ಅನ್ವರ್ಥನಾಮ. ಚಿಕ್ಕಂದಿನಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡು ಅಜ್ಜ–ಅಜ್ಜಿಯ ಆಶ್ರಯದಲ್ಲಿ ಬೆಳೆದ. ಆಂತರ್ಯದ ದನಿಗೆ ಓಗೊಟ್ಟು ಗುರುವೊಬ್ಬನನ್ನು ಹುಡುಕುವುದಕ್ಕಾಗಿ ಹನ್ನೆರಡನೇ ವರ್ಷಕ್ಕೆ ಮನೆ ಬಿಟ್ಟು ಓಡಿಹೋಗಿ ಕೊನೆಗೂ ಸದಾನಂದ ಸ್ವಾಮಿ ಎಂಬ ಗುರುವೊಬ್ಬನನ್ನು ಗಳಿಸಿಕೊಂಡ. ಏಕನಾಥ ಒಬ್ಬ ವಿದ್ವಾಂಸ ಹಾಗೂ ಸಂತ ಕವಿಯಾಗಿ ಮಾರ್ಪಟ್ಟ. ಭಗವಾನ್ ವಿಠೋಬ(ಕೃಷ್ಣ)ನ ಭಕ್ತನಾದ. ಭಕ್ತಿಯ ಪರಾಕಾಷ್ಠೆಯಲ್ಲಿ ವಿಠೋಬನೊಂದಿಗೆ ಐಕ್ಯನಾಗುತ್ತಿದ್ದನಲ್ಲದೆ, ಭಾವಾತಿರೇಕದಿಂದ ಕಣ್ಣಲ್ಲಿ ನೀರು ಸುರಿಯುತ್ತಿತ್ತು. ಮರಾಠಿಯಲ್ಲಿ ಭಕ್ತಿ ಗೀತೆಗಳನ್ನು ರಚಿಸಿದ. ಭಕ್ತಿ ಮತ್ತು ಜ್ಞಾನ ಎಂಬುದು ಒಂದು ಗಿಡದ ಹೂ ಮತ್ತು ಹಣ್ಣಿನ ಹಾಗೆ, ಅದನ್ನು ಬೇರ್ಪಡಿಸಲಾಗದು ಎಂದು ಆತ ಹೇಳುತ್ತಿದ್ದ.

ದೈವ ಸಾಕ್ಷಾತ್ಕಾರಗೊಂಡ ಒಬ್ಬ ಸಂತನಾಗಿ, ದೇವರು ಹಾಗೂ ಭಕ್ತನ ನಡುವಣ ವ್ಯತ್ಯಾಸವೇ ಆತನಲ್ಲಿ ಕಾಣಲು ಸಾಧ್ಯವಿರಲಿಲ್ಲ. ಜಾತಿ ಎಂಬುದು ಆತನಲ್ಲಿರಲಿಲ್ಲ. ವಿನಯ ಮತ್ತು ಕರುಣೆ ತುಂಬಿ ತುಳುಕುತ್ತಿತ್ತು. ಭಗವಂತನ ಆರಾಧನೆಗೆಂದು ತಂದಿದ್ದ ನೀರನ್ನು ಒಂದು ದಿನ ಆತ ಬಾಯಾರಿದ ಕತ್ತೆಯೊಂದಕ್ಕೆ ನೀಡಿದ. ಇನ್ನೊಂದು ಸಲ ಆತನ ತಂದೆಯ ಶ್ರಾದ್ಧದ ದಿನ ಬ್ರಾಹ್ಮಣರಿಗೆಂದು ಮಾಡಿದ ಅಡುಗೆಯನ್ನು ಹಸಿದು ಬಂದಿದ್ದ ಅಸ್ಪೃಶ್ಯರಿಗೆ ಬಡಿಸಿದ. ತನ್ನ ಮುಗ್ಧತೆಯಲ್ಲಿ ದೇವರಿದ್ದಾನೆ ಎಂಬ ಮಾತನ್ನು ಸಿದ್ಧಗೊಳಿಸು ಎಂಬುದಾಗಿ ಪೈಠಣದ ಬ್ರಾಹ್ಮಣರು ಒಮ್ಮೆ ಏಕನಾಥನಿಗೆ ಸವಾಲು ಹಾಕಿದಾಗ, ಅಲ್ಲೇ ಸಮೀಪದಲ್ಲಿದ್ದ ಹುಲ್ಲನ್ನು ದೇವಸ್ಥಾನದ ನಂದಿ ವಿಗ್ರಹದೆದುರು ಹಾಕಿ, ತಿನ್ನಬೇಕೆಂದು ಏಕನಾಥ ಬಿನ್ನವಿಸಿಕೊಂಡಾಗ ಕಲ್ಲಿನ ವಿಗ್ರಹದ ನಂದಿ ಹುಲ್ಲನ್ನು ತಿಂದಿತಂತೆ!

"ಎಲ್ಲ ಜೀವಿಗಳಲ್ಲೂ ದೇವರಿದ್ದಾನೆ. ಎಲ್ಲರೊಡನೆ ಒಂದೇ ರೀತಿ ವರ್ತಿಸಬೇಕು" ಎಂದು ಏಕನಾಥ ಹೇಳುತ್ತಿದ್ದ. "ಪ್ರೀತಿಯ ಮೂಲಕ ಭಕ್ತ ಭಗವಂತನಾಗಿ ಮಾರ್ಪಡುತ್ತಾನೆ" ಎಂಬುದು ಆತನ ನೀತಿಯ ಸಾರ. "ಸಮುದ್ರ ಮತ್ತು ಅಲೆ ಇರುವ ಹಾಗೆ ಭಗವಂತ ಮತ್ತು ಭಕ್ತ ಅಭಿನ್ನರು" ಎಂದು ಆತ ಪ್ರತಿಪಾದಿಸಿದ.



**ಶ್ರೀ ಗೋರಕುಂಬಾರ (೧೨೬೭–೧೩೨೦), ತೇರದೋಕಿ, ಕೊಲ್ಹಾಪುರ, ಮಹಾರಾಷ್ಟ್ರ.**

ಮಹಾರಾಷ್ಟ್ರದ ಕೊಲ್ಲಾಪುರ ಬಳಿ ತೇರದೋಕಿ ಎಂಬ ಪ್ರದೇಶದಲ್ಲಿ ಕುಂಬಾರ ಕುಟುಂಬದಲ್ಲಿ ಜನಿಸಿದ. ಚಿಕ್ಕಂದಿನಲ್ಲೇ ಪಂಡರಾಪುರದ ವಿಠೋಬನ ಪರಮ ಭಕ್ತನಾಗಿದ್ದ. ಈತ, ಕಾಲಿನಲ್ಲಿ ಮಣ್ಣನ್ನು ಕಲಸುವಾಗಲೂ ತಾಳ ತಟ್ಟಿಕೊಂಡು ಭಜನೆ ಮಾಡುತ್ತ ಮಣ್ಣು ಕಲಸುತ್ತಿದ್ದ. ಆ ಕ್ಷಣದಲ್ಲಿ ಆತನಿಗೆ ಸುತ್ತಲಿನ ಜಗತ್ತಿನ ಪರಿವೆಯೂ ಇರುತ್ತಿರಲಿಲ್ಲ. ಒಂದು ದಿನ ಭಜನೆ ಮಾಡುತ್ತ ಭಕ್ತಿಯ ಪರಾಕಾಷ್ಠೆಯಲ್ಲಿ ಮಣ್ಣನ್ನು ಕಲಸುತ್ತಿರಬೇಕಾದರೆ ಆತನ ಸ್ವಂತ ಮಗು ಅಂಬೆಗಾಲಿಕ್ಕುತ್ತ ಅಪ್ಪನ ಬಳಿಗೆ ಬಂತು ಮತ್ತು ಕುಂಬಾರ ತಿಳಿಯದೆ ಮಣ್ಣಿನೊಂದಿಗೆ ಮಗುವನ್ನೂ ಕಲಸಿ ತುಳಿದು ಸಾಯಿಸಿಬಿಟ್ಟ! ಆತನ ಹೆಂಡತಿ ಈ ಮೂಢ ಕೃತ್ಯಕ್ಕಾಗಿ ಆತನನ್ನು ಕೋಪದಿಂದ ಬೈದು ಹಂಗಿಸಿದ್ದಲ್ಲದೆ ಮುಂದೆ ತನ್ನನ್ನು ಮುಟ್ಟಕೂಡದೆಂದು ಆಣೆ ಮಾಡಿದಳು. ತನ್ನ ಪಾಪಕೃತ್ಯ ಮತ್ತು ಹೆಂಡತಿಯ ಬೈಗುಳದಿಂದ ತೀರಾ ನೊಂದುಕೊಂಡ ಕುಂಬಾರ ತಾನು ಕೂಡ ಆಕೆಯನ್ನು ಮುಟ್ಟದಿರುವ ನಿಲುವು ತೆಗೆದುಕೊಂಡ. ಆತನ ಮೊದಲ ಹೆಂಡತಿ ಮತ್ತು ಎರಡನೇ ಹೆಂಡತಿ ಇಬ್ಬರೂ ಒಟ್ಟಾಗಿ ಉಪಾಯದಿಂದ ಆತ ಮುಟ್ಟುವಂತೆ ಮಾಡುವಲ್ಲಿ ಯಶಸ್ವಿಯಾದರು. ಆದರೆ ಕುಂಬಾರ ತಾನು ಅವರನ್ನು ಮುಟ್ಟಿದ್ದಕ್ಕಾಗಿ ತನ್ನ ಕೈ ಬೆರಳುಗಳನ್ನೇ ತುಂಡರಿಸಿಕೊಂಡುಬಿಟ್ಟ! ಮುಂದೊಂದು ದಿನ ಸಂತ ನಾಮದೇವ ಆ ಕಡೆಗೆ ಬಂದಾಗ ಏಕಾದಶಿಯಂದು ವಿಠೋಬ ದೇವಸ್ಥಾನದಲ್ಲಿ ನಡೆಸಿದ ನಾಮ ಸಂಕೀರ್ತನೆಯ ದಿನ ಕುಂಬಾರನ ಕೈಬೆರಳುಗಳು ಸೇರಿಕೊಂಡು ಮಾಮೂಲಿನಂತೆ ಆದವು! ಕುಂಬಾರನ ಹೆಂಡತಿ ನಡೆಸಿದ ಪ್ರಾರ್ಥನೆಯಂತೆ, ತೀರಿಕೊಂಡ ಮಗು ತೆವಳುತ್ತ, ಅಂಬೆಗಾಲಿಡುತ್ತಾ ಮತ್ತೆ ಬಂದು ತಾಯಿಯ ಮಡಿಲು ಸೇರಿಕೊಂಡಿತು! ಇವೆಲ್ಲವೂ ಪಂಡರಾಪುರದ ವಿಠೋಬನ ಮಹಿಮೆಯೇ ಸರಿ. ಗೋರ ಕುಂಬಾರ ಜೀವಮಾನವಿಡೀ ದೇವರ ನಾಮಸ್ಮರಣೆ ಮಾಡುತ್ತ ಜೀವಿಸಿದ. ಆತನನ್ನು ಜನರು ಪ್ರೀತಿಯಿಂದ ಗೋರ, ಗೊರಬ, ಗೊರೋಬಕಾಕ ಎಂದು ಕರೆಯುತ್ತಿದ್ದರು.

**ಹರಿದಾಸರು (ಕ) ಕರ್ನಾಟಕ, ೧೨ನೇ ಶತಮಾನದಿಂದ ೧೭ನೇ ಶತಮಾನದವರೆಗೆ:**

'ಹರಿ' ಎಂಬ ಶಬ್ದದ ಅರ್ಥ ಭಗವಾನ್ ಶ್ರೀಕೃಷ್ಣ ಮತ್ತು 'ದಾಸ' ಎಂದರೆ ಸೇವಕ ಎಂದರ್ಥ. ಹರಿದಾಸ ಎಂದರೆ ಹರಿಯ (ಭಗವಾನ್ ಶ್ರೀಕೃಷ್ಣನ) ಸೇವಕ ಎಂದು ಅರ್ಥ. ೧೨ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಹರಿದುಬಂದ ವಿಶಾಲ ಕಾಲಘಟ್ಟದಲ್ಲಿ ಕಂಡುಬಂದ ಈ ಹರಿದಾಸರು ವೈಷ್ಣವ ಮತಾವಲಂಬಿಗಳು ಮತ್ತು ಶ್ರೀಹರಿಯಲ್ಲಿ ಅಚಲ ಭಕ್ತಿಯನ್ನು ಇಟ್ಟವರು. ಕರ್ನಾಟಕದ ಬೇರೆ ಬೇರೆ

ಭಾಗಗಳಲ್ಲಿ ಬೇರೆ ಬೇರೆ ಜಾತಿ, ಮತ, ಪಂಗಡಗಳಲ್ಲಿ ದೀನರಾಗಿ ಹುಟ್ಟಿಬಂದ ಇವರು ಕೇವಲ ಭಕ್ತಿ ಎಂಬ ಸೂತ್ರದಲ್ಲಿ ಒಂದಾಗಿ ಹರಿದಾಸರಾದರು.

ದೇವರನ್ನು ಕುರಿತ ಭಕ್ತಿಯನ್ನು ಜನಸಾಮಾನ್ಯರಲ್ಲಿ ಬಿತ್ತಿದ ಅವರ ರಚನೆಗಳೆಲ್ಲ ಸರಳ ಕನ್ನಡದಲ್ಲಿದ್ದು, ಅಸಂಖ್ಯಾತವಾಗಿವೆ. ತಾಳ ತಂಬೂರಿ ಹಿಡಿದು ಶ್ರೀ ಹರಿಯ ನಾಮ ಜಪಿಸುತ್ತ ಬರಿಗಾಲಲ್ಲಿ ಅವರು ಮನೆಮನೆಯನ್ನು ಸುತ್ತಿ ಭಕ್ತಿ ಮತ್ತು ನೀತಿಯನ್ನು ಸಮಾಜದಲ್ಲಿ ಬಿತ್ತಿದರು. ಅವರು ಸಂಸಾರಸ್ಥರಾಗಿದ್ದರೂ ಸನ್ಯಾಸಿಗಳಾಗಿದ್ದರು. ಹೊಟ್ಟೆ ತುಂಬಿಸಿಕೊಳ್ಳಲು ಮಾತ್ರ ಭಿಕ್ಷೆ ಬೇಡಿದರು. ದೇವಸ್ಥಾನಗಳಲ್ಲಿ ಮತ್ತು ಮಠ ಮಂದಿರಗಳಲ್ಲಿ ಉಳಿದುಕೊಳ್ಳುತ್ತಿದ್ದರು. ಅವರು ತಾಳ, ಲಯ, ಶೃತಿ ಬದ್ಧವಾಗಿ ಹಾಡುತ್ತಿದ್ದ ಭಕ್ತಿಗೀತೆಗಳನ್ನು ದೇವರನಾಮ ಎಂದು ಕರೆಯಲಾಗಿದೆ. ಅವರ ಪ್ರತಿಪಾದನೆಯ ಮುಖ್ಯಾಂಶವೆಂದರೆ– "ದೇವರು ಎಲ್ಲರಿಗಾಗಿ ಇದ್ದಾನೆ, ದೇವರಿಗೆ ಸಾಂಪ್ರದಾಯಿಕವಾದ ಅಲಂಕಾರ, ಚಿನ್ನಾಭರಣ ಬೇಕಾಗಿಲ್ಲ, ದೇವರನ್ನು ಬಹು ಸುಲಭವಾಗಿ ಕಂಡುಕೊಳ್ಳಬಹುದು, ದೇವರನ್ನು ಸ್ತುತಿಸಬೇಕು ಮತ್ತು ನಿರಂತರ ನೆನಪಿಸಿಕೊಳ್ಳಬೇಕು" ಇತ್ಯಾದಿ.

ದ್ವೈತ ಸಿದ್ಧಾಂತ ಪ್ರತಿಪಾದಕರಾದ ಮಧ್ವಾಚಾರ್ಯರ ಅನುಯಾಯಿಗಳು ಈ ಹರಿದಾಸರು. ಮಧ್ವಾಚಾರ್ಯರ ಉದ್ಬೋಧಕ 'ದ್ವಾದಶ ಸ್ತೋತ್ರ'ದ ಪ್ರಭಾವದಿಂದ ಅನಂತರದ ಹರಿದಾಸರು ಕೀರ್ತನೆಗಳನ್ನು ರಚಿಸಿ ಹಾಡತೊಡಗಿದರು. ಮಧ್ವಾಚಾರ್ಯರ ಶಿಷ್ಯರಾದ ಶ್ರೀ ನರಹರಿ ತೀರ್ಥರು (ಕ–೧) ಹರಿದಾಸ ಚಳವಳಿಯನ್ನು ಹುಟ್ಟುಹಾಕಿದರು.

ಹರಿದಾಸ ಪಂಥದ ಪಿತಾಮಹ ಎಂದೇ ಗುರುತಿಸಲಾಗಿರುವ ಶ್ರೀಪಾದರಾಯರು (ಕ–೨) ಶ್ರೀ ವ್ಯಾಸರಾಯರ ಕ–೩) ಮತ್ತು ವಾದಿರಾಜರ (ಕ–೪) ಜೊತೆಗೂಡಿ ದಾಸ ಚಳವಳಿಯನ್ನು ಮುನ್ನಡೆಸಿದರು. ಇವರು ನೀಡಿದ ಅಗಾಧ ನಾಯಕತ್ವದಿಂದಾಗಿ ಈ ಮೂವರನ್ನು ಯತಿತ್ರಯರು ಎಂದೇ ಕರೆಯಲಾಗಿದೆ. ದಾಸ ಪರಂಪರೆಯಲ್ಲಿ ಅತಿ ಪ್ರಮುಖರಾದವರೆಂದರೆ ಪುರಂದರದಾಸರು (ಕ–೫) ಮತ್ತು ಕನಕದಾಸರು (ಕ–೬). ಈ ಸಂಖ್ಯೆ ನಮೂದಿಸಿದ ದಾಸರ ಕುರಿತು ಮುಂದೆ ವಿವರವಾದ ಮಾಹಿತಿ ಒದಗಿಸಲಾಗಿದೆ.

**(ಕ–೧) ಶ್ರೀ ನರಹರಿ ತೀರ್ಥರು, ಸು. ೧೨೮೦, ಹುಬ್ಬಳ್ಳಿ, ಕರ್ನಾಟಕ:**

ಮೂಲತಃ ಈತ ಕರ್ನಾಟಕ ಮತ್ತು ಆಂಧ್ರ ಎರಡು ರಾಜ್ಯಗಳಿಗೂ ಸೇರಿದವನಾಗಿರದೆ ಒಡಿಶಾದ ಕಳಿಂಗರಾಜರ ಮಂತ್ರಿಯಾಗಿದ್ದನೆಂದು ಭಾವಿಸಲಾಗಿದೆ. ಕರ್ನಾಟಕಕ್ಕೆ ಬಂದು ತಳವೂರಿ ಭಕ್ತಪಂಥ ಸೇರಿದ ಈತನನ್ನು ಕಳಿಂಗ ರಾಜರ ಭಂಡಾರದಲ್ಲಿದ್ದ ವಿಗ್ರಹಗಳನ್ನು ತರಲು ಮಧ್ವಾಚಾರ್ಯರು ಕಳಿಂಗ ರಾಜ್ಯಕ್ಕೆ



ಕಳಿಸಿದರು. ಹರಿದಾಸ ಪರಂಪರೆಯನ್ನು ಪ್ರಾರಂಭಿಸಿದ ಈತ ಭಕ್ತಿಯಿಂದ ಪ್ರಾರ್ಥಿಸುವುದು ದೇವರನ್ನು ತಲುಪಲು ಸುಲಭ ಉಪಾಯವೆಂದು ಹೇಳಿದ. ಹರಿಯನ್ನು ಸ್ತುತಿಸುವ ಗೀತೆಗಳನ್ನು ಎಲ್ಲರಿಗೂ ತಲುಪುವ ಸುಲಭ ಭಾಷೆಯಲ್ಲಿ ರಚಿಸಿದ. ಭಕ್ತಿಪಂಥ ಎಲ್ಲೆಡೆ ಹರಡಲು ಹಾಡುಗಳು ತುಂಬ ಸಹಾಯ ಮಾಡಿದವು.

**(ಕ–೨) ಶ್ರೀಪಾದರಾಯ ತೀರ್ಥ, (೧೪೦೪–೧೫೦೨), ಶಿವಗಂಗೆ, ಕರ್ನಾಟಕ:**

ಸಣ್ಣ ಪ್ರಾಯದಲ್ಲಿ ಸನ್ಯಾಸ ದೀಕ್ಷೆ ತೆಗೆದುಕೊಂಡ ಇವರು ಮಧ್ವಾಚಾರ್ಯರ ಅನುಯಾಯಿಗಳು. ಕುಲೀನ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಇವರಿಗೆ ತಂದೆ ತಾಯಿಯರು ಲಕ್ಷ್ಮೀನಾರಾಯಣ ಎಂದು ಹೆಸರಿಟ್ಟರು. ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವಗಳನ್ನು ಸರಳ ಕನ್ನಡದಲ್ಲಿ ಗೀತೆಗಳ ರೂಪದಲ್ಲಿ ರಚಿಸಿ ಜನಸಾಮಾನ್ಯರ ನಡುವೆ ಪ್ರಚುರಪಡಿಸಿದರು. ರಾಗ, ತಾಳ ಮತ್ತು ಶ್ರುತಿಬದ್ಧವಾಗಿ ಹಾಡಬಲ್ಲ ಈ ಗೀತೆಗಳಲ್ಲಿ ಸಾಹಿತ್ಯಿಕ ಮೌಲ್ಯವೂ ಸಂಗೀತದ ಗಂಧವೂ ಸಮಪ್ರಮಾಣದಲ್ಲಿ ಬೆರೆತಿವೆ. ಭಗವದ್ಗೀತೆಯ ಸಾರವನ್ನು ಜನಮಾನಸದಲ್ಲಿ ಬಿತ್ತುವುದೇ ಈ ತತ್ವದ ಉದ್ದೇಶವಾಗಿತ್ತು. ಆತನ ಹಾಡುಗಳಿಗೆ ಸ್ವತಃ ದೇವರೇ ನರ್ತಿಸುತ್ತಾನೆಂಬ ನಂಬಿಕೆ ಪ್ರಚಲಿತವಾಗಿತ್ತು. ಎಲ್ಲ ಪೂಜಾ ಕೈಂಕರ್ಯಗಳ ಕೊನೆಯಲ್ಲಿ ಭಕ್ತಿಯಿಂದ ಈ ಗೀತೆಗಳನ್ನು ಹಾಡುವ ಸಂಪ್ರದಾಯವನ್ನು ಅವರು ಆಚರಣೆಗೆ ತಂದರು.

"ನಾರಾಯಣಾ, ನಿನ್ನ ನಾಮದ ಬಲವೊಂದಿದ್ದರೆ ಸಾಕು, ನನಗಿನ್ನೇನೂ ಬೇಡ", "ನಾನು ಪಾಪಿ ಮತ್ತು ತಪ್ಪು ಕೆಲಸಗಳನ್ನು ಮಾಡಿದ್ದೇನೆ; ನನ್ನನ್ನು ಉದ್ಧರಿಸು", "ಕೃಷ್ಣಾ, ಬೇರೇನೂ ನಾನು ಬೇಡುವುದಿಲ್ಲ; ನನ್ನ ಹೃದಯದಲ್ಲಿ ನೆಲೆಸು" ಇವು ಅವರ ಗೀತೆಗಳ ಒಟ್ಟು ಸಾರ.

**(ಕ–೩) ಶ್ರೀ ವ್ಯಾಸರಾಯರು (೧೪೪೭–೧೫೩೯) ಆನೆಗೊಂದಿ, ಕರ್ನಾಟಕ:**

ಶ್ರೀಪಾದರಾಯರ ಶಿಷ್ಯರಾದ ವ್ಯಾಸರಾಯರ ಆರಾಧ್ಯ ದೈವ ಹಂಪಿಯ ವಿಜಯ ವಿಠಲ. ಪುರಂದರದಾಸ ಮತ್ತು ಕನಕದಾಸರಿಂದ ಸ್ವಲ್ಪ ಹಿಂದಿನವರು. ಇವರು ಆಶುಕವಿಗಳು. ಸ್ವಾಭಾವಿಕವಾಗಿ, ಸಹಜವಾಗಿ ಇವರ ಬಾಯಿಂದ ಹಾಡುಗಳು ಹರಿದು ಬರುತ್ತಿದ್ದವು. ದ್ವೈತ ಸಿದ್ಧಾಂತದ ತತ್ವಗಳೆಲ್ಲಾ ಹಾಡಿನ ರೂಪದಲ್ಲಿ ಇವರಿಂದ ಮೂಡಿಬಂದಿವೆ. ಮಾತ್ರವಲ್ಲ, ಇಂದಿಗೂ ಜನರ ಬಾಯಲ್ಲಿ ನಲಿದಾಡುತ್ತಿವೆ. ದಕ್ಷಿಣ ಭಾರತದಾದ್ಯಂತ ಆಂಜನೇಯನ ೭೩೨ ವಿಗ್ರಹಗಳನ್ನು ಇವರು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ.

"ಕೃಷ್ಣನನ್ನು ಒಮ್ಮೆ ನೆನೆಯಬಾರದೇ, ಕೃಷ್ಣಾ ಎನಬಾರದೇ, ಒಮ್ಮೆ ಅವನನ್ನು ಪೂಜಿಸಬಾರದೇ, ಒಮ್ಮೆ ಅವನನ್ನು ನೋಡಬಾರದೇ. ನಿನಗೆ ಶಾಶ್ವತ ಸುಖ ಸಿಗುವುದು."

"ನನ್ನ ಮನಸ್ಸು ಎಲ್ಲೆಲ್ಲೋ ಅಲೆಯುತ್ತಿದೆ; ಅದನ್ನು ನಿನ್ನಲ್ಲೇ ನೆಲೆಗೊಳಿಸು" ಎಂಬಿತ್ಯಾದಿ ಭಾವನೆಗಳು ವ್ಯಾಸರಾಯರ ರಚನೆಗಳ ಒಟ್ಟು ತಾತ್ಪರ್ಯ.

**(ಕ–೪) ಶ್ರೀ ವಾದಿರಾಜರು (೧೪೮೦–೧೬೦೦), ೧೨೦ ವರ್ಷಗಳ ಜೀವಿತ:; ಸೋದಿ, ಉಡುಪಿ, ಕರ್ನಾಟಕ:**

ಸನ್ಯಾಸ ದೀಕ್ಷೆ ತೆಗೆದುಕೊಳ್ಳುವ ಪೂರ್ವದಲ್ಲಿ ಇವರ ಹೆಸರು ಭೂವರಾಹ ಆಚಾರ್ಯ ಎಂದಾಗಿತ್ತು. ಮಾಧ್ವ ಸಂಪ್ರದಾಯದ ಬ್ರಾಹ್ಮಣರಲ್ಲಿ ಪುರೋಹಿತರ ಮನೆತನ ಇವರದಾಗಿತ್ತು. ದಾಸ ಚಳವಳಿಯ ತ್ರಿಮೂರ್ತಿಗಳಲ್ಲಿ (ಇನ್ನಿಬ್ಬರು ವ್ಯಾಸರಾಯರು ಮತ್ತು ಶ್ರೀಪಾದರಾಯರು) ಇವರೂ ಒಬ್ಬರು. ಹಯಗ್ರೀವನ ಪರಮಭಕ್ತರಲ್ಲಿ ಒಬ್ಬರಾದ ಇವರು ತಮ್ಮ ಮುದ್ರೆಗಳಲ್ಲಿ ಹಯವದನನನ್ನು ಕಾಣಿಸುತ್ತಿದ್ದರು. ಇವರು ಹುಟ್ಟು ಕವಿಯಾಗಿದ್ದರು. ಅತ್ಯಂತ ಸಹಜವಾಗಿ ಕೃಷ್ಣನನ್ನು ಆರಾಧಿಸುತ್ತ ಕೀರ್ತನೆಗಳನ್ನು ರಚಿಸುತ್ತಿದ್ದರು. ಸಂಸ್ಕೃತ, ಕನ್ನಡ ಮತ್ತು ತುಳು ಮೂರೂ ಭಾಷೆಗಳಲ್ಲೂ ಅವರು ಹಾಡುಗಳನ್ನು ಬರೆದಿದ್ದಾರೆ. ಜನಮಾನಸದ ಹೃದಯ ಗೆದ್ದ ಈ ಸ್ವಾಮೀಜಿ ಹಲವಾರು ಕೃತಿಗಳನ್ನು ರಚಿಸಿದ್ದು, ಅವರ 'ತೀರ್ಥ ಪ್ರಬಂಧ' ಮತ್ತು ೧೪೨೦ ವಚನಗಳಿರುವ 'ರುಕ್ಮಿಣೀ ವಿಜಯಂ' ಪ್ರಸಿದ್ಧವಾಗಿವೆ. ಕಾವ್ಯಕೃತಿ 'ಹಿತೋಪದೇಶ' ಜನಮೆಚ್ಚಿದ ಕೃತಿ.

ಅವರು ಉಪದೇಶಿಸಿದ ನೀತಿಸಾರವೆಂದರೆ–

"ಕೃಷ್ಣನನ್ನು ಸ್ಮರಿಸು; ಆತನನ್ನು ಪೂಜಿಸು, ವಿಷ್ಣುವಿನ ಪಾದಪದ್ಮಗಳಿಗೆ ನಮಿಸು, ಅಚ್ಯುತನಿಗೆ ಶರಣಾಗು, ಕೇಡುಬಗೆಯ ಬೇಡ, ಆಸೆಯನ್ನು ತ್ಯಜಿಸು, ಕಾಮವನ್ನು ಗೆಲ್ಲು, ದೇವರ ಕತೆಗಳನ್ನು ಸದಾ ಸ್ಮರಿಸುತ್ತಿರು, ಹರಿಯನ್ನು ಪೂಜಿಸಿದ ತುಳಸೀದಳಗಳನ್ನು ಆಘ್ರಾಣಿಸು, ಆತನಿಗೆ ಅರ್ಪಿಸಿದ ನೈವೇದ್ಯವನ್ನಷ್ಟೇ ಸೇವಿಸು."

ಶ್ರೀ ವಾದಿರಾಜರು ಹೇಳಿದರು– "ವೇದ ಮತ್ತು ಶಾಸ್ತ್ರಗಳಲ್ಲಿ ಹೇಳಿದ್ದು ಅತ್ಯಂತ ಹಿತವಾದದ್ದು. ಹರಿಯನ್ನು ಅಲಂಕರಿಸಿ ಪೂಜಿಸುವುದೇ ಪರಮಾನಂದ ದಾಯಕ."

"ಹರಿಯನ್ನು ಅಲಂಕರಿಸಿ ಪೂಜಿಸು; ಮೋಕ್ಷ ಸಾಧನೆಗೆ ಅದುವೇ ಹಾದಿ."

**(ಕ–೫) ಶ್ರೀ ಪುರಂದರದಾಸರು (೧೪೮೪–೧೫೬೪), ಮೂಲ ಪುರಂದರಗಡ, ವಾಸಿಸಿದ್ದು ಕರ್ನಾಟಕದ ಹುಬ್ಬಳ್ಳಿಯಲ್ಲಿ.**

ವೈಶ್ಯ ಕುಲದಲ್ಲಿ ಹುಟ್ಟಿದ ಈತನ ತಂದೆ–ತಾಯಿ ವರದಪ್ಪನಾಯಕ ಮತ್ತು ಕಮಲಾದೇವಿ. ಮೂಲ ಹೆಸರು ಶ್ರೀನಿವಾಸನಾಯಕ. ಅಕ್ಕಿ ವ್ಯಾಪಾರದಲ್ಲಿ ಹೇರಳ



ಹಣ ಸಂಪಾದಿಸಿದ. ಆದರೆ ಜೀವನದ ಅಶಾಶ್ವತೆಯನ್ನು ಮನಗಂಡು ಎಲ್ಲವನ್ನೂ ತ್ಯಜಿಸಿ ಸನ್ಯಾಸದೀಕ್ಷೆ ಸ್ವೀಕರಿಸಿದ. ವ್ಯಾಸರಾಯರು ಈತನಿಗೆ ಗುರುಗಳು. "ವ್ಯಾಸರಾಯರ ಅನುಗ್ರಹದಿಂದಾಗಿ ಪಾಂಡುರಂಗ ವಿಠಲನನ್ನು ಅರಿಯಲು ನನಗೆ ಸಾಧ್ಯವಾಯಿತು" ಎಂದು ಪುರಂದರದಾಸರು ಹೇಳಿಕೊಂಡಿದ್ದಾರೆ. ತನ್ನ ಶಿಷ್ಯನ ಬಗ್ಗೆ ವ್ಯಾಸರಾಯರು ಹೇಳಿದ ಮಾತೆಂದರೆ– "ಪುರಂದರ ಗುರುವೇ ನಿನಗೆ ವಂದನೆಗಳು. ನೀನು ದಾಸ ಶ್ರೇಷ್ಠ, ಕರುಣಾಳು." ಆಧ್ಯಾತ್ಮಿಕ ಅರ್ಥದಲ್ಲಿ ಅವರು ಸನ್ಯಾಸಿಯಾಗಿರಲಿಲ್ಲ ಎಂದು ವ್ಯಾಸರಾಯರು ಆ ಮಾತು ಹೇಳಿದರು. ಸುಮಾರು ೪,೫೦,೦೦೦ ಕೀರ್ತನೆಗಳನ್ನು ಪುರಂದರ ದಾಸರು ರಚಿಸಿರುವರೆಂದು ಹೇಳಲಾಗಿದೆ. ಲಭ್ಯವಿರುವ ಎಲ್ಲ ಕೀರ್ತನೆಗಳಲ್ಲೂ ಕೃಷ್ಣ ಭಕ್ತಿ ಅನ್ಯಾದೃಶವಾಗಿ ಮೂಡಿಬಂದಿದೆ. ಹರಿಯನ್ನು ಮಾತ್ರವಲ್ಲ, ಹರಿ ಭಕ್ತರಾದ ವಿದುರ, ಪ್ರಹ್ಲಾದರನ್ನು ಪುರಂದರದಾಸರು ಕೀರ್ತಿಸಿದ್ದಾರೆ. ಅವರ ಸಾಹಿತ್ಯ ವಿಪುಲವಾಗಿದ್ದು, ಎಲ್ಲವನ್ನೂ ಸೇರಿಸಿ 'ಪುರಂದರೋಪನಿಷತ್' ಎಂದು ಕರೆಯಲಾಗಿದೆ. ನಾರದನ ಅವತಾರವೆಂದು ಭಾವಿಸಲಾಗಿದೆ.

ದೇವರ ಅಗಾಧ ಶಕ್ತಿಯನ್ನು ಕುರಿತು ರಚಿಸಿದ ಸಾಹಿತ್ಯದ ಸಾರವೆಂದರೆ–

"ಆತ ಒಂದು ಕಣವಾಗಿರಬಲ್ಲ; ಅಗಾಧವಾಗಿರಲೂ ಬಲ್ಲ. ಇವೆರಡರ ಮಧ್ಯೆ ಅಣುವೂ ಆಗಬಲ್ಲ, ಸಮಸ್ತವೂ ಆಗಬಲ್ಲ. ಆತನಿಗೆ ರೂಪವಿರಬಹುದು, ರೂಪವಿಲ್ಲದೆಯೂ ಇರಬಹುದು. ಆತನೇ ಭಗವಂತ."

"ಆತನನ್ನು ನೋಡಬಹುದು. ನೋಡದಂತೆಯೂ ಇರಬಹುದು. ಆತ ಗುಣನು, ಗುಣಾತೀತನು. ಪುರಂದರ ವಿಠಲನು ಎಲ್ಲದರ ಸೃಷ್ಟಿಕರ್ತ ಮತ್ತು ಲಯಕರ್ತ.'

**(ಕ–೬) ಶ್ರೀ ಕನಕದಾಸರು (೧೫೦೮–೧೬೦೬) ಕಾಗಿನೆಲೆ, ಕರ್ನಾಟಕ:**

ಧಾರವಾಡ ಬಳಿ ಕಾಗಿನೆಲೆ ಎಂಬಲ್ಲಿ ಬೀರಪ್ಪ ಮತ್ತು ಬಚ್ಚಮ್ಮ ಎಂಬ ಬಡ ಹಾಗೂ ಕೆಳಜಾತಿಯ ದಂಪತಿಗಳಿಗೆ ಮಗನಾಗಿ ಹುಟ್ಟಿದ ಕನಕ ಕುರಿ ಕಾಯುವ ಕೆಲಸ ಮಾಡುತ್ತಿದ್ದ. ದೇವರ ಬಗ್ಗೆ ಅತೀವ ಶ್ರದ್ಧೆ, ಭಕ್ತಿ ಇದ್ದುದರಿಂದ ವ್ಯಾಸರಾಯರಿಂದ ದೀಕ್ಷೆ ಪಡೆದು ದಾಸನಾದ. ತಿರುಪತಿಯ ವೆಂಕಟೇಶ್ವರನ (ಕೃಷ್ಣ) ಪರಮಭಕ್ತನಾದ. ಈತ ದಾರಿಯ ಕಠಿಣತೆ, ದುರ್ಗಮಗಳನ್ನು ಲೆಕ್ಕಿಸದೆ ಕಾಲ್ನಡಿಗೆಯಲ್ಲೇ ತಿರುಪತಿಗೆ ಹೋಗಿ ಬರುತ್ತಿದ್ದ. ಸಾಹಿತ್ಯ ಮತ್ತು ಸಂಗೀತದ ಸುಗಂಧದಿಂದ ಕೂಡಿದ ಅತ್ಯುತ್ತಮ ಕೀರ್ತನೆಗಳನ್ನು ಕನಕದಾಸರು ರಚಿಸಿದ್ದಾರೆ.

ಉಡುಪಿ ಶ್ರೀಕೃಷ್ಣ ದರ್ಶನಕ್ಕೆ ಹೋದಾಗ ಮುಖ್ಯದ್ವಾರದಿಂದ ಪ್ರವೇಶ ನಿರಾಕರಿಸಲ್ಪಟ್ಟಾಗ ಅತ್ಯಂತ ದುಃಖಭರಿತನಾಗಿ ದೇವಸ್ಥಾನಕ್ಕೆ ಹೊರಗಿನಿಂದಲೇ ಪ್ರದಕ್ಷಿಣೆ ಬಂದು ಪಶ್ಚಿಮ ದ್ವಾರದಲ್ಲಿ ಕುಳಿತು ಕಣ್ಣೀರು ಸುರಿಸುತ್ತ, "'ಬಾಗಿಲನು ತೆರೆದು ದರುಶನವ ಕೊಡೊ ಹರಿಯೆ!" ಎಂದು ಭಕ್ತಿ ನಿರ್ಭರತೆಯಿಂದ ಪ್ರಾರ್ಥಿಸಿದ. ಮಧ್ಯರಾತ್ರಿ ಕೃಷ್ಣನ ವಿಗ್ರಹ ಪಶ್ಚಿಮ ದಿಕ್ಕಿಗೆ ತಿರುಗಿ ಗೋಡೆಯಲ್ಲಿ ಕಂಡಿ ಮೂಡಿಸಿ ಕನಕನಿಗೆ ದರುಶನ ಕೊಟ್ಟ.

ಹರಿದಾಸರಲ್ಲಿ ಕನಕದಾಸರಿಗೆ ಅತ್ಯಂತ ವಿಶಿಷ್ಟವಾದ ಸ್ಥಾನವಿದೆ. ಭಗವಾನ್ ಕೃಷ್ಣನ ಭಕ್ತನಾದ ವಿದುರನ ಅವತಾರವೆಂದು ಕನಕದಾಸರನ್ನು ಭಾವಿಸಲಾಗಿದೆ.

"ಹೆತ್ತವರನ್ನು ಬಿಟ್ಟು ಮೋಕ್ಷವನ್ನು ಕುರಿತಾಗಿ ಅಭ್ಯಾಸ ಮಾಡಬಹುದು. ಸಂಬಂಧಗಳನ್ನು, ಕುಟುಂಬವನ್ನು ಹರಿದೊಗೆಯಬಹುದು. ರಾಜನಿಗೆ ಕೋಪ ಬಂದರೆ, ಆ ದೇಶವನ್ನೇ ಬಿಟ್ಟು ತೆರಳಬಹುದು. ಆದರೆ ಭಗವಂತನನ್ನು, ಆತನ ಪಾದಾರವಿಂದಗಳನ್ನು ತ್ಯಜಿಸಿ ಜೀವಿಸುವಂತಿಲ್ಲ" ಎಂದು ಕನಕದಾಸರು ಉಪದೇಶಿಸಿದರು.

**ಇತರ ಪ್ರಸಿದ್ಧ ಹರಿದಾಸರ ಹೆಸರುಗಳು:–** ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ಹೆಳವನ ಕಟ್ಟೆ ಗಿರಿಯಮ್ಮ, ಶ್ರೀ ಜಗನ್ನಾಥ ದಾಸರು, ಶ್ರೀ ಪ್ರಾಣೇಶದಾಸರು, ಭೀಮಯ್ಯ ದಾಸರು, ಶ್ರೀ ಪ್ರಸನ್ನ ವೆಂಕಟದಾಸರು, ಶ್ರೀ ವೇಣುಗೋಪಾಲದಾಸರು, ಶ್ರೀ ಮೋಹನದಾಸರು, ಶ್ರೀ ಮಹೀಪತಿ ದಾಸರು, ಶ್ರೀ ಗುರು ಜಗನ್ನಾಥದಾಸರು.

**ಶ್ರೀ ಜಯತೀರ್ಥ (೧೪ನೇ ಶತಮಾನ), ಮಂಗಳವಾಡಿ, ಪಂಡರಾಪುರ, ಮಹಾರಾಷ್ಟ್ರ:**

ಮಂಗಳವಾಡಿಯ ರಾಜಮನೆತನವೊಂದಕ್ಕೆ ಸೇರಿದವರಾದರೂ ಮಧ್ವಾಚಾರ್ಯರ ಶಿಷ್ಯರಾದ ಅಕ್ಷೋಭ್ಯತೀರ್ಥರ ಶಿಷ್ಯರಾಗಿ ಸನ್ಯಾಸ ದೀಕ್ಷೆ ತೆಗೆದುಕೊಂಡ ಶ್ರೀ ಜಯತೀರ್ಥರು ದ್ವೈತ ಮತದ ಭಾಷ್ಯಕಾರರಾಗಿ ಟೀಕಾಚಾರ್ಯರೆಂದೇ ಪ್ರಸಿದ್ಧಿ ಪಡೆದರು. ಸುಮಾರು ಹದಿನೆಂಟರಷ್ಟು ಪ್ರಮುಖ ಕೃತಿ ರಚಿಸಿದ ಇವರು, ಮಧ್ವಾಚಾರ್ಯರ ಗ್ರಂಥಗಳಿಗೆಲ್ಲ ಭಾಷ್ಯ ಬರೆದರು. ಅವರ 'ನ್ಯಾಯ ಸುಧಾ' ಎಂಬುದು ಒಂದು ಬೃಹತ್ ಕೃತಿ. ಸ್ಥಳೀಯ ನಂಬಿಕೆಯೊಂದರ ಪ್ರಕಾರ ಅವರು ನಂದಿಯಾಗಿ (ಬಸವ) ಮಧ್ವಾಚಾರ್ಯರ ಆಲೋಚನೆಗಳನ್ನು ನೇರವಾಗಿ ಪಡೆದವರಾಗಿದ್ದರು. ಅವರು ಮರಾಠಿಯಲ್ಲಿ ರಚಿಸಿದ ಅಭಂಗಗಳು ತುಂಬ ಜನಪ್ರಿಯವಾಗಿವೆ ಮತ್ತು ಅವು ದೇವರ ಕುರಿತಾದ ಮಗುವೊಂದರ ಆಲೋಚನೆಗಳಂತಿದ್ದು, ಈಗಲೂ ಮಕ್ಕಳು ಅವನ್ನು ಹಾಡುತ್ತಾರೆ.



**ಜಯದೇವ (೧೨ನೇ ಶತಮಾನ), ಕೆಂದೂಳಿ, ಬೋಲೇಪುರ, ಬೀರ್‌ಭೂಮ್ ಜಿಲ್ಲೆ, ಪಶ್ಚಿಮ ಬಂಗಾಳ:**

ಭೋಜದೇವ ಮತ್ತು ವಾಮದೇವಿ ದಂಪತಿಗಳಿಗೆ ಮಗನಾಗಿ ಹುಟ್ಟಿದ ಈತ ಪ್ರಕಾಂಡ ಪಂಡಿತನಾಗಿದ್ದ ಮತ್ತು ಬಂಗಾಳದ ರಾಜ ಲಕ್ಷ್ಮಣಸೇನನ ಆಸ್ಥಾನ ಕವಿಯಾಗಿದ್ದ. ಕೃಷ್ಣನ ಭಕ್ತನಾದ ಈತ ರಾಧಾಕೃಷ್ಣ ಎಂಬ ಪಂಥವೊಂದನ್ನು ಹುಟ್ಟುಹಾಕಿದನಲ್ಲದೆ ಸಂಸ್ಕೃತದಲ್ಲಿ 'ಗೀತ ಗೋವಿಂದ' ಎಂಬ ಪ್ರಸಿದ್ಧ ಅಷ್ಟಪದಿಗಳ ಜೊತೆಗೆ ಇತರ ಕೆಲವು ಪದ್ಯಗಳನ್ನೂ ರಚಿಸಿದ.

**ಶ್ರೀ ಕಂಬರ್ (೯ನೇ ಶತಮಾನ), ತಿರುಚೆಂದೂರ್, ತಂಜಾವೂರು ಜಿಲ್ಲೆ, ತಮಿಳುನಾಡು:**

ಕಂಬದಿಂದ ಮೂಡಿಬಂದ ಉಗ್ರನರಸಿಂಹ ಮನೆದೇವರಾಗಿರುವ ಕುಟುಂಬಕ್ಕೆ ಸೇರಿದ್ದರಿಂದ ಕಂಬರ್ ಎಂಬ ಹೆಸರಿನಿಂದಲೇ ಪ್ರಸಿದ್ಧನಾದ ಈತ, ತಮಿಳಿನಲ್ಲಿ 'ಕವಿಚಕ್ರವರ್ತಿ' ಎಂಬ ಬಿರುದಿಗೆ ಪಾತ್ರನಾಗಿದ್ದಾನೆ. ಸಂಸ್ಕೃತದಲ್ಲಿಯೂ ಪಂಡಿತನಾಗಿದ್ದ. ರಾಮನ ನಿಷ್ಠಾವಂತ ಭಕ್ತನಾದ ಈತ ರಾಮಾಯಣವನ್ನು ತಮಿಳಿನಲ್ಲಿ ಬರೆದ. ಅದು 'ಕಂಬರಾಮಾಯಣ' ಎಂದೇ ಪ್ರಸಿದ್ಧವಾಗಿದೆ. ನರಸಿಂಹನ ಕೃಪಾಕಟಾಕ್ಷ ಈತನ ಮೇಲಿತ್ತೆಂದೂ ಕಂಬ ರಾಮಾಯಣವನ್ನು ರಚಿಸುವಾಗ ಕಾಳಿಕಾದೇವಿ ಆತನಿಗೆ ದೀಪವನ್ನು ಹಿಡಿಯುತ್ತಿದ್ದಳೆಂದೂ, ಸರಸ್ವತಿ ಆತನ ಪಕ್ಕ ಕುಳಿತು, ಹೇಗೆ ಬರೆಯಬೇಕೆಂದು ನಿರ್ದೇಶಿಸುತ್ತಿದ್ದಳೆಂದೂ ಐತಿಹ್ಯವಿದೆ. ಇದು ವಾಲ್ಮೀಕಿ ರಾಮಾಯಣದ ಅನುವಾದವಾಗಿರದೆ, ತಮಿಳಿನಲ್ಲಿ ಮರುಹುಟ್ಟು ಪಡೆದ ಬೇರೆಯೇ ರಾಮಾಯಣವಾಗಿದೆ. ತಮಿಳು ಜನರಿಗೆ ರಾಮನ ಒಲವು. ಈ ಕೃತಿಯ ಮೂಲಕ ದೊರೆತಂತಾಗಿದೆ.

**ಶ್ರೀ ಕಾಳಿದಾಸ (೪ನೇ ಶತಮಾನ) (ಅವಂತಿ), ಉಜ್ಜೈನಿ, ಉತ್ತರಪ್ರದೇಶ:**

ಅವಿದ್ಯಾವಂತನಾಗಿ, ಕಡುಬಡತನದಲ್ಲಿದ್ದ ಈತ ಒಬ್ಬ ಕುರಿಗಾಹಿ ಯಾಗಿದ್ದನೆಂದೂ, ಕಾಡಿನಲ್ಲಿ ಜೀರ್ಣಾವಸ್ಥೆಯಲ್ಲಿದ್ದ ದೇವಸ್ಥಾನವೊಂದರಲ್ಲಿ ಈತನಿಗೆ ಕಾಳಿಕಾದೇವಿಯ ಅನುಗ್ರಹ ದೊರೆಯಿತೆಂಬ ಐತಿಹ್ಯವಿದೆ. ಈತನ ನಾಲಗೆಯಲ್ಲಿ ಸರಸ್ವತಿ ನೆಲಸಿದಳು. ಕಾಳಿಕಾದೇವಿಯ ಅನುಗ್ರಹದಿಂದಾಗಿ ಕಾವ್ಯ, ವ್ಯಾಕರಣ, ಛಂದಸ್ಸುಗಳು ಕರತಲಾಮಲಕವಾದವು. ಕಾಳಿಯ ಸೇವಕನಾದುದರಿಂದ 'ಕಾಳಿದಾಸ' ಎಂಬ ಹೆಸರು ಶಾಶ್ವತವಾಯಿತು. ರಾಜನಲ್ಲಿ ಆಸ್ಥಾನ ಕವಿಯಾಗಿ ಸೇವೆ ಸಲ್ಲಿಸಿದನು.

ಗುಪ್ತ ರಾಜವಂಶದ ೨ನೇ ಚಂದ್ರಗುಪ್ತನ ಆಸ್ಥಾನದ ಪಂಡಿತ ಶ್ರೇಷ್ಠ ನವರತ್ನಗಳಲ್ಲಿ ಒಬ್ಬನಾಗಿದ್ದ ಕಾಳಿದಾಸ ತನ್ನ ವಿದ್ವತ್ಪೂರ್ಣ, ಪ್ರಾಸಂಗಿಕ ಮತ್ತು

ಆಶುಕವಿತ್ವದ ಪ್ರತಿಭಾಸಂಪನ್ನ ವ್ಯಕ್ತಿತ್ವದಿಂದ ರಾಜನ ವಿಶ್ವಾಸ ಗಳಿಸಿದ್ದ. ಆಸ್ಥಾನ ಪಂಡಿತರಲ್ಲಿ ಯಾರು ಶ್ರೇಷ್ಠ ಎಂಬ ವಾಗ್ವಾದ ಬಂದು ಒಬ್ಬ ವಿದ್ವಾಂಸ ಕವಿ ಅರ್ಧ ಮಾಡಿಟ್ಟ ಒಗಟಿನಂತಹ ರಚನೆಯನ್ನು ರಾಜನಿಗೆ ಸಂತೋಷವಾಗುವಂತೆ ಮತ್ತು ಹೊಗಳುವಂತೆ ಕಾಳಿದಾಸ ಪೂರ್ತಿ ಮಾಡಿ ತನ್ನ ಪ್ರತಿಭೆಯನ್ನು ಮೆರೆಯುತ್ತಿದ್ದ. ಈತ ಬಹುದೊಡ್ಡ ನಾಟಕಕಾರನೂ ಆಗಿದ್ದು, 'ಶಾಕುಂತಲ'ದಂತಹ ನಾಟಕಗಳನ್ನೂ ಬರೆದನು. ಇವನು ಮೇಘದೂತ, ಕುಮಾರಸಂಭವ ಮತ್ತು ರಘುವಂಶವೆಂಬ ಕಾವ್ಯಗಳನ್ನೂ ರಚಿಸಿದನು.

**ಶ್ರೀ ಕಬೀರ್‌ದಾಸ್ (೧೪೪೦–೧೫೧೮), ಬನಾರಸ್, ಉತ್ತರ ಪ್ರದೇಶ:**

ಈ ಸಂತಕವಿಯ ಪೂರ್ವೇತಿಹಾಸದ ಬಗ್ಗೆ ಮಾಹಿತಿ ಇಲ್ಲವಾದರೂ ಬನಾರಸ್ ಸುತ್ತಮುತ್ತಲದವನಾಗಿರಬೇಕೆಂದು ನಂಬಲಾಗಿದೆ. ವೃತ್ತಿಯಲ್ಲಿ ನೇಕಾರರಾದ ಬಡ ಮುಸ್ಲಿಂ ದಂಪತಿಗಳಿಗೆ ಒಂದು ದಿನ ಗಂಗಾತಟದಲ್ಲಿ ಬುಟ್ಟಿಯಲ್ಲಿರಿಸಿ ತ್ಯಜಿಸಿದ್ದ ನವಜಾತ ಶಿಶುವೊಂದು ದೊರೆತು ಅದನ್ನು ಮನೆಗೆ ತಂದು ಪ್ರೀತಿಯಿಂದ ಸಾಕಿದರು. ಸಣ್ಣ ವಯಸ್ಸಿನಲ್ಲೇ ಬನಾರಸ್‌ನ ಸ್ವಾಮೀ ರಾಮಾನಂದರ ಶಿಷ್ಯತ್ವ ಸ್ವೀಕರಿಸಿದ. ಯಾವುದೇ ಧರ್ಮಾವಲಂಬಿಯೂ ಆಗದೆ, ಮನುಜ ಮತವನ್ನು ಸ್ವೀಕರಿಸಿ ಬೆಳೆದ. ಮದುವೆಯಾಗಿ ಮಕ್ಕಳೂ ಆದರು. ಶಾಲೆಗೆ ಹೋಗಿ ಯಾವುದೇ ಶಿಕ್ಷಣ ಪಡೆದಿರದಿದ್ದರೂ ಮಗ್ಗದಲ್ಲಿ ಕೆಲಸ ಮಾಡುತ್ತ ಮಾಡುತ್ತ ಸರಳ ಜನಪದ ಹಾದಿಯಲ್ಲಿ ಅದ್ಭುತವಾದ ಹಾಡುಗಳನ್ನು (ದೋಹ) ಬರೆದ. ಹಾಡುಗಳೆಲ್ಲ ಜನರನ್ನು ನೇರವಾಗಿ ಉದ್ದೇಶಿಸಿ ಬರೆದಂಥವು. ಮತ್ತು ಸರಳ ಹಿಂದಿಯಲ್ಲಿ ಇರುವ ಅವು ಇವತ್ತಿಗೂ ಜನರ ಬಾಯಲ್ಲಿ ನಲಿದಾಡುತ್ತಿವೆ. ಅತ್ಯುನ್ನತವಾದ ಸಾಹಿತ್ಯಿಕ ಮೌಲ್ಯ ಅವುಗಳಲ್ಲಿ ಇಲ್ಲವಾದರೂ ಸೂಫಿ ಮತದ ಧಾರ್ಮಿಕ ವಿಚಾರಗಳು ಭಕ್ತಿ ಮತ್ತು ಭಾವದ ಲಹರಿಯಲ್ಲಿ ಮಿಂದು ಸುಮಧುರ ಕಲ್ಪನೆಗಳನ್ನು ಬಡಿದೆಬ್ಬಿಸುವಂತಿವೆ. ಒಂದು ಸಾರಿ ಕಬೀರ ತಿನ್ನಲೆಂದು ರೊಟ್ಟಿಗೆ ಬೆಣ್ಣೆ ಹಾಕಿ ತಯಾರಿ ಮಾಡಿಕೊಳ್ಳುತ್ತಿದ್ದ. ಅಷ್ಟರಲ್ಲಿ ನಾಯಿಯೊಂದು ರೊಟ್ಟಿಯನ್ನು ಕಚ್ಚಿಕೊಂಡು ಓಡಿಹೋಯಿತು. ಕಬೀರ ಕೈಯಲ್ಲಿ ಬೆಣ್ಣೆ ಹಿಡಿದುಕೊಂಡು ಅದರ ಬೆನ್ನಹಿಂದೆ ಓಡಿದ. ನಾಯಿ ಓಡಿದಲ್ಲೆಲ್ಲಾ ಅವನೂ ಓಡಿದ. ನಾಯಿ ಹೆದರಿ ಊರಲ್ಲಿಡೀ ಓಡಾಡಿತು. ನಾಯಿ ಓಡಿದಂತೆಲ್ಲ ಕಬೀರನೂ ಓಡಿದ. ಜನರು ಏನಾಯಿತೆಂದು ಕೇಳಿದರು. ಅದಕ್ಕೆ ಕಬೀರ, 'ಬೆಣ್ಣೆ ಇಲ್ಲದೆ ಆ ನಾಯಿ ರೊಟ್ಟಿಯನ್ನು ತಿನ್ನೋದು ಹೇಗೆ? ಅದಕ್ಕೆ ಕೊಡಲು ಅದರ ಹಿಂದೆ ಓಡುತ್ತಿದ್ದೇನೆ' ಎಂದ! ಕೊನೆಗೂ ಅವನು ನಾಯಿಯನ್ನು ಹಿಡಿದು ರೊಟ್ಟಿಗೆ ಬೆಣ್ಣೆ ಹಚ್ಚಿಯೇ ಅದಕ್ಕೆ ಕೊಟ್ಟ! ಆ ರಾತ್ರಿ ಅವನಿಗೆ ತಿನ್ನಲು ಏನೂ ಇರಲಿಲ್ಲ. ನಾಯಿ ದೇವರ ರೂಪದಲ್ಲಿ



ಬಂದಿದೆ ಎಂದ ಕಬೀರ. ಒಂದು ಸಾರಿ ಬೆಲೆ ಬಾಳುವ ಬಟ್ಟೆಯೊಂದನ್ನು ಮಾರಲು ಮಾರುಕಟ್ಟೆಗೆ ಒಯ್ಯುತ್ತಿದ್ದ. ದಾರಿಯಲ್ಲಿ ಬಟ್ಟೆಯ ತೀರಾ ಅಗತ್ಯವಿರುವ ಇಬ್ಬರು ಕಂಡುಬಂದರು. ಕಬೀರ ಬೆಲೆ ಬಾಳುವ ಆ ಬಟ್ಟೆಯನ್ನು ಮಧ್ಯದಿಂದ ಎರಡು ತುಂಡು ಮಾಡಿ ಇಬ್ಬರಿಗೂ ಒಂದೊಂದು ತುಂಡು ಕೊಟ್ಟ.

ಆತನಿಗೆ ಹಿಂದೂ ಅನುಯಾಯಿಗಳೂ ಮುಸ್ಲಿಂ ಅನುಯಾಯಿಗಳೂ ಸಮಾನವಾಗಿದ್ದರು. ಕಬೀರ ಸತ್ತಮೇಲೆ ಆತನ ಶರೀರವನ್ನು ತಮ್ಮ ಸಂಪ್ರದಾಯದ ಪ್ರಕಾರ ದಹನ/ದಫನ ಮಾಡಬೇಕೆಂಬ ವಿವಾದ ಎದ್ದಿತು. ಗದ್ದಲ ತಾರಕಕ್ಕೆ ಹೋದಾಗ, ಆತನ ಶರೀರದ ಅರ್ಧಭಾಗ ಹೂವಿನ ಮೇಲೆ ಮಲಗಿರುವುದನ್ನೂ ಇನ್ನರ್ಧ ಭಾಗದ ಮೇಲೆ ಹಸುರು ಚಾದರ ಹೊದೆಸಿರುವುದನ್ನು ಕಂಡರು. ಹಸುರು ಚಾದರ ಹೊದ್ದ ಭಾಗವನ್ನು ಮುಸ್ಲಿಮರು ದಫನ ಮಾಡಲು ಕೊಂಡೊಯ್ದರು. ಹೂವಿನ ಮೇಲೆ ಮಲಗಿದ್ದ ಅರ್ಧಭಾಗವನ್ನು ಹಿಂದೂಗಳು ಬನಾರಸ್‌ನಲ್ಲಿ ದಹನ ಮಾಡಿದರು. "ನಾನು ಅಲ್ಲಾನ ಮಗನಾಗಿರುವ ಹಾಗೇ ರಾಮನ ಮಗನೂ ಆಗಿದ್ದೇನೆ" ಎಂದು ಕಬೀರ ಆಗಾಗ ಹೇಳುತ್ತಿದ್ದ.

'"ದೇವರು ಕಾಬಾದಲ್ಲೂ ಇಲ್ಲ; ಕೈಲಾಸದಲ್ಲೂ ಇಲ್ಲ" ಎಂದು ಕಬೀರ್ ಹೇಳಿದ. "ರಾಮ–ರಹೀಮ, ಈಶ್ವರ–ಅಲ್ಲಾ ಎಲ್ಲವೂ ಒಬ್ಬನೇ ಆಗಿದ್ದಾನೆ" ಎಂದು ಕಬೀರ್ ಘೋಷಿಸಿದ.

**ಕುರೂರು ಅಮ್ಮ (೧೫೭೦–೧೬೪೦) ತ್ರಿಶೂರು, ಕೇರಳ:**

ಈಕೆಯ ನಿಜ ನಾಮಧೇಯ ಧಾತ್ರಿ. ತ್ರಿಶೂರಿನ ಪ್ರಸಿದ್ಧ ಕುರೂರು ಕುಟುಂಬಕ್ಕೆ ವಿವಾಹವಾಗಿ ಹೋದುದರಿಂದ ಕುರೂರು ಅಮ್ಮ ಎಂದು ಹೆಸರಾಯಿತು. ಕುರೂರಿನ ನಂಬೂದಿರಿ ಬ್ರಾಹ್ಮಣ ಮನೆತನದಲ್ಲಿ ಶ್ರದ್ಧಾಭಕ್ತಿಯ ನಿಷ್ಠಾವಂತ ಮಹಿಳೆಯಾಗಿ ಸಂಸ್ಕಾರ ಪಡೆದ ಈಕೆ ಪೂಜೆ ಪುನಸ್ಕಾರಗಳಲ್ಲಿ ಕಾಲ ಕಳೆಯುತ್ತಿದ್ದಳು. ಗುರುವಾಯೂರಪ್ಪನನ್ನು (ಬಾಲಕೃಷ್ಣ) ಪೂಜಿಸುತ್ತಿದ್ದ ಈಕೆ ಸದಾ ಆತನ ನಾಮಜಪವನ್ನು ಮಾಡುತ್ತಿದ್ದಳು. ಈಕೆಯ ಎರಡೋ ಮೂರೋ ಹಾಡುಗಳಷ್ಟೆ ಉಪಲಬ್ಧ ಇವೆ. ಆದರೆ ಅವುಗಳಲ್ಲಿರುವ ಭಕ್ತಿ ಮತ್ತು ಭಾವನೆಗಳ ಅಭಿವ್ಯಕ್ತಿ ಮಾತ್ರ ಅನುಪಮವಾಗಿದೆ. 'ಆತನನ್ನು ನಾನು ನೋಡಲೇಬೇಕು' ಎಂಬರ್ಥ ಬರುವ ಒಂದು ಹಾಡು ಇದೆ. ಹೇಳಿದಂತೆಯೇ ಆಯಿತು ಕೂಡ. ಮಕ್ಕಳಿಲ್ಲದ ಆಕೆಗೆ ಶ್ರೀ ಕೃಷ್ಣನೇ ಮಗನಾದ. ಶ್ರೀ ಕೃಷ್ಣ ಒಂದು ಮಗುವಿನ ರೂಪದಲ್ಲಿ ಪ್ರತಿದಿನವೂ ಆಕೆಯ ಮನೆಯಲ್ಲಿ ಪ್ರತ್ಯಕ್ಷವಾಗುತ್ತಿದ್ದನಂತೆ. ಆಕೆ ಆತನಿಗೆ ಉಣಿಸಿದಳು, ಆಡಿಸಿದಳು, ಸಂಭಾಷಿಸಿದಳು ಮತ್ತು ಆತನ ತುಂಟತನ ಅತಿಯಾದಾಗ ಗದರಿಸಿದಳು ಕೂಡ. ಒಂದು ಸಾರಿ ಆಕೆ ಆತನ ತುಂಟತನ ಸಹಿಸಲಾರದೆ ನೀರು ತುಂಬಿದ ಕೊಡಗಳ

ನಡುವೆ ಕೂಡಿ ಹಾಕಿದಳಂತೆ. ಈ ವಿಷಯವನ್ನು ಸ್ವತಃ ಶ್ರೀಕೃಷ್ಣ ತನ್ನ ಇನ್ನೊಬ್ಬ ಭಕ್ತ ಬಿಲ್ವಮಂಗಲನ ಬಳಿ ಹೇಳಿಕೊಂಡನಂತೆ. ಆಕೆ ಪ್ರೀತಿಯಿಂದ ಶ್ರೀಕೃಷ್ಣನನ್ನು 'ಉಣ್ಣಿಕೃಷ್ಣ' (ಬಾಲಕೃಷ್ಣ) ಎಂದು ಕರೆಯುತ್ತಿದ್ದಳು. ಒಬ್ಬ ಮಗ ಮನೆಕೆಲಸಗಳಲ್ಲಿ ತಾಯಿಗೆ ಯಾವ ರೀತಿ ಸಹಾಯ ಮಾಡುವನೋ ಹಾಗೆಯೇ ಬಾಲಕೃಷ್ಣ ಆಕೆಗೆ ಸಹಾಯ ಮಾಡುತ್ತಿದ್ದನಂತೆ. ಒಮ್ಮೆ ಒಬ್ಬ ಹಟದ ಬ್ರಾಹ್ಮಣ ತೀವ್ರ ಹೊಟ್ಟೆ ನೋವಿನಿಂದ ಬಳಲುತ್ತಿದ್ದನಂತೆ. ಕುರೂರು ಅಮ್ಮ ಆತನಿಗೆ ಹೊಟ್ಟೆ ತುಂಬ ಉಣಬಡಿಸಿದಳು. ಮೊದಲ ತುತ್ತು ಹೊಟ್ಟೆಗೆ ಹೋಗುತ್ತಿದ್ದಂತೆ ಆತನ ಹೊಟ್ಟೆನೋವು ಮಾಯವಾಯಿತಲ್ಲದೆ, ಆರೋಗ್ಯವಂತನೂ, ಮುಂದೆ ಆತ ದೃಢಕಾಯನೂ ಆದನಂತೆ.

**ಶ್ರೀ ಕ್ಷೇತ್ರಯ್ಯ (೧೮೯೫–೧೯೮೬), ಮುವ್ವಾ, ಕೃಷ್ಣಾ ಜಿಲ್ಲೆ, ಆಂಧ್ರ ಪ್ರದೇಶ:**

ಈತನ ಮೂಲ ಹೆಸರು ಯಾರಿಗೂ ತಿಳಿಯದು. ಕೃಷ್ಣಭಕ್ತನಾದ ಆತ ಎಲ್ಲ ತೀರ್ಥಕ್ಷೇತ್ರಗಳನ್ನೂ ಪರ್ಯಟನ ಮಾಡುತ್ತಿದ್ದ. ಹಾಗಾಗಿ ಈತನ ಹೆಸರು 'ಕ್ಷೇತ್ರಯ್ಯ' ಎಂದೇ ಆಯಿತು. ಶ್ರೀ ಕೃಷ್ಣನನ್ನು ಸ್ತುತಿಸುವ ಸುಮಾರು ೪,೫೦೦ಕ್ಕಿಂತ ಹೆಚ್ಚು ಹಾಡುಗಳನ್ನು ಈತ ತೆಲುಗಿನಲ್ಲಿ ರಚಿಸಿದ್ದಾನೆ. ತನ್ನ ಸ್ವಂತ ಊರಾದ ಮುವ್ವಾಗೋಪಾಲ ಕೃಷ್ಣನನ್ನು ಹಾಡಿಹೊಗಳುವ ಗೀತೆಗಳಾದುದರಿಂದ ಅವನ್ನು 'ಮುವ್ವಾಗೋಪಾಲ ಪದಗಳು' ಎಂದು ಕರೆಯುತ್ತಾರೆ.

**ಲಲ್ಲೇಶ್ವರಿ (೧೩೨೬), ಪಾಂಪೊರೆ, ಕಾಶ್ಮೀರ:**

ಕುಲೀನ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಬಾಲಕಿ ಚಿಕ್ಕಂದಿನಲ್ಲೇ ತುಂಬ ಧಾರ್ಮಿಕ ಮನೋಭಾವದವಳಾಗಿದ್ದಳು. ದೊಡ್ಡವಳಾಗುತ್ತಿದ್ದಂತೆ ಸಾಧು ಸಜ್ಜನ ಸಂತರ ಸಂಗೋಷ್ಠಿಗಳಲ್ಲಿ ಕಾಲ ಕಳೆಯತೊಡಗಿದಳು. ಸಾಂಪ್ರದಾಯಿಕ ಶಿಕ್ಷಣ ಪಡೆದಿರದಿದ್ದರೂ ಬುದ್ಧಿವಂತೆಯಾಗಿದ್ದಳು. ಆಕೆಯ ಸುಮಾರು ೨೦೦ರಷ್ಟಿರುವ ರಚನೆಗಳು ಜೀವನ, ಧರ್ಮ, ಯೋಗ, ದೇವರು, ಧರ್ಮ, ಆತ್ಮ ಇತ್ಯಾದಿಗಳನ್ನು ಕುರಿತದ್ದಾಗಿವೆ. ಕಾಶ್ಮೀರಿಗಳು ಇವತ್ತಿಗೂ ಅವನ್ನು ಹಾಡುತ್ತಾರೆ. ತನ್ನ ಅನುಯಾಯಿಗಳಿಂದ 'ಪರಮಹಂಸ' ಎಂಬ ಪದವಿಯನ್ನು ಗಳಿಸಿಕೊಂಡ ಈಕೆ, ಸೂಫಿ ತತ್ವಗಳಿಂದ ಪ್ರಭಾವಿತಳಾಗಿದ್ದಾಳೆ. ಜನರು ಆಕೆಯನ್ನು ತಾಯಿ ಲಲ್ಲ ಎಂದು ಕರೆದರು. ಲಲ್ಲ ಯೋಗೇಶ್ವರಿ ಎಂದೂ ಕರೆದರು. ಕುಂಡಲಿನೀ ಶಕ್ತಿಯನ್ನು ಉದ್ದೀಪಿಸುವ 'ಲಯಯೋಗ'ವನ್ನು ಆಕೆ ಅಭ್ಯಾಸ ಮಾಡಿದಳು. ಜನಸಾಮಾನ್ಯರನ್ನು ಆಕರ್ಷಿಸುವ ಸರಳ ಕಾಶ್ಮೀರಿ ಭಾಷೆಯಲ್ಲಿ ಶಿವನ ಮಹಿಮೆಗಳನ್ನು ಕೊಂಡಾಡುವ ಅದ್ಭುತ ಗೀತೆಗಳನ್ನು ಆಕೆ ಬರೆದಳು. 'ಓಂ'ಕಾರ ನಾದ ಉಚ್ಚಾರಣೆ ಮಾಡುತ್ತ ಉಸಿರನ್ನು ನಿಯಂತ್ರಣದಲ್ಲಿಟ್ಟುಕೊಂಡು, ಸಂಪೂರ್ಣ ಏಕಾಗ್ರತೆ ಸಾಧಿಸಿದಳು.



ಶಿವನ ಪಾದಪದ್ಮಗಳಲ್ಲಿ ಶರಣಾದಳು. ಜಾತಿ, ಮತ, ಪಂಥ, ಪಂಗಡ, ಧರ್ಮ ಮುಂತಾದ ಎಲ್ಲ ಮಿತಿಗಳನ್ನು ಮೀರಿ ತನ್ನೊಳಗಿನ ಬೆಳಕನ್ನು ಕಾಣಬೇಕೆಂದು ಆಕೆ ಪ್ರತಿಪಾದಿಸಿದಳು.

"ನನ್ನೊಳಗೆ ವಾಸ ಮಾಡುತ್ತಿದ್ದ ಆತನನ್ನು ಕಂಡಾಗ ಆತನೇ ಎಲ್ಲ, ನಾನೂ ಏನೂ ಅಲ್ಲ" ಎಂಬುದನ್ನು ಮನಗಂಡೆ ಎಂದಾಕೆ ಹೇಳುತ್ತಿದ್ದಳು.

"ಪುಸ್ತಕಗಳು ಮರೆಯಾಗುತ್ತವೆ. ಆದರೆ ಅನುಭೂತಿ ಉಳಿಯುತ್ತವೆ. ಅನುಭೂತಿ ಕಣ್ಮರೆಯಾಗಿ ಬುದ್ಧಿ ಮನಸ್ಸು ಅನಂತದಲ್ಲಿ ಸಾಗುವುದು. ಬೃಹತ್‌ನಲ್ಲಿ ಅಣು ಅಡಗುವಂತೆ ಜೀವ ಪರಮಾತ್ಮನಲ್ಲಿ ಐಕ್ಯಗೊಳ್ಳುವುದು" ಎಂಬ ನೀತಿಯನ್ನು ಆಕೆ ಸಾರಿದಳು.

**ಶ್ರೀ ಮಧ್ವಾಚಾರ್ಯರು (೧೨೩೮–೧೩೧೭), ಪಾಜಕ ಕ್ಷೇತ್ರ, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ:**

ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಮಧ್ವಾಚಾರ್ಯರ ಮೂಲ ಹೆಸರು ವಾಸುದೇವ. ಸನ್ಯಾಸದೀಕ್ಷೆ ತೆಗೆದುಕೊಂಡಾಗ ಆನಂದ ತೀರ್ಥ ಎಂಬ ನಾಮಧೇಯ ಕೊಡಲಾಯಿತಾದರೂ ಅನಂತರ ಮಧ್ವ ಎಂಬ ಹೆಸರಿನಿಂದ ಜನಪ್ರಿಯರಾದರು. ಶ್ರೀಕೃಷ್ಣನ ನಿಷ್ಠಾವಂತ ಭಕ್ತರಾದ ಇವರು ಉಡುಪಿಯಲ್ಲಿ ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ನಾರಾಯಣನನ್ನು ಭಜಿಸುವ ಸ್ತೋತ್ರಗಳು 'ದ್ವಾದಶ ಸ್ತೋತ್ರಗಳು' ಎಂದೇ ಪ್ರಖ್ಯಾತವಾಗಿವೆ. ಅವರ ಉಪದೇಶಗಳು 'ತತ್ವವೇದ' ಎಂಬ ಹೆಸರಿನಿಂದ ಕರೆಯಲ್ಪಟ್ಟಿವೆ. ಈಗ ಅದನ್ನು ದ್ವೈತ ಎಂದು ಹೇಳಲಾಗುತ್ತಿದೆ. ಉಡುಪಿಯಲ್ಲಿ ಅವರು ಅಷ್ಟಮಠಗಳನ್ನು (ಎಂಟು ಮಠಗಳನ್ನು) ಸ್ಥಾಪಿಸಿ, ಎಂಟು ಮಂದಿ ಶಿಷ್ಯರನ್ನು ನೇಮಿಸಿದರು. ಅವರು ಒಟ್ಟು ೩೭ ಗ್ರಂಥಗಳನ್ನು ಬರೆದಿದ್ದು, ಅವನ್ನೆಲ್ಲ ಒಟ್ಟಾಗಿ 'ಸರ್ವಮೂಲ ಗ್ರಂಥ' ಎಂದು ಕರೆಯಲಾಗಿದೆ.

"ಯಾವುದೇ ಹೆಸರಿನಿಂದ ಕರೆದರೂ ದೇವರು ಒಬ್ಬನೇ" ಎಂದು ಅವರು ಪ್ರತಿಪಾದಿಸಿದರು.

**ಶ್ರೀ ಮಸ್ತಿ ರಾಮ್‌ಜೀ (೧೯೩೧), ಬುದ್‌ಲಾದ, ಪಂಜಾಬ್:**

ಶ್ರೀಮಂತ ಕಾರ್ಮಿಕ ಕುಟುಂಬದಲ್ಲಿ ಹುಟ್ಟಿದ ಈತ ಸ್ವಾಮೀ ಮಸ್ತಿ ರಾಮ್‌ಜೀ ಎಂದೇ ಪ್ರಸಿದ್ಧನಾದ. ಚಿಕ್ಕಂದಿನಲ್ಲೇ ದೇವರ ನಾಮ ಸ್ಮರಣೆ ಮಾಡುತ್ತ ಕಾಲ ಕಳೆಯುತ್ತಿದ್ದ ಈತನಿಗೆ ಹೆತ್ತವರು ಸೋಹನ್ ಲಾಲ್ ಎಂಬ ಹೆಸರಿಟ್ಟರು. ಮದುವೆಯಾಗಿ ಸುಮಾರು ಆರು ವರ್ಷಗಳ ಕಾಲ ಹೆಂಡತಿಯೊಂದಿಗೆ ವಾಸ ಮಾಡಿದ. ಅಷ್ಟರಲ್ಲಿ ಜೀವನದಲ್ಲಿ ಜುಗುಪ್ಸೆ ಬಂದು, ದೇವರನ್ನು ಹುಡುಕುತ್ತ

ಲೋಕ ಸಂಚಾರಕ್ಕೆ ಹೊರಟ. ಕಾಶ್ಮೀರದ ಕುಪ್ವಾರಾ ಜಿಲ್ಲೆಯ ತಿಕ್ಕೂರ್ ಎಂಬಲ್ಲಿ ನಂದನ್ ಲಾಲ್ ಜೀ ಎಂಬ ಗುರುವಿನ ಭೇಟಿಯಾಗಿ ಆತನ ಬಳಿ ನೆಲೆ ನಿಂತ. ಗುರು ಈತನಿಗೆ ಮಸ್ತಿ ರಾಮ್ ಎಂದು ನಾಮಕರಣ ಮಾಡಿದ. ಅನಂತರ ಸ್ವಾಮೀ ಮಸ್ತಿ ರಾಮ್ ಜೀ ಎಂದು ಪ್ರಸಿದ್ಧನಾದ. ಚಿಕ್ಕಂದಿನಲ್ಲೇ ದೇವರ ನಾಮಸ್ಮರಣೆ ಮಾಡುವ ಅಭ್ಯಾಸ ಸದಾ ಮುಂದುವರಿದು ಭಕ್ತಿಯ ಪರಾಕಾಷ್ಠೆಯಲ್ಲಿ ಪಂಜಾಬಿ ಮತ್ತು ಕಾಶ್ಮೀರೀ ಭಾಷೆಗಳಲ್ಲಿ ಹಲವು ಭಕ್ತಿಗೀತೆಗಳನ್ನು ರಚಿಸಿದ. ಕಲಿಯುಗದಲ್ಲಿ ಮೋಕ್ಷ ಸಂಪಾದನೆ ಆಗಬೇಕಾದರೆ, ಭಕ್ತಿಯೊಂದೇ ಹಾದಿ ಎಂದು ಪ್ರತಿಪಾದಿಸಿದ. ಬಾರಿಪೋಡ, ಪಟೋಲಿ, ದೆಹಲಿ, ಹರಿದ್ವಾರ ಮೊದಲಾದೆಡೆಗಳಲ್ಲಿ ಆತ ತನ್ನ ಆಶ್ರಮದ ಶಾಖೆಗಳನ್ನು ತೆರೆದು ಭಕ್ತಾದಿಗಳಿಗೆ ಅನುಕೂಲ ಮಾಡಿಕೊಟ್ಟ.

**ಶ್ರೀ ಮೆಲ್ಪತ್ತೂರು ನಾರಾಯಣ ಭಟ್ಟತ್ತಿರಿ (೧೫೫೯–೧೬೫೫), ತಿರುನಾವಯ, ಮಲಪ್ಪುರಂ ಜಿಲ್ಲೆ, ಕೇರಳ:**

ಅದ್ಭುತ ಪ್ರತಿಭಾವಂತಿಕೆಯನ್ನು ಪ್ರದರ್ಶಿಸಿದ ಈ ಬಾಲಕ ಚಿಕ್ಕಂದಿನಲ್ಲಿ ಸ್ವಚ್ಛಂದ ಬದುಕನ್ನು ಬಾಳಿದ. ಹಿರಿಯರು ಮತ್ತು ಗುರುಗಳು ಸಕಾಲದಲ್ಲಿ ಎಚ್ಚರಿಸಿ ಆತನನ್ನು ಸರಿಯಾದ ದಾರಿಗೆ ಹಚ್ಚಿದ್ದರಿಂದ ಹೊಸ ಬಾಳನ್ನು ಕಾಣುವಂತಾಯಿತು. ಗುರುದಕ್ಷಿಣೆಯಾಗಿ, ಗುರುಗಳು ತಮ್ಮ ರೋಗವನ್ನು ಶಿಷ್ಯನಿಗೆ ಕರುಣಿಸುವಂತೆ ಬೇಡಿಕೊಂಡ. ಅದರಂತೆ ಗುರುಗಳ ರೋಗ ಈತನಿಗೆ ಬಂದಿತು. ರೋಗದಿಂದ ನರಳುತ್ತಿದ್ದಾಗ ಅಪ್ರತಿಮ ಶ್ರೀರಾಮಭಕ್ತರಾದ ಕವಿ ರಾಮಾನುಜ ಎಳುತ್ತಚ್ಚನ್ ಒಗಟಿನ ರೂಪದಲ್ಲಿ "ಮೀನು ಹಿಡಿಯಲು ಶುರು ಮಾಡು; ಅನಂತರ ಅದನ್ನೇ ತಿನ್ನು" ಎಂದರು. ಮಹಾವಿಷ್ಣುವಿನ ಅವತಾರಗಳ ಕುರಿತು ಕಾವ್ಯರಚನೆ ಮಾಡು ಎಂದು ಕವಿ ಕಾವ್ಯಾತ್ಮಕವಾಗಿ ಹೇಳಿದ್ದರು. ಈ ಮಾತನ್ನು ಶಿರಸಾವಹಿಸಿದ ಭಟ್ಟತ್ತಿರಿ ಗುರುವಾಯೂರಪ್ಪನ ಪಾದ ಪದ್ಮಗಳಿಗೆ ವಂದಿಸಿ ಸಂಪೂರ್ಣ ಶರಣಾಗತನಾಗಿ "ನಾರಾಯಣೀಯಂ" ಎಂಬ ಮೇರುಕೃತಿಯನ್ನು ರಚಿಸಿದ. ಸಂಸ್ಕೃತದಲ್ಲಿ ಈ ಅರ್ಥಗರ್ಭಿತವಾದ ಸುಂದರ ಕೃತಿ ರಚಿಸಿದಾಗ ಆತನ ವಯಸ್ಸು ಕೇವಲ ೨೭! ಭಾಗವತ ಪುರಾಣದಲ್ಲಿ ಉಲ್ಲೇಖಿತವಾದ ಮಹಾವಿಷ್ಣುವಿನ ಅವತಾರಗಳನ್ನು ಕುರಿತು ಇರುವ ಈ ಕೃತಿಯನ್ನು ಭಗವಾನ್ ಶ್ರೀಕೃಷ್ಣನೇ ತನ್ನ ಮೂಲಕ ಬರೆಸಿಕೊಂಡನೆಂದು ಭಟ್ಟತ್ತಿರಿ ಭಾವಿಸಿದ. ಇಡೀ ಕೃತಿಯು ಪ್ರಾರ್ಥನಾ ರೂಪದಲ್ಲಿದ್ದು, ಸ್ವತಃ ಭಗವಂತ ಇದಕ್ಕೆ ತನ್ನ ಸಮ್ಮತಿಯ ಮುದ್ರೆಯೊತ್ತಿದ್ದಾನೆಂದು ಭಾವಿಸಲಾಗಿದೆ. 'ಅಗ್ರೇಪಶ್ಯಾಮಿ' ಎಂಬ ಕೃತಿಯ ಕೊನೆಯಲ್ಲಿರುವ 'ದಶಕ' ಶ್ಲೋಕಗಳಿಂದ ಇದು ವ್ಯಕ್ತವಾಗುತ್ತದೆ. ನೂರನೆಯ 'ದಶಕ'ದವರೆಗೂ ಹೀಗೆಯೇ ದೇವರನ್ನು ಸ್ತುತಿಸುತ್ತ ತನ್ನನ್ನು ಅನುಗ್ರಹಿಸೆಂದು ಬೇಡಿಕೊಳ್ಳುತ್ತಾನೆ. ಈ ಕೃತಿಯ ಕೊನೆಯ ಸಾಲಿನ ಬರವಣಿಗೆಯ



ಸಂದರ್ಭದಲ್ಲಿ ಆತನ ವಾತರೋಗ ಪೂರ್ತಿಯಾಗಿ ಗುಣವಾಯಿತಂತೆ! ಇನ್ನೊಂದು ಐತಿಹ್ಯದ ಪ್ರಕಾರ, ಈ ಕೃತಿರಚನೆಯ ಕೊನೆಯ ವೇಳೆಗೆ ಭಗವಾನ್ ಶ್ರೀಕೃಷ್ಣ ಆತನ ಕನಸಿನಲ್ಲಿ ಬಂದು, ನಿರ್ಮಲ ಭಕ್ತಿ ಮುಖ್ಯವೇ ಹೊರತು ವಿದ್ವತ್ತಿನ ಅಹಂಕಾರವಲ್ಲ ಎಂದು ಹೇಳಿದನಂತೆ. ಆತ ಹೇಳಿದ– "ಮಹಾವಿಷ್ಣು ಅತ್ಯಂತ ದೊಡ್ಡ ದೇವರು, ಉಳಿದವರೆಲ್ಲ ಕೇವಲ ಆತನ ಅಭಿವ್ಯಕ್ತಿ ಅಥವಾ ವಿಸ್ತರಣೆಯಷ್ಟೇ" ಎಂದು ಭಟ್ಟತ್ತಿರಿ ಪ್ರತಿಪಾದಿಸಿದ.

"ನಿಜವಾದ ಭಕ್ತ ತನ್ನ ಆಂತರ್ಯದಲ್ಲೇ ಭಗವಂತನನ್ನು ಕಾಣುತ್ತಾನೆ. ಆತ್ಮವನ್ನು ಪರಮಾತ್ಮನೊಡನೆ ಐಕ್ಯಗೊಳಿಸುವ ಶ್ರದ್ಧಾವಂತನ ಪ್ರಯತ್ನ ಆತನನ್ನು ಉದ್ಧರಿಸುತ್ತದೆ. ಆತನ ಮನಸ್ಸು ಬುದ್ಧಿ ಭಾವಗಳನ್ನು ಪರಿಶುದ್ಧಗೊಳಿಸುತ್ತದೆ" ಎಂದು ನಾರಾಯಣ ಭಟ್ಟತ್ತಿರಿ ಹೇಳಿದ.

**ಶ್ರೀ ಮಿರ್ಜಾಕ (೧೮೦೫–೧೮೯೧), ಹಿಂಗಲಗುಂಡ್, ಕಾಶ್ಮೀರ:**

ಬ್ರಾಹ್ಮಣ ಕುಟುಂಬವೊಂದರಲ್ಲಿ ಲಸ್ಸ ಪಂಡಿತ್ ಎಂಬಾತನಿಗೆ ಮಗನಾಗಿ ಹುಟ್ಟಿದ ಮಿರ್ಜಾಕರ್ ಚಿಕ್ಕಂದಿನಿಂದಲೇ ಶಿವನಾಮ ಸ್ಮರಣೆ ಮಾಡುತ್ತ ಅವಿವಾಹಿತನಾಗಿ ಉಳಿದ. ಆತನ ಮಾತುಗಳು ತಾತ್ವಿಕವಾಗಿ ಆಧ್ಯಾತ್ಮಿಕವಾಗಿ ಮತ್ತು ಕೆಲವೊಮ್ಮೆ ನಿಗೂಢವಾಗಿಯೂ ಇರುತ್ತಿದ್ದವು. ಅವನು ಹಲವು ಪವಾಡಗಳನ್ನು ಮಾಡಿ ತೋರಿಸಿದ. ಒಮ್ಮೆ ದೇವಿ ಅತನಿಗೆ ಊಟದ ವೇಳೆಗೆ ಖೀರು ಸಹಿತವಾದ ಊಟವನ್ನು ಉಣಬಡಿಸಿದಳು. ಅವನು ಆಕೆಯನ್ನು ತನ್ನ ನಿಜವಾದ ತಾಯಿ ಎಂದು ಭಾವಿಸಿದ. ಹೊಲದಲ್ಲಿ ಕೆಲಸ ಮಾಡುತ್ತಿದ್ದ ಆತನಿಗೆ ನಿಜವಾದ ತಾಯಿ ಸ್ವಲ್ಪ ತಡವಾಗಿ ಊಟ ತೆಗೆದುಕೊಂಡು ಬಂದಾಗ ಏನೋ ಎಡವಟ್ಟಾಗಿದೆ ಎಂದು ಆಕೆಗೆ ಭಾಸವಾಯಿತು. ಮಗ ಹೊಟ್ಟೆ ತುಂಬಾ ಊಟ ಮಾಡಿದವನು ತೇಗುತ್ತಿದ್ದ ಮತ್ತು ಖೀರಿನ ಪರಿಮಳವೂ ಬಂತು. ತಡವಾಗಿ ಬಂದುದಕ್ಕೆ ಅವಳು ಏನೋ ಕಾರಣವನ್ನೂ ಹೇಳಿದಳು. ಆಗ ಮಗ ನೀನು ಈ ಮೊದಲೇ ಬಂದು ನನಗೆ ಊಟ ಕೊಟ್ಟೆಯಲ್ಲ ಎಂದ. ತಾಯಿಗೆ ಆಶ್ಚರ್ಯವಾಯಿತು. ಮತ್ತು ಈ ಮೊದಲೇ ಬಂದವಳು ದೇವಿಯಲ್ಲದೇ ಬೇರಾರೂ ಅಲ್ಲ ಎಂಬ ನಿರ್ಧಾರಕ್ಕೆ ಬಂದರು.

ಇನ್ನೊಂದು ಸಂದರ್ಭದಲ್ಲಿ ಮಿರ್ಜಾನ ಯಜಮಾನ ಒಂದು ಗೋಣಿಚೀಲ ತುಂಬಾ ಅಕ್ಕಿಯನ್ನು ಬೇರಾರಿಗೋ ಕೊಟ್ಟು ಬರಲು ಹೇಳಿದ. ಆದರೆ ಮಿರ್ಜಾನಿಗೆ ಅದನ್ನು ಹೊರಲು ಆಗುತ್ತಿರಲಿಲ್ಲ. ಕಷ್ಟದಲ್ಲಿ ಸಾಗಿಸುತ್ತಿರಬೇಕಾದರೆ ದಾರಿಯಲ್ಲಿ ಯಾರೋ ಒಬ್ಬರು ಬಂದು ಗೋಣಿಚೀಲವನ್ನು ತಾನು ಕೇಳಿ ಹೊತ್ತುಕೊಂಡು ತಲುಪಿಸಬೇಕಾದಲ್ಲಿಗೆ ತಲುಪಿಸಿದರು. ಮಿರ್ಜಾ ಬಹಳ ಬೇಗ ವಾಪಸು ಬಂದುದನ್ನು

ಕಂಡು ಯಜಮಾನ ಕಾರಣ ಕೇಳಿದ. ವಿಷಯ ತಿಳಿದು ಆತನಿಗೆ ತುಂಬಾ ನಾಚಿಕೆ ಆಯಿತು. ಮತ್ತು ಮಿರ್ಜಾನ ಶಿಷ್ಯನಾಗಿ ಉಳಿದು ತನ್ನ ಜೀವನ ಸವೆಸಿದ.

**ಮೀರಾಬಾಯಿ (೧೪೯೮–೧೫೪೬) ಮೆರ್ತಾ, ದ್ವಾರಕಾಜಿಲ್ಲೆ, ಗುಜರಾತ್:**

ರಾಜಸ್ಥಾನದ ರಾಥೋಡ್ ಕುಟುಂಬದ ರಜಪೂತ ರಾಜ ರತ್ನಸಿಂಗ್ ರಾಥೋಡ್‌ನ ಮಗಳಾಗಿ ರಾಜಸ್ಥಾನದಲ್ಲಿ ಜನಿಸಿದ ಈ ಯುವರಾಣಿ ಗುಜರಾತಿನ ಚಿತ್ತೋರ್ ಯುವರಾಜ ಭೋಜರಾಜನನ್ನು ವರಿಸಿದಳು. ಚಿಕ್ಕಂದಿನಿಂದಲೂ ಅವಳು ದೊಡ್ಡ ಕೃಷ್ಣ ಭಕ್ತೆ ಆಗಿದ್ದಳು. ಯುವರಾಜ ಯುದ್ಧವೊಂದರಲ್ಲಿ ಮಡಿದ. ವಿಧವೆಯಾದ ಆಕೆ ಬೇರೇನೂ ದಾರಿ ಕಾಣದೆ ಕೃಷ್ಣನನ್ನು ಇನ್ನಷ್ಟು ಗಾಢವಾಗಿ ಪ್ರೀತಿಸುತ್ತ ಆತನ ನಾಮಸ್ಮರಣೆಯಲ್ಲೇ ಶೇಷಾಯುಷ್ಯವನ್ನು ಕಳೆದಳು. ಕೃಷ್ಣನನ್ನು ಆಕೆ ಪ್ರೀತಿಯಿಂದ 'ಕಪ್ಪು ಕೃಷ್ಣ' ಎಂದೇ ಕರೆಯುತ್ತಿದ್ದಳು. ಕೃಷ್ಣನ ಮೇಲಿನ ಅತೀವ ಭಕ್ತಿಯಿಂದ ಆಕೆ ರಾಜಸ್ಥಾನೀ, ಗುಜರಾತಿ, ವ್ರಜ ಭಾಷೆ ಮತ್ತು ಹಿಂದಿಯಲ್ಲಿ ನೂರಾರು ಭಕ್ತಿ ಗೀತೆಗಳನ್ನು ರಚಿಸಿ ಭಾವ ತುಂಬಿ ಹಾಡುತ್ತಿದ್ದಳು. ಅವೆಲ್ಲ ಇಂದು ಮೀರಾ ಭಜನ್ ಎಂದೇ ಪ್ರಸಿದ್ಧ ಆಗಿವೆ. ಭಕ್ತಿ ಭಾವ, ಶರಣಾಗತಿ ಭಾವ, ಕೋಮಲ ಭಾವ, ಶೃಂಗಾರ ಭಾವ ಮೊದಲಾದವು ಆಕೆಯ ರಚನೆಗಳಲ್ಲಿ ಮಡುಗಟ್ಟಿವೆ.

ಸಂತ ರವಿದಾಸನ ಶಿಷ್ಯೆಯಾದ ಆಕೆ ಕಬೀರ್‌ದಾಸನ ಸಮಕಾಲೀನಳು. ವಿಧವೆಯಾದ ಆಕೆ ತನ್ನ ಭಾವನ ಹಿಂಸೆಯಿಂದ ಪಾರಾಗಲು ರಾಥೋರ್‌ಜಿ ದೇವಸ್ಥಾನದಲ್ಲೇ ಇರುತ್ತಿದ್ದಳು ಮತ್ತು ಅಲ್ಲಿಂದ ಹೊರಗೆ ಬರುತ್ತಿರಲಿಲ್ಲ; ಐತಿಹ್ಯದ ಪ್ರಕಾರ ಪ್ರತಿ ರಾತ್ರಿ ಆಕೆ ಕೃಷ್ಣನೊಂದಿಗೆ ಐಕ್ಯಗೊಳ್ಳುತ್ತಿದ್ದಳು. ರಾಥೋರ್‌ಜಿ ದೇವಸ್ಥಾನದ ದೇವರು ಕೃಷ್ಣನೇ ಆಗಿದ್ದ.

"ಹರಿಯ ಪಾದವ ಸದಾ ಸ್ಮರಿಸು" ಎಂಬುದು ಆಕೆಯ ಹೇಳಿಕೆಯ ಸಾರ. "ರಾಧಾಕೃಷ್ಣನ ಹೆಸರಿನ ವಿನಾ ಬೇರಿನ್ನೇನೂ ಸ್ಮರಿಸಬೇಡ" ಎಂದು ಆಕೆ ಉಪದೇಶಿಸಿದಳು.

**ಶ್ರೀ ಮಣವಾಳ ಮಾಮುನಿವರ್ (೧೩೭೦–೧೪೪೩), ತಮಿಳುನಾಡು:**

ವೈಷ್ಣವ ಮತಾನುಯಾಯಿಯಾದ ಈತ ದೊಡ್ಡ ಕೃಷ್ಣಭಕ್ತ ಮತ್ತು ಪುಣ್ಯಕ್ಷೇತ್ರಗಳನ್ನೆಲ್ಲ ಸಂದರ್ಶಿಸಿ ಪಂಡಿತರೊಂದಿಗೆ ಶಾಸ್ತ್ರ ವಿಚಾರಗಳನ್ನು ಚರ್ಚಿಸಿ ಕೃಷ್ಣನ ಮಹಿಮೆಯನ್ನು ಹಾಡಿಹೊಗಳುತ್ತಿದ್ದ. ಆದಿಶೇಷ ಮತ್ತು ಸಂತ ರಾಮಾನುಜರು ಮರುಹುಟ್ಟು ಪಡೆದು ಮಾಮುನಿವರ್ ಆಗಿ ಜನ್ಮ ತಳೆದಿದ್ದಾರೆ ಎಂದು ಜನ ಭಾವಿಸಿದ್ದರು. ತಿರುಪತಿ ವೆಂಕಟೇಶ್ವರನ ಸುಪ್ರಭಾತವನ್ನು ರಚಿಸಿ ಪ್ರಸಿದ್ಧನಾದ,



ಪ್ರತಿವಾದಿ ಭಯಂಕರ ಅಣ್ಣ ಈತನ ಶಿಷ್ಯನಾಗಿದ್ದ. ರಂಗನಾಥ ದೇವಸ್ಥಾನ ಮತ್ತು ಗರ್ಭಗುಡಿ– ಮೂಲ ವಿಗ್ರಹಗಳ ಕುರಿತು ಅರ್ಚಕರು ಮತ್ತು ಉದ್ಯೋಗಿಗಳು ನಿಷ್ಕಾಳಜಿಯಿಂದ ಇದ್ದಾಗ ಅವರ ಮನವೊಲಿಸಿ ದೇವಸ್ಥಾನದ ಆಡಳಿತಕ್ಕೆ ಭಂಗ ಬಾರದಂತೆ ಪೂಜಾ ಕಾರ್ಯಗಳಿಗೆ ಒಂದು ಭದ್ರ ತಳಪಾಯ ಹಾಕಿಕೊಟ್ಟದ್ದು ಈತ. ಶ್ರೀ ರಾಮಾನುಜರ ತತ್ವಗಳನ್ನು ಇವನಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡವರು ಯಾರೂ ಇಲ್ಲ. ರಂಗನಾಥ ದೇವಸ್ಥಾನದ ಪ್ರಾಂಗಣದಲ್ಲಿ ನಡೆಸುತ್ತಿದ್ದ ಧಾರ್ಮಿಕ ಉಪನ್ಯಾಸಗಳಿಗಾಗಿ ಖ್ಯಾತಿವೆತ್ತ ಈ ಪುಣ್ಯಾತ್ಮನ ಮಾತುಗಳನ್ನು ಕೇಳಲು ದೇವರಾದ ರಂಗನಾಥನೇ ಮನುಷ್ಯವೇಷದಲ್ಲಿ ಬಂದು ಕೂರುತ್ತಿದ್ದನಂತೆ. ಉಪನ್ಯಾಸಗಳ ಕೊನೆಯದಿನ ದೇವಸ್ಥಾನದ ಅರ್ಚಕರ ಮಗನ ಮೂಲಕ ದೇವರು ಆತನನ್ನು ಸನ್ಮಾನಿಸುತ್ತಿದ್ದರಂತೆ. ಒಮ್ಮೆ ಆ ಹುಡುಗನ ಮೂಲಕ ಒಂದು ಅಭಿನಂದನಾ ಗೀತೆಯನ್ನೂ ಹಾಡಿದರಂತೆ. ಆ ಹಾಡು ಎಷ್ಟು ಪ್ರಸಿದ್ಧವಾದುದೆಂದರೆ ಇಂದಿಗೂ ಅದನ್ನು ಹಾಡಲಾಗುತ್ತದೆ.

**ಶ್ರೀ ಮುತ್ತು ಸ್ವಾಮಿ ದೀಕ್ಷಿತರು (೧೭೭೫–೧೮೩೫), ತಿರುವಾರೂರು, ತಮಿಳುನಾಡು:**

ಸುಬ್ರಹ್ಮಣ್ಯನ ಆರಾಧ್ಯ ಭಕ್ತರಾದ ಈ ಸಂತ ಕವಿ ತನ್ನ ಪ್ರತಿಯೊಂದು ರಚನೆಯಲ್ಲೂ 'ಗುರು ಗುಹ'ನನ್ನು ಅಂಕಿತಗೊಳಿಸಿದ್ದಾರೆ. ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರೆಂದು ಅವರನ್ನು ಪರಿಗಣಿಸಲಾಗಿದೆ. ವ್ಯಕ್ತಿಯ ಮೇಲೆ ಗ್ರಹಗಳ ನಕಾರಾತ್ಮಕ ಪ್ರಭಾವಗಳನ್ನೂ ತಡೆಗಟ್ಟಲು ನವಗ್ರಹಗಳ ಕುರಿತು ಅವರು ರಚಿಸಿದ ಗೀತೆಗಳನ್ನು ಭಕ್ತಿ ಭಾವಪರವಶರಾಗಿ ಈಗಲೂ ಲಕ್ಷಾಂತರ ಜನರು ಗೀತೆಗಳನ್ನು ಹಾಡುತ್ತಿದ್ದಾರೆ. ಸಂಗೀತ ಕಲಾವಿದರಿಗೆ ಮಾತ್ರವಲ್ಲ, ಇತರ ಸಾಮಾನ್ಯ ಹಾಡುಗಾರರೂ ಅವರ ನವಗ್ರಹ ಕೀರ್ತನೆಗಳನ್ನು ಹಾಡುತ್ತಾರೆ. ಸಂಗೀತ ತರಗತಿಗಳಲ್ಲಿ ಅವರು ರಚಿಸಿದ 'ವಾತಾಪಿ ಗಣಪತಿಂ ಭಜೇ' ಎಂಬ ಗೀತೆ ಸದಾ ಅನುರಣಿಸುತ್ತಿರುತ್ತದೆ. ಈತ ರಚಿಸಿದ ಒಂದು ಹಾಡನ್ನು ಅಭ್ಯಾಸ ಮಾಡಿದ್ದರಿಂದಾಗಿ ಅವರ ಒಬ್ಬ ಶಿಷ್ಯನ ಬಹುಕಾಲದಿಂದ ಬಾಧಿಸುತ್ತಿದ್ದ ಹೊಟ್ಟೆನೋವು ಮಾಯವಾಯಿತಂತೆ.

**ಶ್ರೀನಾಥಮುನಿ (೯–೧೦ನೇ ಶತಮಾನ), ತಮಿಳುನಾಡು:**

ಒಂದು ಅತ್ಯಂತ ಬಡಕುಟುಂಬದಲ್ಲಿ ಹುಟ್ಟಿದ ಈ ಬಾಲಕನ ಮನಸ್ಸು ಸದಾ ದೇವರ ಧ್ಯಾನದಲ್ಲಿ ನಿರತವಾಗಿರುತ್ತಿತ್ತು. ಇಂತಹ ಧಾರ್ಮಿಕ ಭಾವನೆಯಿಂದಾಗಿ ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ ಸಂಚರಿಸುತ್ತ ಆಳ್ವಾರರು ಮತ್ತು ವೈಷ್ಣವ ಸಂತರು ರಚಿಸಿದ ಸಾಹಿತ್ಯವನ್ನು ಸಂಗ್ರಹಿಸುತ್ತ ಕಾಲ ಕಳೆದ. ಅದ್ಭುತ ಪಾಂಡಿತ್ಯ

ಗಳಿಸಿಕೊಂಡಿದ್ದ ಈತ ಅವುಗಳನ್ನೆಲ್ಲ ಒಟ್ಟು ಮಾಡಿ "ದಿವ್ಯ ಪ್ರಬಂಧಂ" ಎಂದು ಹೆಸರಿಸಿದ. ಅದನ್ನು ಓದಿದ ಯಾರಿಗೇ ಆದರೂ ಹೃದಯವನ್ನು ತಟ್ಟುವುದರಲ್ಲಿ ಸಂದೇಹವಿಲ್ಲ. ಭಾರತದ ನಾನಾ ಭಾಗಗಳಲ್ಲಿರುವ ೧೦೮ ಪವಿತ್ರ ಕ್ಷೇತ್ರಗಳ ದೇವರುಗಳ ಕುರಿತಾದ ಹಾಡುಗಳವು. ಆಳ್ವಾರರು ಆಯಾ ಕ್ಷೇತ್ರಗಳನ್ನು ಸಂದರ್ಶಿಸಿದಾಗ ಬರೆದ ಗೀತೆಗಳವು. ನಾಥ ಮುನಿಯ ಇನ್ನೊಂದು ಪ್ರಸಿದ್ಧ ಗ್ರಂಥ "ಯೋಗ ರಹಸ್ಯ".

**ನಾಯನ್ಮಾರರು (ಗ) ೩ರಿಂದ ೭ನೇ ಶತಮಾನದ ಅವಧಿ, ತಮಿಳುನಾಡು:**

ನಾಯನ್ಮಾರರು ಎಂದು ಕರೆಯಲಾಗುವ ಶಿವಭಕ್ತರ ವೈಭವ ಶ್ರೇಣಿಯಲ್ಲಿ ಒಟ್ಟು ೬೩ ಮಂದಿ ಸಂತರಿದ್ದಾರೆ. ಅವರೆಲ್ಲ ತಮಿಳ್ನಾಡಿನ ಬೇರೆ ಬೇರೆ ಭಾಗಗಳಿಗೆ ಸೇರಿದವರು ಮತ್ತು ೩ರಿಂದ ೭ನೇ ಶತಮಾನದ ಕಾಲಘಟ್ಟದಲ್ಲಿ ಬೇರೆ ಬೇರೆ ಅವಧಿಗೆ ಸೇರಿದವರು. ಅಲ್ಲದೆ ಬೇರೆ ಬೇರೆ ಜಾತಿಗೆ ಸೇರಿದವರು ಕೂಡ ಆಗಿದ್ದಾರೆ. ಶಿವನ ಆರಾಧಕರಾದ ಅವರು ಸರಳ ಜೀವನ ನಡೆಸಿದರು. ಶಿವನನ್ನು ಆರಾಧಿಸುವ ಭಕ್ತಿ ಸಾಹಿತ್ಯ ರಚನೆ ಮಾಡಿದರು. ಪದಗಳನ್ನು ಹಾಡುತ್ತ ದೇವಸ್ಥಾನದಿಂದ ದೇವಸ್ಥಾನಕ್ಕೆ ಸಾಗಿ ಅಲ್ಲಿಯೇ ಉಳಿಯುತ್ತ ಅಲ್ಲಲ್ಲಿನ ಶಿವದೇವರನ್ನು ಸ್ತುತಿಸುವ ಹಾಡುಗಳನ್ನು ರಚಿಸುತ್ತಿದ್ದರು. ಶಿವ ಸ್ಥಳಗಳನ್ನು ಅವರು 'ಪಾದಲ್ ಪೆಟ್ರಸ್ಥಳಮ್' ಎಂದು ಕರೆಯುತ್ತಿದ್ದರು ಮತ್ತು ಹಾಗೆ ಸಂದರ್ಶಿಸಿದ ದೇವಸ್ಥಾನಗಳ ಸಂಖ್ಯೆ ಕಡಿಮೆಯೆಂದರೂ ೨೭೫ರಷ್ಟಿತ್ತು! ಅವೆಲ್ಲ ಈಗಲೂ ಅಸ್ತಿತ್ವದಲ್ಲಿವೆ ಮತ್ತು ಕೆಲವು ದೇವಸ್ಥಾನಗಳು ೧೨೦೦ ವರ್ಷಕ್ಕಿಂತ ಪುರಾತನವಾದವು.

**ತಿರುಮುರೈ (ನಿಯಮಗಳು):–** ತಮಿಳಿನ ಶಿವಪುರಾಣಗಳನ್ನು 'ತಿರುಮುರೈ' ಎಂದು ಕರೆಯಲಾಗುತ್ತದೆ. ಇಪ್ಪತ್ತಾರು ಸಂತರು ಬರೆದ ಒಟ್ಟು ಹನ್ನೆರಡು ತಿರುಮುರೈಗಳಿದ್ದು, ಸುಮಾರು ೧೮ ಸಾವಿರದಷ್ಟು ವಚನಗಳು ಅವುಗಳಲ್ಲಿವೆ.

**ತೇವಾರಂ (ಸ್ತೋತ್ರಗಳು:):–** ಹತ್ತನೇ ಶತಮಾನದ ವೇಳೆಗೆ ನಂಬಿಯಾಂಡಾರ್ ನಂಬಿ ಎಂಬಾತ ಆ ಸಂತ ಸಮುದಾಯದಲ್ಲಿ ಮುಖ್ಯರಾದ ಮೂವರ ಶ್ಲೋಕಗಳನ್ನೆಲ್ಲ ಸಂಗ್ರಹಿಸಿ, ಸಂಪಾದಿಸಿ ಅದಕ್ಕೆ 'ತೇವಾರಂ' ಎಂಬ ಹೆಸರು ಕೊಟ್ಟ. ಆ ಮೂವರು ಸಂತರನ್ನು 'ತೇವಾರಂತ್ರಯರು' ಎಂದೇ ಕರೆಯಲಾಗುತ್ತಿದೆ. ಆ ಮೂವರೆಂದರೆ ೧. ತಿರುಜ್ಞಾನ ಸಂಬಂದರ್, ೨. ತಿರುನಾವುಕ್ಕರಸರ್ ಮತ್ತು ೩. ಸುಂದರ ಮೂರ್ತಿ. ಕೊನೆಯವನು ೬೩ನೇ ಸಂಖ್ಯೆಯ ಸಂತ. ಈತನ ಕೃತಿ 'ತಿರುತೊಂಡಾರ್ ತೋಗೈ' ಎಂಬುದರಲ್ಲಿ ಆತನಿಗಿಂತ ಪೂರ್ವದ ಎಲ್ಲ ೬೨ ಸಂತರ ಕೃತಿಗಳ ಸ್ಮರಣೆ ಇದೆ.



**ಪೆರಿಯ ಪುರಾಣಂ:–** ಎಲ್ಲಾ ೬೩ ಮಂದಿ ಸಂತರ ಜೀವನ ಚರಿತ್ರೆಯನ್ನು ಅಧಿಕೃತವಾಗಿ ಬಹುಕಷ್ಟದಿಂದ ಸಂಗ್ರಹ ಮಾಡಿ, ಪೀಠಿಕೆ ಸಹಿತ ಶೆಕ್ಕಿಲಾರ್ ಎಂಬಾತ 'ಪೆರಿಯಪುರಾಣಂ' ಎಂಬ ಹೆಸರಿನಲ್ಲಿ ಗ್ರಂಥವಾಗಿಸಿದ. ಪ್ರೀತಿ ಮತ್ತು ಭಕ್ತಿಯಿಂದ ಬಹುಬೇಗ ದೇವರ ಸಾಮೀಪ್ಯ ಸಂಪಾದಿಸಬಹುದೆಂದು ಪೆರಿಯ ಪುರಾಣಂ ತೋರಿಸಿಕೊಡುತ್ತದೆ. ಭಕ್ತಿಯ ಹಾದಿ ಶಾಸ್ತ್ರಗ್ರಂಥಗಳ ತಿಳುವಳಿಕೆ, ಜ್ಞಾನ, ಯಜ್ಞ ಯಾಗಾದಿಗಳ ಹಾದಿಗಳಿಗಿಂತ ಮಿಗಿಲಾದದ್ದು ಎಂಬುದನ್ನು ಈ ಗ್ರಂಥ ಪ್ರತಿಪಾದಿಸುತ್ತದೆ.

ನಾಯನ್ಮಾರರು ಎಂಬ ಹೆಸರಿನಲ್ಲಿರುವ ೬೩ ಸಂತರೂ ಇಲ್ಲಿ ಸಮಾವೇಶಗೊಂಡಿದ್ದಾರೆ.

ಎಲ್ಲ ೬೩ ಮಂದಿ ನಾಯನ್ಮಾರರ ಹೆಸರುಗಳು ಹೀಗಿವೆ:–

**ಬ್ರಾಹ್ಮಣ ವರ್ಗಕ್ಕೆ ಸೇರಿದವರು:–** ತಿರುನವಲೂರಿನ ಸುಂದರ ಮೂರ್ತಿ (ಗ–೪) ಮತ್ತು ಶೀರ್ಕಾನಳಿಯ ತಿರುಜ್ಞಾನ ಸಂಬಂದರ್ (ಗ–೫)*

ತಿರುಕಡವೂರಿನ ಕುಂಗಿಲಿಯಕಲಯ, ತಿರುವಾಂಬೂರಿನ ಸೋಮಶಿವ, ತಿರುನಿಂಡ್ರವೂರಿನ ಪುಸಲರ್, ತಿರು ಸತ್ತಮಂಗೈಗೆ ಸೇರಿದ ತಿರುನೀಲಕಂಠ ಯಳಪ್ಪನರ್, ಎಮಪೆರೂರಿನ ನಮ್ಮಿನಂದಿ ಅಡಿಗಳ್, ತಿರುವಾಕೂರಿನ ಸೀರಪುಳ್ಳಿ, ಶೀರ್ಕಾಳಿಯ ಗಣನಾಥ, ಶ್ರೀವಳ್ಳಿಪುತ್ತೂರಿನ ಪುರೋಹಿತ ಪುಗಳ್ತುಣ್ಯೈ, ತಿರುಪ್ಪುಗಳೂರಿನ ಪುರೋಹಿತ ರುದ್ರ ಪಶುಪತಿ, ತಿಂಗಳೂರಿನ ಅಪ್ಪುಹಿ ಅಡಿಗಳ್.

**ಕ್ಷತ್ರಿಯ ವರ್ಗಕ್ಕೆ ಸೇರಿದವರು:–** ತಿರುವಾಮೂರಿನ ತಿರುನಾವುಕ್ಕರಸರ್ (ಅಪ್ಪರ್ (ಗ–೬)*, ತಿರುವಡವೂರಿನ ಮಾಣಿಕ್ಕವಾಚಕರ್ (ಗ–೭)*, ಕೊಡುಂಗಲ್ಲೂರಿನ ದೊರೆ ಚೆರಮಾನ್ ಪೆರುಮಾಳ್, ಸೇತು ಪರ್ವತದ ಬುಡಕಟ್ಟು ರಾಜ ಮಾಯಿ ಪ್ಪೊರುಳ್, ಕೊಡವೂರಿನ ರಾಜ ಕಳರಿಸಿಂಗ, ಕೊಡವೂರಿನ ರಾಣಿ ಸೆರುತ್ತುಣ್ಯೈ, ಮದುರೈಯ ನೆಡುಮಾರ ರಾಜ ನಿಂದ್ರಸೀರ್, ಮದುರೆಯ ರಾಣಿ ಮಂಗೈಯಾರ್ ಕರಸಿಯಾರ್, ಕೊಡ್ಯೆಯಂಬಲೂರಿನ ರಾಜ ಇಡಂಗಳಿ, ಮದುರೆಯ ರಾಜ ಕೊಚ್ಚೆಂಗಳಚೋಳ, ತಿರುಮುರೈಪಾಡಿಯ ರಾಜ ಇಸೈಜ್ಞಾನಿಯರ್, ಮಣಮೇರುಕ್ಕುಡಿಯ ರಾಜನೊಬ್ಬನ ಮಂತ್ರಿ ಕುಲಚ್ಚೇರೈ, ತಿರುಚ್ಚನ ಕಟ್ಟಂಗುಡಿಯ ರಾಜನೊಬ್ಬನ ಸೇನಾಪತಿ ಸಿರುತ್ತೊಂಡರ್, ಇನ್ನೊಬ್ಬ ಸೇನಾಪತಿ ಕೂತ್ತೂರ್ವ ಕಳಂದೈ, ಮಧುರೆಯ ಸೇನಾಪತಿ ಕೋತ್ತುಪುಳಿ, ಮುನಂಪಾಡಿಯ ನರಸಿಂಹ ಮುನಿಯರೈಯಾರ್, ಉರೈಯೂರಿನ ಪುಗಳ್‌ಚೋಳ, ಕಂಚಿಯ ಕಡವರ್ ಕೋನ.

**ಸಾಮಾನ್ಯ ವರ್ಗ:–** ಕಾರೈಕಲ್‌ನ ಕಾರೈಕಲ್ ಅಮ್ಮೈಯಾರ್ (ಪುನೀತವತಿ) (ಗ–೩)*, ತಿರುನವಲೂರಿನ ಸದಯನ್, ತಿರುಕಡವೂರ್‌ನ ಕರಿಯನ್,

ತಿರುವಾರೂರಿನ ದಂಡಿ ಅಡಿಗಳ್, ತಿರುವಂಚಿಕುಳಂನ ಪೀರುಮಿಶಾಲ ಕುರುಂಬ, ಪೆನ್ನಾರ್‌ಗುಡಂನ ಕಾಳಿಕಾಂಬಾ ಇವರು ಸಾಮಾನ್ಯ ವರ್ಗದಲ್ಲಿ ಬರುತ್ತಾರೆ.

**ವೈಶ್ಯ:–** ತಿರುವೊಟ್ಟಿಯೂರ್‌ನ ಕಾಳಿಯ, ಕಾವೇರಿ ಪೂಂಪಟ್ಟಣಂನ ಐಯರ್ ಪಹೈ, ಪಳೈಅರೈಯ ಅಮರನೀಡಿ, ಮದುರೆಯ ಮೂರ್ತಿ, ತಿರುಪುಗಳೂರಿನ ಮುರುಗ.

ಇತರ ವರ್ಗಕ್ಕೆ ಸೇರಿದವರು:–

**ದನಗಾಹಿ ಕುಲದವರು:–** ತಿರುಮಂಗಲಂನ ಅಣ್ಣಾಯ, ತಿರುಚ್ಚೈಜ್ಞಾನಲ್ಲೂರ್‌ನ ವಿಚಾರ ಶರ್ಮನ್, ಸತ್ತನೂರಿನ (ಕೈಲಾಸದ?) ತಿರುಚಾಲರ್, ಅದನೂರ್‌ನ ಕೃಷಿಕೂಲಿ ಕಾರ್ಮಿಕ ನಂದನಾರ್ (ನಾಳೈಪೋವ) (ಗ–೩)*, ಹೆಂಡ ಇಳಿಸುವ ವೃತ್ತಿಯ ಎಯ್‌ನವೂರಿನ ಎನ್ನಡಿನಾಥ, ತಿರುತ್ತೂರ್‌ನ ಕುಂಬಾರ ತಿರುನೀಲಕಂಠ, ನಾಗಪಟ್ಟಣಂನ ಬೆಸ್ತ ಅಡಿಪತ್ತಿಯಾರ್, ತೊಂಡಮಂಡಲಂನ ಮಡಿವಾಳ ಕುರಿಪ್ಪು ತೊಂಡಾರ್, ಉದುಪ್ಪೂರ್‌ನ ಬೇಡ ಕಣ್ಣಪ್ಪ (ಅಥವಾ ತಿನ್ನನಾರ್) (ಗ–೧)*, ಮೈಲಾಪುರದ ಕೃಷಿಕ ವಯಿಲಾರ್ (ಗ–೮)*, ಮರನೂರ್‌ನ ಇಲ್ಲನ್ಯಂಗುಡಿ ಮಾರನ್ ಮತ್ತು ಕರವೂರ್‌ನ ಎರಿಪತ.

**ನೇಕಾರರು:–** ಸೆಂಗನ್ನೂರ್‌ನ ವಿರಲ್‌ಮೀಂಡ, ಕುಂಚರೂರ್‌ನ ಮಣಕಂಚರ, ನಿಡೂರಿನ ಮುನಿಯದವರ್, ಇರುಕ್ಕುವೇಲೂರ್‌ನ ಕಣಪುಲ್ಲ, ವಾರಿಂಜಿಯೂರ್‌ನ ಸತ್ತಿ, ತಿರುಚಂಗಮುಂಗೈಯ ಸಕ್ಕಿಯ, ತಿರುವೇರ್ಕಾಟ್‌ನ ಮುರುಗ, ಕಂಬಿಲಿಯ ನೇಸ, ತಿರುಪೆರುಮಂಗಲಂನ ಏಯರ್‌ಕೋನ್ ಕಲಿಕಮರ್, ಕನ್ನಮ್ಮಂಗಲಂನ ಅರಿವತ್ತಾಯ.

**(ಗ–೧) ಶ್ರೀ ಕಣ್ಣಪ್ಪ, ಉಡುಪ್ಪೂರ್, ತಮಿಳುನಾಡು:**

ಕೂಲಿಕೆಲಸ ಮಾಡುವ ಅತಿ ಬಡತನದ ಕುಟುಂಬದಲ್ಲಿ ಹುಟ್ಟಿದ ಈತನ ನಿಜನಾಮ ತಿನ್ನನಾರ್. ಅವಿದ್ಯಾವಂತನಾಗಿದ್ದ ಈತ ಜೀವನೋಪಾಯಕ್ಕಾಗಿ ಬೇಟೆಯಾಡುತ್ತಿದ್ದ, ಜೊತೆಗೆ ಶಿವಭಕ್ತನೂ ಆಗಿದ್ದ. ದ್ವಾಪರದ ಅರ್ಜುನ ಕಲಿಯುಗದಲ್ಲಿ ತಿನ್ನನಾಗಿ ಹುಟ್ಟಿದ್ದಾನೆ ಎಂದು ನಂಬಲಾಯಿತು. ಅರ್ಜುನನ ತಪಸ್ಸಿಗೆ ಮೆಚ್ಚಿ ಶಿವ ಪ್ರತ್ಯಕ್ಷನಾದಾಗ ಮೊದಲು ಪಾಶುಪತಾಸ್ತ್ರಬೇಕೆಂದೂ ಅನಂತರ ಮೋಕ್ಷ ದಯಪಾಲಿಸಿದರೆ ಸಾಕೆಂದೂ ಅರ್ಜುನ ವರ ಬೇಡಿದ್ದ. ತಿನ್ನನು ತಾನು ಬೇಟೆಯಾಡಿದ ಮಾಂಸದಲ್ಲಿ ಒಂದು ಪಾಲನ್ನು ಕಾಡಿನಲ್ಲಿದ್ದ ಶಿವಲಿಂಗಕ್ಕೆ ನೈವೇದ್ಯ ಮಾಡುತ್ತಿದ್ದ. ಜಿಂಕೆಯ ಮಾಂಸವನ್ನು ಶಿವ ಸ್ವಲ್ಪಾಂಶ ತಿಂದು ರುಚಿ ನೋಡುತ್ತಿದ್ದನಂತೆ. ಅನಂತರ ತಿನ್ನ ಕೊಟ್ಟ ನೀರನ್ನು ಕುಡಿಯುತ್ತಿದ್ದನಂತೆ. ಕಣ್ಣನು ತನ್ನ ಭಕ್ತಿಯನ್ನು ಪುರಾವೆ ಸಹಿತ ಪ್ರದರ್ಶಿಸಲೋಸುಗ ಮೊದಲ ಕಣ್ಣನ್ನು ಲಿಂಗಕ್ಕೆ ಅರ್ಪಿಸಿ ಶಿವ



ಪ್ರತ್ಯಕ್ಷವಾಗದೇ ಇದ್ದಾಗ ತನ್ನ ಎರಡನೇ ಕಣ್ಣನ್ನೂ ಕೀಳಲು ಉದ್ಯುಕ್ತನಾದ ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಆಗ ಶಿವ ಪ್ರತ್ಯಕ್ಷನಾಗಿ ಏನು ವರ ಬೇಕು, ಕೇಳಿಕೋ ಎಂದನಂತೆ. ಕಣ್ಣನ್ನು ಅರ್ಪಿಸಿದ್ದರಿಂದ ಆತ ಕಣ್ಣಪ್ಪನಾದ ಎನ್ನುತ್ತಾರೆ. ಆತ ಅಲ್ಲಿಯೇ, ಅಂದರೆ ಆಂಧ್ರದ ಕಾಳಹಸ್ತಿಯ ಶಿವ ದೇವಸ್ಥಾನದಲ್ಲಿ ಮೋಕ್ಷ ಹೊಂದಿದ ಎನ್ನುತ್ತಾರೆ.

**(ಗ–೨) ಭಕ್ತ ಕಾರೈಕಲ್ ಅಮ್ಮಯಾರ್: ಕಾರೈಕಲ್, ತಮಿಳುನಾಡು:**

ಕಾರೈಕಲ್‌ನ ಒಂದು ಬಡ ವೈಶ್ಯ ಕುಟುಂಬದಲ್ಲಿ ಜನಿಸಿದ ಈಕೆಯ ಪೂರ್ವದ ಹೆಸರು ಪುನೀತವತಿ. ಚಿಕ್ಕಂದಿನಿಂದಲೇ ಆಕೆ ನಟರಾಜನ ಭಕ್ತೆಯಾಗಿದ್ದಳು. ತುಂಬಾ ಬುದ್ಧಿವಂತೆ ಮತ್ತು ಪ್ರತಿಭಾವಂತೆಯಾಗಿದ್ದಳು. ಚಿಕ್ಕಂದಿನಲ್ಲೇ ದೇವರ ಕುರಿತಾದ ಶ್ಲೋಕಗಳನ್ನು ರಚಿಸುತ್ತಿದ್ದಳು. ತಮಿಳುನಾಡಿನ ಬೇರೆ ಬೇರೆ ಶಿವಕ್ಷೇತ್ರಗಳನ್ನು ಸಂದರ್ಶಿಸುತ್ತ, ಹೋದೆಡೆಯಲ್ಲೆಲ್ಲಾ ಶಿವನ ಕುರಿತ ಶ್ಲೋಕಗಳನ್ನು ರಚಿಸಿ ಹಾಡುತ್ತಿದ್ದಳು. ಆಕೆಗೆ ತುಂಬ ಆಧ್ಯಾತ್ಮಿಕ ಅನುಭವಗಳಾಗುತ್ತಿದ್ದವು. ಗಂಡನಿಗೆ ಆಕೆಯ ಭಕ್ತಿಯ ಬಗ್ಗೆ ಅನುಮಾನ ಮೂಡಲಾಗಿ, ತನ್ನ ಶಕ್ತಿಯನ್ನು ತೋರಿಸಲೋಸುಗ ಆಕೆ, ತನ್ನ ಇಷ್ಟದೈವದ ಕೃಪೆಯಿಂದ ಒಂದು ಮಾವಿನ ಹಣ್ಣನ್ನು ಸೃಷ್ಟಿ ಮಾಡಿ ಗಂಡನ ಕೈಗೆ ಕೊಟ್ಟಳು. ಆತ ಅದನ್ನು ಹಿಡಿದುಕೊಂಡ ಕೂಡಲೇ ಅದು ಮಾಯವಾಗಿ ಹೋಯಿತು. ಬೇರೆ ಕಡೆಗಳಲ್ಲಿದ್ದ ಭಕ್ತಾದಿಗಳು ಆಕೆಯನ್ನು ಕಾರೈಕಲ್ ಅಮ್ಮಯಾರ್ ಅಥವಾ 'ಕಾರೈಕಲ್‌ನ ತಾಯಿ' ಎಂದು ಕರೆಯುತ್ತಿದ್ದರು. ದೇವರು ಸ್ವತಃ ಆಕೆಯನ್ನು 'ಪೂಜ್ಯತಾಯಿ' ಅಥವಾ 'ಅಮ್ಮನವರೇ' ಎಂದು ಕರೆಯುತ್ತಿದ್ದನಂತೆ! "ನೀನು ಜಾಗ್ರತೆಯಿಂದ ನರ್ತಿಸು; ಹೆಜ್ಜೆಯನ್ನು ಎಚ್ಚರದಿಂದ ಎತ್ತಿಡು. ಇಲ್ಲದಿದ್ದರೆ ಈ ಭೂಮಿ ಪುಡಿ ಪುಡಿಯಾಗಿ ಹೋದೀತು!" ಎಂದು ಶಿವನನ್ನು ಆಕೆ ಎಚ್ಚರಿಸಿದಳಂತೆ.

ತನ್ನ ಒಂದು ಹಾಡಿನಲ್ಲಿ ಶಿವನನ್ನು ಕುರಿತೇ ಆಕೆ ಹೀಗೆ ಹೇಳಿದಳು. "ವಿಷದ ಹಾವು ನಿನ್ನನ್ನು ಸುತ್ತಿಕೊಂಡಿರುವಾಗ, ಮನುಷ್ಯನ ತಲೆ ಬುರುಡೆಯ ಹಾರ ಹಾಕಿಕೊಂಡಿರುವಾಗ ನಾನು ನಿನ್ನ ಬಳಿ ಬರುವುದಾದರೂ ಹೇಗೆ?"

**(ಗ–೩) ಶ್ರೀನಂದನಾರ್, ೫ನೇ ಶತಮಾನದ ಅಂತ್ಯಭಾಗ ಮತ್ತು ೬ನೇ ಶತಮಾನದ ಆದಿ ಭಾಗ.**

ತಮಿಳು ನಾಡಿನ ತಂಜಾವೂರಿನ ಮೇಲನಲ್ಲೂರು: ಸಮಾಜದ ಅತ್ಯಂತ ನಿಮ್ನ ವರ್ಗದಲ್ಲಿ (ಪರಯ ಜಾತಿ) ಹುಟ್ಟಿದ ಈತನ ಮೂಲ ಹೆಸರು ಮಾರನ್. ಆದರೆ ಜನಪ್ರಿಯವಾಗಿ 'ನಾಳೈ ಪೋವರ್' (ನಾಳೆ ಹೋಗುವವರು) ಎಂದು ಜನರು ಆತನಿಗೆ ಅಡ್ಡ ಹೆಸರಿಟ್ಟರು. ಚಿಕ್ಕವನಿದ್ದಾಗ ದೇವ ದೇವತೆಗಳ ಮಣ್ಣಿನ ವಿಗ್ರಹ ಮಾಡಿ, ಅದರ ಮುಂದೆ ಹಾಡಿ, ನರ್ತಿಸಿ ಅನಂತರ ಹುಡುಗರನ್ನೆಲ್ಲಾ

ಸೇರಿಸಿ ಅದನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಿದ್ದನಂತೆ. ಅದೊಂದು ಆಟ. ಯುವಕನಾಗುತ್ತಿದ್ದಂತೆ ಊರವರ ಮನೆಗಳಲ್ಲಿ ಕೃಷಿ ಕೆಲಸ, ಕೂಲಿ ಕೆಲಸ ಮಾಡಿಕೊಂಡಿರುತ್ತಿದ್ದ. ಸತ್ತ ಎಮ್ಮೆ ಹಸುಗಳನ್ನು ಕೊಂಡೊಯ್ಯುವುದು ಆತನ ಕೆಲಸವಾಗಿತ್ತು. ಶಿವನ ಭಕ್ತನಾಗಿರುತ್ತ ಹಗಲಿರುಳು ಅವನ ಧ್ಯಾನದಲ್ಲೇ ಇರುತ್ತಿದ್ದ. ಚಿದಂಬರಂ ಬಳಿಯ ತಿರುಪ್ಪುಂಗೂರ್‌ನ ಶಿವ ದೇವಸ್ಥಾನವನ್ನು ಜೀವನದಲ್ಲಿ ಒಮ್ಮೆಯಾದರೂ ಸಂದರ್ಶಿಸಬೇಕೆಂಬ ಹೆಬ್ಬಯಕೆಯನ್ನು ಆತನ ಯಜಮಾನ ಇಲ್ಲಸಲ್ಲದ ಶರತ್ತು ಹಾಕಿ ತಪ್ಪಿಸುತ್ತ ಬಂದ. ಅವುಗಳಲ್ಲಿ ಒಂದು ಶರತ್ತು ಏನೆಂದರೆ, ಒಂದೇ ರಾತ್ರಿಯಲ್ಲಿ ಆತನ ೩೫ ಎಕರೆ ಭೂಮಿಯನ್ನು ಉತ್ತು ಹದ ಮಾಡಬೇಕೆಂಬುದು! ಭಕ್ತನ ಸಲುವಾಗಿ ಶಿವನೇ ಆ ಕೆಲಸ ಮಾಡಿ ಪೂರೈಸಿದ. ಅದರ ಫಲಿತಾಂಶವಾಗಿ ನಂದನಾರ್‌ನ ಭಕ್ತಿಯನ್ನು ಮತ್ತು ದೇವರಿಗೆ ನಿಕಟವಾಗಿರುವುದನ್ನು ಆ ಭೂಮಾಲಿಕ ಒಪ್ಪಿಕೊಂಡು ಬಿಟ್ಟ.

ತಿರುಪ್ಪುಂಗೂರ್ ದೇವಸ್ಥಾನದ ಮುಂದೆ ಶಿವನನ್ನು ಭಕ್ತಿಪೂರ್ವಕ ಸಂದರ್ಶಿಸ ಬೇಕೆಂದು ಬಂದು ನಿಂದವನಿಗೆ ಅಲ್ಲೂ ದುರದೃಷ್ಟ ಕಾಡಿತು. ದೇವರ ವಿಗ್ರಹದ ಮುಂದೆ ಅಡ್ಡಲಾಗಿ ನಂದಿಯ ವಿಗ್ರಹ ಇತ್ತು. ಹಾಗಾಗಿ ಶಿವನನ್ನು ನೋಡಲಾಗಲಿಲ್ಲ. ನಂದಿ ಶಿವನ ವಾಹನ. ಶಿವನ ಆಣತಿಯ ಮೇರೆಗೆ ನಂದಿ ತುಸು ಸರಿದು ನಿಂತಿತು. ಮಹಾಭಕ್ತ ನಂದನಾರ್ ಶಿವನನ್ನು ಪೂರ್ಣ ರೂಪದಲ್ಲಿ ಕಣ್ತುಂಬ ನೋಡಿ ಸಂತೋಷಿಸಿದ. ಅಂದಿನಿಂದ ಊರ ಜನರೆಲ್ಲ ಆತನನ್ನು 'ನಂದನಾರ್' (ನಂದಿಯ ಅವತಾರ) ಎಂದು ಕರೆದರು.

ದೇವಸ್ಥಾನದ ಒಳ ಪ್ರವೇಶಿಸಲು ದೇವಸ್ಥಾನದ ಆಡಳಿತ ವರ್ಗ ಬಿಡಲಿಲ್ಲ. ಅವನು ಭಕ್ತಿಯಿಂದ ಹಾಡಿದ:

"ನೀನು ಕರುಣಾಸಾಗರ, ಅಲ್ಲವೇನು?
ಈ ಪರಯನು ನಿನಗೆ ಏನಾದರೂ ಕಾಣಿಕೆ ಕೊಡಲು ಶಕ್ಯನೇನು?
ನಿನ್ನ ಮುಕ್ತಿರೂಪದ ನೃತ್ಯವನ್ನು ನೋಡಲು ನಾನು ಒಳಗೆ ಬರಲೇನು?
ಓ! ತಿಲ್ಲೈವರದಾ, ಬಹುಕಾಲದ ನನ್ನ ಆಸೆಯನ್ನು ನೆರವೇರಿಸಿಕೊಳ್ಳಲೋಸುಗ
ನಾನು ಒಳಗೆ ಬರಲೇನು?"

ಶಿವನು ಆಡಳಿತ ವರ್ಗದವರಿಗೆ ರಾತ್ರಿ ಕನಸಿನಲ್ಲಿ ಕಾಣಿಸಿಕೊಂಡು 'ನಿಮಗಿಂತ ಭಕ್ತ ಶ್ರೇಷ್ಠನಾದ ಮಾರನ್ ಬಹಳ ಮೇಲು" ಎಂದು ಹೇಳಿದ. ಮರುದಿನ ಆತನಿಗೆ ದೇವಸ್ಥಾನ ಪ್ರವೇಶಕ್ಕೆ ಅನುಮತಿ ನೀಡಲಾಯಿತು. ಅದೇ ಮೊದಲು ಮತ್ತು ಕೊನೆ. ದೇವಸ್ಥಾನದ ಒಳಗೆ ಹೋದ ಮಾರನ್ ಹೊರಗೆ ಬರಲೇ ಇಲ್ಲ; ದೇವರೊಂದಿಗೆ ಅಲ್ಲಿಯೇ ಆತ ಐಕ್ಯವಾಗಿ ಹೋದ. ದೇವಸ್ಥಾನಕ್ಕೆ ತಾಗಿಕೊಂಡಂತೆ ಇರುವ ಬಾವಿಯನ್ನು ಗಣಪತಿಯ ಸಹಾಯದೊಂದಿಗೆ ನಂದನಾರ್ ತೋಡಿದನೆಂದು ಐತಿಹ್ಯವಿದೆ.



**(ಗ-೪) ಶ್ರೀ ಸುಂದರ ಮೂರ್ತಿ, ಕ್ರಿ.ಶ. ೯ನೇ ಶತಮಾನದ, ತಿರುನವಲೂರ್, ತಮಿಳುನಾಡು:**

ಕುಲೀನ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಬಾಲಕ ಬಾಲ್ಯದಲ್ಲೇ ತನ್ನ ಆರಾಧ್ಯದೈವವಾದ ಶಿವನ ಕುರಿತು ಅದ್ಭುತವಾದ ಗೀತೆಗಳನ್ನು ರಚಿಸಲು ತೊಡಗಿದ. ಅತ್ಯಂತ ಸರಳ ಶಬ್ದಗಳಲ್ಲಿ ವಿರಳ ಅರ್ಥಗಳನ್ನು ತುಂಬುತ್ತ ಶಿವನ ಮಹಿಮೆಗಳನ್ನು ಕೊಂಡಾಡುವ ಆತನ ಗೀತೆಗಳನ್ನು ಎಲ್ಲರೂ ಮೆಚ್ಚಿಕೊಂಡರು. ಆತನಿಗಿಂತ ಪೂರ್ವದ ನಾಯನ್ಮಾರರ ರಚನೆಗಿಂತ ಅವನವು ಸಂಪೂರ್ಣ ಭಿನ್ನವಾಗಿದ್ದವು. ತಾನು ಭಗವಂತನ ಸೇವಕನಲ್ಲ; ಬದಲಾಗಿ ಸ್ನೇಹಿತ ಎಂಬ ಭಾವನೆ ಆತನ ರಚನೆಗಳ ಒಳಸತ್ವವಾಗಿತ್ತು. ಶಿವನನ್ನು ಆತನ ವಿಚಿತ್ರ ವೇಷಭೂಷಣಕ್ಕಾಗಿ ಒಬ್ಬ ಹುಚ್ಚ ಎಂದು ಈತ ಲೇವಡಿ ಮಾಡಿದ. ಕಣ್ಣಿದ್ದೂ ಕುರುಡನಾಗಬೇಕಾಗಿ ಬಂದ ಪರಿಸ್ಥಿತಿಗಾಗಿ ಆತನ ಮೇಲೆ ಕರುಣೆ ವ್ಯಕ್ತಪಡಿಸಿದ!

ಮೊದಲ ಹೆಂಡತಿ ಇರುವಾಗಲೇ ಆತ ಇನ್ನೊಂದು ಮದುವೆಯಾದ. ಎರಡನೇ ಮದುವೆಯನ್ನು ಸ್ವತಃ ಶಿವನೇ ಮುಂದೆ ನಿಂತು ಮಾಡಿಸಿದನಂತೆ. ಈ ಮದುವೆ ಮಾಡಿಸುವಾಗ ಯಾವುದೇ ಕಾರಣಕ್ಕೂ ಎರಡನೇ ಹೆಂಡತಿಯನ್ನು ಬಿಟ್ಟುಬಿಡಬಾರದು ಎಂದು ಶಿವ ಶರತ್ತು ಹಾಕಿದನಂತೆ.

ಅನಂತರ ಕಾರಣಾಂತರದಿಂದ ಕೊಟ್ಟ ವಾಗ್ದಾನ ತಪ್ಪಿ ಸುಂದರಮೂರ್ತಿ ಎರಡನೇ ಹೆಂಡತಿಯ ಕೈಬಿಟ್ಟು ಮೊದಲ ಹೆಂಡತಿಯ ಬಳಿಗೆ ಹೋದ. ಅವನ ಎರಡು ಕಣ್ಣುಗಳ ದೃಷ್ಟಿಯೂ ಹೋಯಿತು. ಈ ಶಿಕ್ಷೆಯನ್ನು ಶಿವನೇ ಕೊಟ್ಟಿದ್ದಾನೆ ಎಂದಾತ ಹೇಳಿದ. ಶಿವನ ಮೇಲಿನ ಅತೀವ ಭಕ್ತಿ ಮತ್ತು ತಪ್ಪಿನ ಪಶ್ಚಾತ್ತಾಪದಿಂದಾಗಿ ಕೆಲವು ಕಾಲದ ನಂತರ ಒಂದು ಕಣ್ಣಿನ ದೃಷ್ಟಿ ಮರಳಿ ಬಂತು. ಮತ್ತೆ ಕೆಲವು ಸಮಯದ ಬಳಿಕ ಶಿವ ತನ್ನ ಶಿಷ್ಯನಿಗೆ ಎರಡನೇ ಕಣ್ಣು ಕಾಣಿಸುವಂತೆ ಮಾಡಿದ.

ಸುಂದರ ಮೂರ್ತಿಯ ರಚನೆಗಳು ಎಷ್ಟು ಸುಂದರವಾಗಿವೆ ಎಂದರೆ, ಶಿವನ ಕುರಿತ ತಿರುಮರೈ ಗ್ರಂಥದಲ್ಲಿ ಮೊದಲ ಏಳು ಮಂದಿ ಸಂತ ಕವಿಗಳ ಸಾಲಿನಲ್ಲಿ ಈತನ ರಚನೆಗಳು ಸೇರಿಕೊಂಡಿವೆ.

"ನಾನು ಸೇವಕರ ಸೇವಕ; ಆಳುಗಳ ಆಳು. ಕುಂಬಾರ ತಿರುನೀಲನಿಗೆ, ಕುರಿಕಾಯುವ ಅಣಾಯನಿಗೆ, ಬೇಡರ ಕಣ್ಣಪ್ಪನಿಗೆ, ಗಾಣಿಗ ಕಲಿಯಾಗೆ ಮತ್ತು ಚಂಡಾಲ ನಂದನಿಗೆ ನಾನು ಸೇವಕ."

**(ಗ–೫) ಶ್ರೀ ತಿರುಜ್ಞಾನ ಸಂಬಂದರ್ (೫ನೇ ಶತಮಾನ) ಶೀರ್ಕಾಳಿ, ತಮಿಳುನಾಡು:**

ಈತ ಒಬ್ಬ ಬಾಲಪ್ರತಿಭೆ. ಕೇವಲ ಮೂರು ವರ್ಷದವನಿದ್ದಾಗಲೇ ಈತ ಪುಂಖಾನುಪುಂಖವಾಗಿ ಸ್ವತಂತ್ರ ಹಾಡುಗಳನ್ನು ಹೇಳಲು ಆರಂಭಿಸಿದ! ಅತ್ಯಂತ ದೊಡ್ಡ ಶಿವಭಕ್ತನಾಗಿದ್ದು ಈ ಜ್ಞಾನಿ ಶಿವನ ಮೇಲೆ ಮತ್ತು ಭಸ್ಮ (ವಿಭೂತಿ) ಕುರಿತಾಗಿ ಗೀತೆಗಳನ್ನು ರಚಿಸಿದ. ಅವೆಲ್ಲ 'ತಿರುನೀರುಪ್ಪತ್ತಿಗಂ' ಎಂಬ ಕೃತಿಯಲ್ಲಿ ಸಂಗ್ರಹವಾಗಿವೆ. ಸ್ಥಳೀಯ ಐತಿಹ್ಯದ ಪ್ರಕಾರ, ಶಿವನ ಅರ್ಧಾಂಗಿಯಾದ ಪಾರ್ವತಿಯು ಈ ಬಾಲಕ ಮೂರು ವರ್ಷದವನಾಗಿದ್ದಾಗ ಜ್ಞಾನದ ಜೊತೆಗೆ ಅಮೃತಪಾನವನ್ನು ಮಾಡಿಸಿದಳಂತೆ! ಶಿವ ಸಮೀಪದ ಕೆರೆಯಿಂದ ಸ್ನಾನ ಮಾಡಿ ಬರುವಾಗ ಈ ಬಾಲಕನ ಕಡೆ ಬಾಯಿಯಲ್ಲಿ ಹಾಲು ಕಂಡಿತು. ಪಾರ್ವತಿಯೇ ಹಾಲು ಕುಡಿಸಿರಬೇಕೆಂದು ಶಿವನಿಗೆ ಅನಿಸಿತಂತೆ. ಬಾಲಕ ಒಂದು ಹಾಡಿನ ಮೂಲಕವೇ ಶಿವನನ್ನು ಮಾತಾಡಿಸಿದನಂತೆ. ಬಾಲಕನ ಪ್ರತಿಭೆ ಕಂಡು ದೇವಸ್ಥಾನದ ಅರ್ಚಕರು "ಓಂ ನಮಃ ಶಿವಾಯ" ಎಂದು ಬರೆದ ಚಿನ್ನದ ತಾಳವೊಂದನ್ನು ಪುರಸ್ಕಾರವಾಗಿ ನೀಡಿದರಂತೆ. ಆತ ಕೆಲವು ಪವಾಡಗಳನ್ನು ಮಾಡಿದನೆಂದೂ ಹೇಳುತ್ತಾರೆ. ಶಿವನೇಸರ ಎಂಬ ಶೆಟ್ಟಿಯ ಮಗಳು ಪೂಂಬವೈ ಏನೋ ಕಾರಣದಿಂದ ತೀರಿಕೊಂಡಾಗ ಒಂದು ಶ್ಲೋಕ ಹೇಳಿ ಆಕೆಗೆ ಮರಳಿ ಜೀವ ಬರುವಂತೆ ಮಾಡಿದನಂತೆ. ಈ ಘಟನೆ ಚೆನ್ನೈಯ ಮೈಲಾಪುರದ ಕಪಾಲೀಶ್ವರ ದೇವಸ್ಥಾನದಲ್ಲಿ ನಡೆಯಿತೆಂದು ಹೇಳಲಾಗಿದೆ. ಶೀರ್ಕಾಳಿಯ ಸಂತ ಎಂದೇ ಪ್ರಸಿದ್ಧವಾಗಿರುವ ಈತ ಬೇರೆ ಬೇರೆ ಶಿವ ದೇವಾಲಯಗಳನ್ನು ಸಂದರ್ಶಿಸುತ್ತಿದ್ದ ಸಂದರ್ಭದಲ್ಲಿ ತನ್ನ ಹದಿನಾರನೇ ವರ್ಷಕ್ಕೆ ಶಿವೈಕ್ಯನಾದ! ತೇವಾರಂ ತ್ರಿಮೂರ್ತಿಗಳಲ್ಲಿ ಈತ ಪ್ರಮುಖನಾದವನು. ಶೈವ ಪವಿತ್ರ ಗ್ರಂಥ 'ತೇವಾರಂ'ನ ಬಹುತೇಕ ಭಾಗಗಳಲ್ಲಿ ಈತನ ರಚನೆಗಳೇ ತುಂಬಿಕೊಂಡಿವೆ.

"ದಿನಕ್ಕೆ ಮೂರು ಬಾರಿಯಾದರೂ ದೇವರನ್ನು ನೆನೆಸಿಕೋ. ಯಾಕೆಂದರೆ ನಾಳೆ ನೀನು ಬದುಕಿರುತ್ತಿ ಎಂಬ ಖಾತ್ರಿಯಿಲ್ಲ!" ಎಂದು ಆತ ಹೇಳುತ್ತಿದ್ದ.

**(ಗ–೬) ತಿರುನಾವುಕ್ಕರಸರ್, (ಕ್ರಿ.ಶ. ೭ನೇ ಶತಮಾನ), ತಿರುವಾಮೂರ್, ತಮಿಳುನಾಡು:**

ಜೈನ ತಂದೆ ತಾಯಿಗಳಿಗೆ ಹುಟ್ಟಿದನಾದರೂ ಅನಂತರ ಶಿವ ಮತಾವಲಂಬಿಯಾದ. ಅವನಿಗೆ ಗುಣಪಡಿಸಲಾಗದ ಉದರ ಸಂಬಂಧೀ ಖಾಯಿಲೆಯಿತ್ತು. ಶಿವನನ್ನು ಆರಾಧಿಸತೊಡಗಿದ ಮೇಲೆ ಅದು ವಾಸಿಯಾಯಿತು. ಹಾಗಾಗಿ ಶಿವಭಕ್ತಿ ಇಮ್ಮಡಿಸಿ ತಮಿಳುನಾಡಿನಾದ್ಯಂತ ಇರುವ ಶಿವ ದೇವಸ್ಥಾನಗಳನ್ನು ಸಂದರ್ಶಿಸುತ್ತ ಶ್ಲೋಕಗಳನ್ನು ರಚಿಸಿ ಹಾಡುತ್ತ ಇರುತ್ತಿದ್ದ. ಕಾವ್ಯಾತ್ಮಕ ಅಭಿವ್ಯಕ್ತಿಯಲ್ಲಿ ಶಿವನ ನಾನಾರೂಪ ಮತ್ತು ಸಾಹಸಗಳನ್ನು ಕುರಿತು ಹೇಳುತ್ತಿದ್ದ. ಆದರೆ ತನಗಾಗಿ



ಏನನ್ನೂ ಬೇಡಿಕೊಳ್ಳಲಿಲ್ಲ. ಆಗಿನ ಅಲ್ಲಿನ ಜೈನ ದೊರೆ ಮಹೇಂದ್ರವರ್ಮನು ತಿರುನಾವುಕ್ಕರಸನನ್ನು ವಾಪಸ್ಸು ಜೈನಧರ್ಮಕ್ಕೆ ಮರಳಿಸಲು ಪ್ರಯತ್ನಿಸಿ ವಿಫಲನಾದ. ಕೋಪಗೊಂಡು ಸುಣ್ಣದ ಕುಲುಮೆಗೆ ನೂಕಿಸಿದ, ಆನೆಯಿಂದ ತುಳಿಸಿ ಸಾಯಿಸಲು ನೋಡಿದ, ವಿಷವಿಕ್ಕಲು ಪ್ರಯತ್ನಿಸಿದ, ನೀರಿನಲ್ಲಿ ಮುಳುಗಿಸಿ ಸಾಯಿಸಲು ಹೇಳಿದ. ಎಲ್ಲ ಪ್ರಯತ್ನಗಳೂ ವಿಫಲವಾದಾಗ ಆ ದೊರೆ ಮಹೇಂದ್ರವರ್ಮ ತಾನೇ ತಿರುನಾವುಕ್ಕರಸನ ಶಿಷ್ಯನಾದ. ಹಲವಾರು ಬಾರಿ ಶಿವನ ಬಳಿ ಹೋಗುವ ಅವಕಾಶವಿದ್ದಾಗಲೂ ಉಪಯೋಗಿಸಿಕೊಳ್ಳದ ತಾನೆಂತಹ ಮೂರ್ಖ ಎಂದು ರಾಜ ಹೇಳಿಕೊಂಡ. ಈ ಸಂತ, ಇತರ ಮೂವರೊಂದಿಗೆ, ಅಂದರೆ ಸಂಬಂದರ್, ಸುಂದರರ್ ಮತ್ತು ಮಾಣಿಕ್ಕವಾಚಕರ್ ಜೊತೆಗೆ ಮೇಲ್ಮಟ್ಟದ ನಾಲ್ವರು ನಾಯನ್ಮಾರರ ಸಾಲಿನಲ್ಲಿ ನಿಲ್ಲುತ್ತಾರೆ.

**(ಗ–೭) ಶ್ರೀ ತಿರುವಡವೂರಾರ್ ಅಥವಾ ಮಾಣಿಕ್ಕವಾಚಕರ್, (ಕ್ರಿ.ಶ. ೯ನೇ ಶತಮಾನ), ತಿರುವಡವೂರ್, ತಮಿಳುನಾಡು:**

ಈತನ ನಿಜನಾಮ ತಿಳಿಯದು; ಆದರೆ ಊರಿನ ಹೆಸರಿನಿಂದ, ಅಂದರೆ ತಿರುವಡವೂರ್ ಎಂಬ ಊರಿನವನಾದುದರಿಂದ ತಿರುವಡವೂರಾರ್ ಎಂದೇ ಪ್ರಸಿದ್ಧನಾದ. ಶಿವನ ಅನುಪಮ ಭಕ್ತನಾದ ಈತ ಶಿವನೊಬ್ಬ 'ಪ್ರಭು' ಅಥವಾ 'ಗುರು' ಎಂದು ಭಾವಿಸಿದ್ದ. ಹಾಗಾಗಿ ಶಿವನನ್ನು ಕುರಿತಾದ ಭಕ್ತಿ ಸಾಹಿತ್ಯ ರಚಿಸಿದ. 'ಮಾಣಿಕ್ಯ ವಾಚಕರ್' (ಅವನು ಮಾತಾಡುವುದೆಲ್ಲವೂ ಮಾಣಿಕ್ಯದಂತೆ) ಎಂಬ ಹೆಸರನ್ನು ಸ್ವತಃ ಶಿವನೇ ಆತನಿಗೆ ನೀಡಿದನೆಂಬುದು ಐತಿಹ್ಯ. ದೊರೆ ವರಗುಣ ಪಾಂಡ್ಯನ ಮುಖ್ಯಮಂತ್ರಿಯಾಗಿದ್ದ ಈತ ಕುದುರೆಗಳನ್ನು ಕೊಳ್ಳಲೆಂದು ಇಟ್ಟಿದ್ದ ಹಣವನ್ನು ಪೆರುಂದುರೈ ಎಂಬಲ್ಲಿ ಶಿವ ದೇವಸ್ಥಾನ ಕಟ್ಟಿಸಲು ಬಳಸಿದನಂತೆ. ಕೋಪಗೊಂಡ ರಾಜ ಇವನನ್ನು ಜೈಲಿಗೆ ತಳ್ಳಿದ. ಶಿವನೇ ಪಾಂಡ್ಯ ರಾಜನ ಕನಸಿನಲ್ಲಿ ಬಂದು, ಶಿಷ್ಯನನ್ನು ಬಿಡುಗಡೆಗೊಳಿಸಲು ಮಧ್ಯಸ್ಥಿಕೆ ವಹಿಸಬೇಕಾಗಿ ಬಂತು. ಶಿವನ ಕುರಿತ ಅದಮ್ಯ ಭಕ್ತಿ ಹಾಡಾಗಿ ಹರಿದಿರುವುದನ್ನು ಆತನ ಸಾಹಿತ್ಯದಲ್ಲಿ ಗುರುತಿಸಬಹುದು. ದೇವರು ಕರುಣಾಸಾಗರ ಮತ್ತು ಆತನ ದಯೆಗೆ ಮಿತಿಯಿಲ್ಲ ಎಂದು ಆತ ಹೇಳುತ್ತಿದ್ದ. ಏಕಾಗ್ರತೆಯ ಧ್ಯಾನ ಮತ್ತು ಅನುಪಮ ಭಕ್ತಿಯಿಂದ ದೈವ ಸಾನ್ನಿಧ್ಯ ಪಡೆಯಬಹುದೆಂದು ಪ್ರತಿಪಾದಿಸಿದ. ದೇವರಲ್ಲಿ ಒಂದಾಗುವುದಕ್ಕಿಂತ ಬೇರೆಯಾದ ಪುಣ್ಯಕಾರ್ಯವಿಲ್ಲ ಎನ್ನುತ್ತಿದ್ದ. ಹಲವಾರು ಪವಾಡಗಳನ್ನು ಆತ ಮಾಡಿದನೆಂದು ಹೇಳುತ್ತಾರೆ. ಸಿಲೋನ್‌ನ ಬೌದ್ಧ ದೊರೆಯೊಬ್ಬನ ಮೂಕಿ ಮಗಳಿಗೆ ಮಾತು ಬರುವಂತೆ ಮಾಡಿದನಂತೆ. 'ತಿರುಮುರೈ' ಎಂದು ಕರೆಯಲ್ಪಡುವ ಎಂಟು ಪವಿತ್ರ ಗ್ರಂಥಗಳಲ್ಲಿ ಈತನ 'ತಿರುವೈಗಮ್' ಮತ್ತು 'ತಿರುಕ್ಕೋವೈಯಾರ್' ಸೇರುತ್ತವೆ.

ಭಗವದ್ಗೀತೆಯಲ್ಲಿ ದೇವರು (ಶ್ರೀಕೃಷ್ಣ) ಮನುಷ್ಯನನ್ನು ಉದ್ದೇಶಿಸಿ ಮಾತಾಡುವಂತಿದ್ದರೆ, ಆತನ 'ತಿರುವಾಚಗಮ್'ನಲ್ಲಿ ಮನುಷ್ಯನು ದೇವರನ್ನು ಕುರಿತು ಮಾತಾಡುವಂತಿದೆ. 'ತಿರುವಾಚಗಂ' ಎಂದರೆ 'ಪವಿತ್ರ ಮಾತುಗಳು' ಎಂದು ಅರ್ಥ.

**(ಗ–೮) ಶ್ರೀ ವಯಿಲಾರ್ (ಕ್ರಿ.ಶ. ೯ನೇ ಶತಮಾನ), ಮೈಲಾಪುರ, ತಮಿಳುನಾಡು:**

ಕೃಷಿ ಕಾಯಕದಲ್ಲಿ ನಿರತವಾಗಿದ್ದ ಮೇಲು ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ವಯಿಲಾರ್ ಜನಿಸಿದ. ಹಿರಿಯರಂತೆ ಕೃಷಿ ಕೆಲಸದಲ್ಲಿ ತೊಡಗದೆ ಹಗಲು ರಾತ್ರಿ ದೇವರ ಪೂಜೆ ಮಾಡುವುದರಲ್ಲೇ ನಿರತನಾಗಿರುತ್ತಿದ್ದ. ಅವನ ದೇವಸ್ಥಾನ ಕಾಲ್ಪನಿಕವಾದದ್ದು. ಮನೋಮಂದಿರದಲ್ಲಿ ದೇವಸ್ಥಾನವನ್ನು ಕಲ್ಪಿಸಿಕೊಂಡು ಅದಕ್ಕೆ ಚಿನ್ನದ ಕಂಬವಿರುವಂತೆ, ಮುತ್ತು ರತ್ನ ವಜ್ರ ವೈಢೂರ್ಯಗಳಿಂದ ಅಲಂಕರಿಸಿಕೊಂಡಿರುವಂತೆ ಕಲ್ಪಿಸಿಕೊಳ್ಳುತ್ತಿದ್ದ. ಆ ದೇವಸ್ಥಾನದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಬೆಲೆಬಾಳುವ ಆಭರಣ ಹೊದೆಸಿರುವಂತೆಯೂ ಪರಿಮಳದ ಹೂಗಳಿಂದ ಅಲಂಕರಿಸಿಕೊಂಡಂತೆಯೂ ಕಲ್ಪಿಸಿಕೊಳ್ಳುತ್ತಿದ್ದ. ಹಗಲೂ ರಾತ್ರಿ ಪೂಜಿಸಿದ. ಮಳೆ ಬಿಸಿಲೆನ್ನದೆ ಪೂಜಿಸಿದ. ಈ ಮೌನ ಪೂಜೆಯ ಯೋಗದಲ್ಲಿ ಶಿವಲಿಂಗ ಮಾಯವಾಯಿತು ಮತ್ತು ಅದರೊಂದಿಗೆ ಅವನ ಜೀವನವೂ ಲಿಂಗದಲ್ಲಿ ಐಕ್ಯವಾಯಿತು.

ಅವನ ಮನಸ್ಸೇ ದೇವಾಲಯವಾಗಿತ್ತು. ಜ್ಞಾನ ಜ್ಯೋತಿಯಾಗಿತ್ತು. ಬುದ್ಧಿ ಅಭಿಷೇಕವಾಗಿತ್ತು. ಭಕ್ತಿ ನೈವೇದ್ಯವಾಗಿತ್ತು. ಮಾನಸಿಕ ಪೂಜೆಯ ಮೌಲ್ಯವನ್ನು ಅವನು ಜಗತ್ತಿಗೆ ತೋರಿಸಿಕೊಟ್ಟ. ಆ ಮೂಲಕ ಸ್ವರ್ಗವೆಂಬುದು ಎಷ್ಟು ಸಮೀಪ, ಸುಲಭ ಮತ್ತು ಇಷ್ಟಾಗಿಯೂ ಎಷ್ಟು ಅಮೂಲ್ಯವಾದದ್ದು ಎಂಬುದನ್ನು ತೋರಿಸಿಕೊಟ್ಟ.

**ಶ್ರೀ ನಾಮದೇವ (ಕ್ರಿ.ಶ. ೧೨೭೦–೧೩೫೦), ನರಸಿಂಗ, ಮಹಾರಾಷ್ಟ್ರ:**

ದರ್ಜಿ ಕೆಲಸ ಮಾಡುತ್ತಿದ್ದ ಕೆಳ ಜಾತಿಯ ದಾಮ ಶೆಟ್ಟಿ ಮತ್ತು ಗೊನ್ನಯಿಬಾಯಿ ದಂಪತಿಗಳಿಗೆ ಮಗನಾಗಿ ಹುಟ್ಟಿದ ನಾಮದೇವ. ಯುವಕನಾಗಿದ್ದಾಗ ಕಳ್ಳನೂ ದರೋಡೆಕೋರನೂ ಆಗಿದ್ದ. ಒಮ್ಮೆ ಒಬ್ಬ ತಾಯಿ ಮತ್ತು ತಂದೆ ಇಲ್ಲದ ಆಕೆಯ ಮಗುವಿನ ಅತ್ಯಂತ ಕಷ್ಟಕರವಾದ, ದುಃಖದ, ಗೋಳಿನ, ಕರುಳು ಹಿಂಡುವ ಕರುಣ ಕಥೆಯನ್ನು ಕೇಳಿದ ಬಳಿಕ ಅವನ ಹೃದಯ ಪರಿವರ್ತನೆ ಆಯಿತು. ಆ ತಾಯಿ ಮತ್ತು ಮಗುವಿಗೆ ತಂದೆ ಇರಲಿಲ್ಲ. ತಂದೆ ಕೊಲ್ಲಲ್ಪಟ್ಟಿದ್ದ. ವಿಚಿತ್ರವೆಂದರೆ ಆ ತಂದೆಯನ್ನು ಕೊಂದವನು ಇವನೇ ಆಗಿದ್ದ! ಪರಿವರ್ತನೆಗೊಂಡ ನಾಮದೇವ ದೊಡ್ಡ ದೈವ ಭಕ್ತನಾದ; ವಿಠ್ಠೋಬನ (ಕೃಷ್ಣ) ಪರಮ ಭಕ್ತನಾದ. ಹಿಂದಿ ಮತ್ತು



ಮರಾಠಿಯಲ್ಲಿ ತನ್ನ ಇಷ್ಟದೈವವನ್ನು ಕುರಿತು ಹಾಡುಗಳನ್ನು ಬರೆಯತೊಡಗಿದ. ಹೃದಯ ಪರಿಶುದ್ಧಿ, ಮಾನವೀಯತೆ, ಶರಣಾಗತಿ, ಕ್ಷಮೆ, ದೇವರ ದಯೆ ಮೊದಲಾದವು ಅವನ ರಚನೆಗಳ ಮುಖ್ಯ ವಸ್ತು. ಆತನ ಭಕ್ತಿ ಪುರಸ್ಸರವಾದ ಹಾಡುಗಳು ಜನಮನವನ್ನು ಗೆದ್ದವು; ಆದರೆ ಸ್ಥಳೀಯ ಮೇಲ್ವರ್ಗದವರು ಅವನನ್ನು ವಿರೋಧಿಸಿದರು. ಆ ಹಾಡುಗಳನ್ನೆಲ್ಲ ನೀರಿಗೆ ಒಗೆದು ಬಿಡಲು ಅವರು ಆದೇಶಿಸಿದರು. ಅದರಂತೆ ಅವನು ಮಾಡಿದ. ಆದರೆ ಆ ಕಟ್ಟನ್ನು ನದೀನೀರು ಹಾಳು ಮಾಡದೆ ದಡಕ್ಕೆ ತಂದುಹಾಕಿತು! ಗುರು ಗ್ರಂಥ ಸಾಹಿಬ್‌ನಲ್ಲಿ ನಾಮದೇವನ ಎಂಬತ್ತು ಅಭಂಗಗಳನ್ನು ಸೇರಿಸಲಾಗಿದೆ. ಸ್ಥಳೀಯ ನಂಬಿಕೆಗಳ ಪ್ರಕಾರ ಇವನು ಸಶರೀರಿಯಾಗಿ ಅದೃಶ್ಯನಾದನಂತೆ. ಪ್ರಸಿದ್ಧ ಸಂತ ಜ್ಞಾನದೇವನ ಸಮಕಾಲೀನ ಈತ. "ದೇವರೊಬ್ಬನೇ, ಅವನು ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುತ್ತಾನೆ. ಎಲ್ಲೆಲ್ಲಿ ನೋಡಿದರೂ ನೀನು ಆತನನ್ನೇ ಕಾಣುವೆ" ಎಂದು ನಾಮದೇವ ಪ್ರತಿಪಾದಿಸಿದ.

**ಶ್ರೀ ನಾರಾಯಣಗುರು (೧೮೫೬–೧೯೨೮), ಚೆಂಪಳಂತಿ, ತಿರುವನಂತಪುರ, ಕೇರಳ:**

ಈ ಸಂತ ಸಮಾಜದ ಅತ್ಯಂತ ಕೆಳವರ್ಗದಲ್ಲಿ ಜನಿಸಿದ. ಪರಿಶುದ್ಧ ಮತ್ತು ಸರಳ ಜೀವನ ಮಾಡುತ್ತ ಬಂದ ಈತನ ಚಿಂತನೆ ಉನ್ನತವಾಗಿತ್ತು. ಹಾಡುಗಳು ಸತ್ತ್ವಯುತವಾಗಿದ್ದವು. ಇವನು ಸಮಾಜ ಪರಿವರ್ತನೆಗಾಗಿ ಹೋರಾಡಿ ಕ್ರಾಂತಿಕಾರಿಯಾಗಿಯೂ ಮೂಡಿಬಂದ. ಅದರಿಂದಾಗಿ ಕೆಳವರ್ಗದ ಒಂದು ಸಮುದಾಯಕ್ಕೆ ಸಮಾಜದಲ್ಲಿ ಗುರುತಿಸಿಕೊಳ್ಳಲು ಭದ್ರ ತಳಪಾಯ ಒದಗಿ ಬಂದಂತಾಯಿತು. ಬಡ ಮತ್ತು ಶೋಷಿತ ಸಮುದಾಯಕ್ಕೆ ಇವನು ಒಬ್ಬ ನೇತಾರನಂತೆ ಕಂಡುಬಂದ. ಆದ್ದರಿಂದ ಎಲ್ಲರಿಗೂ ಗುರುವಾದ. ಮಾತೃಭಾಷೆ ಮಲಯಾಳಂ ಅಲ್ಲದೆ, ತಮಿಳು ಮತ್ತು ಸಂಸ್ಕೃತದಲ್ಲಿಯೂ ಆತನಿಗೆ ಪಾಂಡಿತ್ಯವಿತ್ತು. ಮಲಯಾಳಂನಲ್ಲಿ 'ಆತ್ಮೋಪದೇಶ ಶತಕಂ', ಸಂಸ್ಕೃತದಲ್ಲಿ 'ದರ್ಶನ ಮಾಲಾ', ತಮಿಳಿನಲ್ಲಿ 'ತೇವಾರ್ ಪದಕ್ಕಂಗಳ್' ಮತ್ತು ನೈತಿಕ–ಆಧ್ಯಾತ್ಮಿಕ ಮೌಲ್ಯವಿರುವ ಇತರ ಹಲವಾರು ಕೃತಿಗಳನ್ನು ರಚಿಸಿದ. "ಒಂದೇ ಜಾತಿ, ಒಂದೇ ಮತ, ಒಬ್ಬನೇ ದೇವರು" ಎಂಬ ಬಹುದೊಡ್ಡ ಉಪದೇಶವನ್ನು ಎಲ್ಲರಿಗೂ ಬಿತ್ತಿದ (ಒರು ಜಾತಿ, ಒರು ಮತಂ, ಒರು ದೈವಂ).

**ಶ್ರೀ ನರಸಿಂಹ ಮೆಹ್ತಾ (೧೪೧೪–೧೪೮೧), ವಲಜಾ, ಜುನಾಗಢ, ಸೌರಾಷ್ಟ್ರ, ಗುಜರಾತ್:**

ನಗರ್ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಈತ ಜಾತಿ ಪದ್ಧತಿಯ ಕಡುವಿರೋಧಿಯಾಗಿದ್ದ. ಎಲ್ಲ ಮನುಷ್ಯರೂ ಹರಿಜನರು ಅಥವಾ ಹರಿಯ ಜನರು ಎಂದು ಹೇಳುತ್ತಿದ್ದ ನರಸೀ ಮೆಹ್ತಾ. ಎಲ್ಲರೂ ಅವನನ್ನು ಹಾಗೇ

ಕರೆಯುತ್ತಿದ್ದರು. ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದ. ಆದರೆ ಆತನ ತಂದೆ ತಾಯಿಯರು ಆತನ ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡುದರಿಂದ ಆಸ್ತಿಯನ್ನೆಲ್ಲ ಅವರಿವರು ದೋಚಿಕೊಂಡರು. ನರಸೀ ಮೆಹ್ತಾ ತನ್ನ ಸಹೋದರನೊಂದಿಗೆ ಅನಾಥನಾದ ಮತ್ತು ಜೀವನೋಪಾಯಕ್ಕೆ ತುಂಬ ಕಷ್ಟಪಡಬೇಕಾಯಿತು. ವೈಷ್ಣವನಾದುದರಿಂದ ನಂದಕುಮಾರನ (ಕೃಷ್ಣ) ಪರಮ ಭಕ್ತನಾಗಿದ್ದ. ಭಕ್ತಕವಿಯಾದುದರಿಂದ, ಭಗವಂತನ ನಾಮಸ್ಮರಣೆಯ ರೂಪದಲ್ಲಿರುವ ಅವನ ರಚನೆಗಳು ಮಾತೃಭಾಷೆ ಗುಜರಾತಿಯಲ್ಲಿವೆ. ಅವನೊಬ್ಬ ಹುಟ್ಟು ಕವಿ. ತನ್ನ ಹಾಡುಗಳನ್ನು ತಾನೇ ಹಾಡುತ್ತಿದ್ದ. ಅವನ ಸುಮಾರು ನೂರರಷ್ಟು ಹಾಡುಗಳು ಲಭ್ಯ ಇವೆ. 'ವೈಷ್ಣವ ಜನತೋ ತೇನೇ ಕಹಿಯೇ!' ಎಂಬ ಗೀತೆ ಪ್ರತಿಯೊಬ್ಬ ಗುಜರಾತಿಯ ನಾಲಗೆಯಲ್ಲಿಯೂ ಗುಣಿ ಗುಣಿಸುತ್ತಿರುತ್ತದೆ. ಅವನ ಗೀತೆಗಳು ಎಷ್ಟು ಮಧುರವಾಗಿವೆಯೆಂದರೆ ಗುಜರಾತಿ ಭಾಷೆ ಇರುವಷ್ಟು ಕಾಲವೂ ಅವು ಇರಬಲ್ಲವು. ಕಾವ್ಯಕಲ್ಪನೆ, ವಸ್ತುವಿನ ಶ್ರೀಮಂತಿಕೆ, ಭಾವದ ವೈಭವಗಳಿಂದಾಗಿ ಗುಜರಾತಿ ಸಾಹಿತ್ಯದಲ್ಲಿ ಅವನ್ನು ಮೇಲ್ಮಟ್ಟದಲ್ಲಿ ಪರಿಗಣಿಸಲಾಗುತ್ತದೆ. ಒಮ್ಮೆ ಗುಜರಾತಿನ ದೇವಸ್ಥಾನವೊಂದರಲ್ಲಿ ಕಳ್ಳತನದ ಆಪಾದನೆಯನ್ನು ಅವನ ಮೇಲೆ ಹೊರಿಸಲಾಯಿತು. ತಾನು ನಿರಪರಾಧಿ ಎಂಬುದನ್ನು ಸಾಬೀತುಪಡಿಸಲು ಅವನು ದೇವರನ್ನು ಪ್ರಾರ್ಥಿಸಿದ. ಗರ್ಭಗುಡಿಯ ಬಾಗಿಲು ತಾನಾಗಿ ತೆರೆದು ದೇವರು ಎಲ್ಲರಿಗೂ ದರ್ಶನ ನೀಡಿದ ಮತ್ತು ಮೇಲಿನಿಂದ ಪುಷ್ಪಾಹಾರವೊಂದು ಬಂದು ಅವನ ಕೊರಳಿಗೆ ಬಿತ್ತು! ಜನರೆಲ್ಲ ತಮ್ಮ ತಪ್ಪಿಗಾಗಿ ಪಶ್ಚಾತ್ತಾಪಗೊಂಡರು.

ಕೃಷ್ಣನ ಮಹಿಮೆ, ಆತನ ಶ್ರೇಷ್ಠತೆಯ ಗುಣಗಾನ ಮಾಡುವ ಅವನ ಉಪದೇಶದ ಸಾರವೆಂದರೆ–

"ನನ್ನನ್ನು ನಂಬು. ಈ ಪ್ರಾಪಂಚಿಕ ಸುಖಸಂತೋಷಗಳು ನೆರಳಿನಂತೆ ಮಾತ್ರ. ಕೃಷ್ಣನ ಹೊರತಾಗಿ ಉಳಿದದ್ದೆಲ್ಲಾ ಅಶಾಶ್ವತ."

"ಇಡೀ ಜಗತ್ತಿನಲ್ಲಿ ಹರಿಯೇ ನೀನೊಬ್ಬನೇ ಸತ್ಯ. ವೈವಿಧ್ಯ ಉಳ್ಳವರು ಮತ್ತು ಅನಂತನು. ನೀನೇ ಗಾಳಿ; ನೀನೇ ಭೂಮಿ ಮತ್ತು ನೀನೇ ಪರ್ವತ, ಮರ ಹಾಗೂ ಆಕಾಶದವರೆಗೆ ಅರಳಿರುವ ಪುಷ್ಪ!"

"ಓ! ಹರಿಯೇ ನೀನೇ ಆರಂಭ ಮತ್ತು ನೀನೇ ಅಂತ್ಯ. ನೀನು ಸತ್ಯ ಮತ್ತು ನೀನೇ ನಿಜವಾದ ಸತ್ಯ."

**ಶ್ರೀ ನಿಂಬಾರ್ಕರ್ (೧೦೮೮–೧೧೬೨), ಮುರುಗರಪಟ್ಟಂ, ಮಹಾರಾಷ್ಟ್ರ:**

ಬಳ್ಳಾರಿಯಲ್ಲಿದ್ದ ಜಗನ್ನಾಥ ಮತ್ತು ಸರಸ್ವತಿ ಎಂಬ ತೆಲುಗು ಬ್ರಾಹ್ಮಣ ದಂಪತಿಗಳ ಪುತ್ರನಾಗಿ ಜನಿಸಿದ ಬಾಲಕ ದೈವಭಕ್ತನಾಗಿದ್ದ. ಲೋಕ ಸಂಚಾರ ಮಾಡುತ್ತ ವೃಂದಾವನದ ಬಳಿ ಗೋವರ್ಧನದ ನಿಂಬಾ ಎಂಬ ಹಳ್ಳಿಯಲ್ಲಿ ನೆಲೆನಿಂತ. ಸಾಯುವವರೆಗೂ ಇಲ್ಲಿಂದ ಕದಲುವುದಿಲ್ಲ ಎಂದು ಶಪಥ ಮಾಡಿ, ಆ ಊರಿನವನೇ ಆದ. ನಿಂಬಾಹಳ್ಳಿಯಲ್ಲಿ ನೆಲೆನಿಂತುದರಿಂದ ನಿಂಬಾರ್ಕರ್ ಆದ. ಭಕ್ತರು ಹಾಗೂ ಅನುಯಾಯಿಗಳಿಂದ ಮಹಾವಿಷ್ಣುವಿನ ಸುದರ್ಶನ ಚಕ್ರದ ಅಪರಾವತಾರ ಎಂದು ಕರೆಸಿಕೊಂಡ. ಸೂರ್ಯಾಸ್ತದ ಬಳಿಕ ನಿಂಬೆ ಹಣ್ಣಿನ ಗಿಡದ ಮೇಲಿಂದ ಮತ್ತೆ ಸೂರ್ಯೋದಯವಾಗುವಂತಹ ಪವಾಡ ಮಾಡಿ ತೋರಿಸಿದನಂತೆ. ತದನಂತರ "ನಿಂಬಾರ್ಕ" ಎಂಬ ಹೆಸರು ಆತನಿಗೆ ಬಂತೆಂದು ಐತಿಹ್ಯವಿದೆ. ದ್ವೈತಾದ್ವೈತ ತತ್ವವನ್ನು ಪ್ರತಿಪಾದಿಸಿದ. ಈ ಸಂತ ಕವಿ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಮರಾಠಿ ಭಾಷೆಯಲ್ಲಿ ರಾಧೆ–ಕೃಷ್ಣ ಕುರಿತು ಹಲವಾರು ಗೀತೆಗಳನ್ನು ರಚಿಸಿದ್ದು, ವೈಷ್ಣವ ಮತದ ರಾಧಾಕೃಷ್ಣ ಉಪಾಸನಾ ಪಂಥವನ್ನು ಹುಟ್ಟುಹಾಕಿದ. ರಾಧೆ ಮತ್ತು ಕೃಷ್ಣರ ನಡುವಣ ದೈವೀ ಸಂಬಂಧ ಆತನ ರಚನೆಗಳ ಮುಖ್ಯ ವಸ್ತು. ಅವರಿಬ್ಬರೂ ದೇವರ ಅಭಿನ್ನ ಅಂಗಗಳಾಗಿದ್ದು, ಅವರನ್ನು ಬೇರ್ಪಡಿಸಲಾಗದು ಎಂದು ಹೇಳಿದ. ಬ್ರಹ್ಮಸೂತ್ರದ ಮೇಲೆ 'ವೇದಾಂತ ಪಾರಿಜಾತ ಸೌರಭ' ಎಂಬ ಟೀಕಾಗ್ರಂಥವನ್ನು ರಚಿಸಿದ್ದಾನೆ. ಆತನ ಶ್ರದ್ಧೆ, ನಿಷ್ಠೆ ಮತ್ತು ಭಕ್ತಿಗೆ ಮೆಚ್ಚಿದ ದೇವರು, ಪೂಜಾ ಕೈಂಕರ್ಯದ ಒಂದು ದಿನ ಸ್ವರ್ಗದ ಋಷಿ ಸನತ್ಕುಮಾರನನ್ನು ಭೇಟಿಯಾಗಲು ಆದೇಶಿಸಿದನಂತೆ. ಅಲ್ಲಿ ಸನತ್ಕುಮಾರನು ನಿಂಬಾರ್ಕನಿಗೆ ರಾಧಾಕೃಷ್ಣ ಮಂತ್ರೋಪದೇಶ ಮಾಡಿ, ಮುಂದೆ ನಿಂಬಾರ್ಕ ಕಾಶ್ಮೀರದಲ್ಲಿ ಹುಟ್ಟಲಿರುವುದಾಗಿಯೂ ಅನಂತರದ ಜನ್ಮದಲ್ಲಿ ನಬದ್ವೀಪದಲ್ಲಿ (ಕೃಷ್ಣ ಚೈತನ್ಯ) ಹುಟ್ಟಿ ಜನರಲ್ಲಿ ಕೃಷ್ಣ ಭಕ್ತಿಯನ್ನು ಹರಡಲಿರುವು ದಾಗಿಯೂ, ಭವಿಷ್ಯ ನುಡಿದನಂತೆ.



**ಶ್ರೀ ಪೂಂತಾನ್ತು ನಂಬೂದಿರಿ (೧೫೪೭–೧೬೪೦) ಅಂಡಿಪುರಂ, ಕೇರಳ):**

ಈತನ ನಿಜನಾಮ ತಿಳಿಯದು. ಆದರೆ ಪೂಂತಾಂನಂ ಎಂಬ ಬಡ ನಂಬೂದಿರಿ ಕುಟುಂಬದಲ್ಲಿ ಹುಟ್ಟಿದ್ದರಿಂದ ಪೂಂತಾನ್ತು ನಂಬೂದಿರಿ ಎಂದೇ ಪ್ರಸಿದ್ಧನಾದ. ಮದುವೆಯಾಗಿ ಬಹಳಕಾಲ ಮಕ್ಕಳಾಗಲಿಲ್ಲ. ಅಂತೂ ತುಂಬ ತಡವಾಗಿ ಒಬ್ಬ ಮಗ ಹುಟ್ಟಿದರೂ ಅನಾರೋಗ್ಯದಿಂದ ಅವನು ತೀರಿಕೊಂಡ. ಅನಂತರದ ೫೪ ವರ್ಷಗಳ ಜೀವಾವಧಿಯನ್ನು (ಒಟ್ಟು ೯೩ ವರ್ಷಗಳ ಕಾಲ ಈತ ಬದುಕಿದ್ದ) ಗುರುವಾಯೂರಪ್ಪನ ದೇವಾಲಯ ಮತ್ತು ಸುತ್ತಮುತ್ತಲೇ ಕಳೆದ. "ಪುಟ್ಟ ಕೃಷ್ಣ, ನಮ್ಮೆದೆಯಲ್ಲೇ ಸದಾಕಾಲ ನರ್ತಿಸುತ್ತಿರಬೇಕಾದರೆ ನಮ್ಮ ಸ್ವಂತ ಬಾಲಕೃಷ್ಣ ನಮಗೇಕೆ ಬೇಕು?" ಎಂದು ಕೇಳುತ್ತಿದ್ದ. ಹೀಗೆ ಅವನು ತನಗೆ ತಾನೇ ಸಾಂತ್ವನ ಮಾಡಿಕೊಳ್ಳುತ್ತಿದ್ದ. ಒಂದು ಸಾರಿ ಆತನು ದಾರಿಯಲ್ಲಿ ನಡೆದುಕೊಂಡು

ಹೋಗುತ್ತಿದ್ದಾಗ, ಕೃಷ್ಣದೇವರು 'ಮಂಗತಚ್ಚನ್' ಎಂಬ ಸ್ಥಳೀಯ ನೇಕಾರನ ರೂಪದಲ್ಲಿ ಕಾಣಿಸಿಕೊಂಡು ದರೋಡೆಕೋರರಿಂದ ಪಾರು ಮಾಡಿದ. ತನ್ನನ್ನು ಪಾರುಮಾಡಿದ ನೆನಪಿಗೆ ಆ ನೇಕಾರನಿಗೆ ಇವನು ಒಂದು ಉಂಗುರವನ್ನು ಕೊಡುಗೆಯಾಗಿ ನೀಡಿದ. ಮರುದಿನ ದೇವಸ್ಥಾನದ ಅರ್ಚಕ ಗಂಧ ಪ್ರಸಾದ ನೀಡುವಾಗ, ಹಿಂದಿನ ದಿನ ತಾನು ನೇಕಾರನಿಗೆ ಕೊಟ್ಟಿದ್ದ ಉಂಗುರವನ್ನು ಅರ್ಚಕ ಪ್ರಸಾದರೂಪವಾಗಿ ಪೂಂತಾನಂಗೆ ನೀಡಿದ! ಭಕ್ತಿ, ಪರಿಶುದ್ಧತೆ ಮತ್ತು ಸರಳತೆಯ ಪ್ರತಿರೂಪವಾಗಿ ಈ ಸಂತ ಇದ್ದ. ಆತನ ಭಕ್ತಿರೂಪದ ರಚನೆಗಳು ಜನಸಮುದಾಯದ ಹೃದಯಕ್ಕೆ ಲಗ್ಗೆಯಿಡುವಂತಿದ್ದವು. ಮತ್ತು ಸರಳ ಆಡು ಮಾತಿನಲ್ಲಿದ್ದ ಅವು ದೇವರ ನಾಮಾವಳಿಯಿಂದಾಗಿ ಭಕ್ತಿಯೊಂದೇ ಮೋಕ್ಷ ಸಾಧನೆಗೆ ಹಾದಿ ಎಂಬುದನ್ನು ಸಾರುವಂತಿದ್ದವು. ಮಲಯಾಳಂ ಭಾಷೆಯಲ್ಲಿ ಆತ ಬರೆದ 'ಶ್ರೀಕೃಷ್ಣ ಕರ್ಣಾಮೃತಂ' ಮತ್ತು 'ಸಂತಾನಗೋಪಾಲಂ' ಆತನ ಭಕ್ತಿ ಪದವನ್ನು ಲೋಕಕ್ಕೆ ಸಾರುವಂತಿವೆ. ಆತ ಬರೆದ ಗ್ರಂಥ 'ಜ್ಞಾನಪ್ಪಾನ' (ಜ್ಞಾನದ ಹಾಡುಗಳು) ಪ್ರತಿಯೊಬ್ಬ ಕೇರಳದ ಹಿಂದೂಗಳ ಮನೆಯಲ್ಲಿಯೂ ಇದ್ದು, ಉತ್ಕೃಷ್ಟ ರಚನೆಯಾಗಿದೆ ಮತ್ತು ವಿಖ್ಯಾತವಾಗಿದೆ. "ಆತನ ಅಸಂಖ್ಯ ನಾಮಾವಳಿಯಲ್ಲಿ ಕೊನೇಪಕ್ಷ ದಿನಕ್ಕೊಂದು ಬಾರಿ ಬಿಡುವಿದ್ದಾಗ ಅಥವಾ ಕನಸಿನಲ್ಲಿ ಆನಂದಕ್ಕಾಗಿ ಅಥವಾ ಇತರರ ಸಲುವಾಗಿಯಾದರೂ, ಎಲ್ಲಿಯೇ ಇದ್ದಾಗಲಾದರೂ ಒಂದೇ ಒಂದು ಬಾರಿ ಆತನ ಹೆಸರನ್ನು ಹೇಳು ಅಥವಾ ಕೇಳು. ನಿನ್ನ ಗುರಿ ಅಥವಾ ಉದ್ದೇಶ ಈಡೇರುತ್ತದೆ" ಎಂದು ಹೇಳಿದ.

**ಶ್ರೀ ಪಟ್ಟಿನತ್ತಾರ್ (ಕ್ರಿ.ಶ. ೧೦ನೇ ಶತಮಾನ), ಪುಲ್ಲವನೇಶ್ವರಂ, ತಮಿಳುನಾಡು:**

ಶಿವನೇಸರ ಮತ್ತು ಜ್ಞಾನ ಕಲಾಬಾಯಿ ಎಂಬ ಶ್ರೀಮಂತ ವರ್ತಕ ದಂಪತಿಗಳ ಮಗನಾಗಿ ಹುಟ್ಟಿದ ಈತ ಒಬ್ಬ ಪ್ರಸಿದ್ಧ ಸಂತ ಕವಿ. ತಿರುವೆಂಗಾಡು ದೇವಸ್ಥಾನದ ಶಿವದೇವರ ಪ್ರಸಾದರೂಪವಾಗಿ ಹುಟ್ಟಿದ ಮಗನಿಗೆ ತಿರುವೆಂಗಡರ್ ಎಂದೇ ಹೆಸರಿಟ್ಟರು. ಅನಂತರ ಪಟ್ಟಿನತ್ತಾರ್ ಎಂದು ಪ್ರಸಿದ್ಧನಾದ. ಸಣ್ಣ ಹರೆಯದಲ್ಲಿ ಸಂಪತ್ತನ್ನೆಲ್ಲಾ ಸಿಕ್ಕಸಿಕ್ಕವರಿಗೆ ಹಂಚಿ, ಶಿವದೇವರ ಆರಾಧನೆ, ಪೂಜೆಯಲ್ಲಿ ನಿರತನಾಗಿ ಶೇಷಾಯುಷ್ಯವನ್ನು ಸವೆಸಿದ. ಶಿವಭಕ್ತನಾದುದರಿಂದ ತಮಿಳುನಾಡಿನಲ್ಲಿರುವ ಎಲ್ಲ ಶಿವ ದೇವಾಲಯಗಳನ್ನು ಸಂದರ್ಶಿಸುತ್ತ, ಸರಳ ತಮಿಳಿನಲ್ಲಿ ಶಿವನ ಕುರಿತಾದ ಭಕ್ತಿಗೀತೆಗಳನ್ನು ರಚಿಸಿ ಹಾಡುತ್ತಿದ್ದ. ತಿರುವೆಂಗಾಡುನಲ್ಲಿರುವ ಶಿವ ದೇವಾಲಯದ ಮಂಟಪದಲ್ಲಿ ಆಳವಾದ ತಪಸ್ಸಿನಲ್ಲಿ ಕೂತು ಬಿಡುತ್ತಿದ್ದ. ಎಷ್ಟೋಬಾರಿ ಪವಾಡಗಳನ್ನು ಮಾಡಿ ತೋರಿಸುತ್ತಿದ್ದ. ಒಮ್ಮೆ ಆತನ ಸಹೋದರಿ ವಿಷ ಹಾಕಿದ ಲಡ್ಡುವನ್ನು ಆತನಿಗೆ ತಿನ್ನಲು ಕೊಟ್ಟಳು. ಆದರೆ ದೇವರ ದಯೆಯಿಂದ ಅದನ್ನು ತಿಳಿದುಕೊಂಡ



ಆತ, ಆ ಲಡ್ಡುವನ್ನು ಆಕೆಯ ಮನೆಯ ಮೇಲೆ ಬಿಸಾಡಿದ. ಪರಿಣಾಮವಾಗಿ ಮನೆ ಉರಿದು ಭಸ್ಮವಾಗಿ ಹೋಯಿತು. ಆತನ ತಾಯಿ ತೀರಿಕೊಂಡಾಗ ದೇಹವನ್ನು ಮಲಗಿಸಿದ್ದ ಕಾಷ್ಠದಿಂದ ಒಣಕಟ್ಟಿಗೆಗಳನ್ನೆಲ್ಲ ತೆಗೆದು ಹಸಿಯಾದ ಬಾಳೆ ಎಲೆಗಳ ರಾಶಿ ಮೇಲೆ ಆಕೆಯನ್ನು ಮಲಗಿಸಿದ. ತನ್ನ ಗೀತೆಗಳಿಂದ ಹತ್ತು ಚರಣಗಳನ್ನು ಅತ್ಯಂತ ದುಃಖಭರಿತನಾಗಿ ಹಾಡಿದ. ಅಲ್ಲಿ ನೆರೆದಿದ್ದವರೆಲ್ಲ ಸ್ತಂಭೀಭೂತರಾಗುವಂತೆ ಆ ಹಸಿಯಾದ ಬಾಳೆ ಎಲೆಗಳು ಧಗಧಗನೆ ಉರಿದು ಆಕೆಯ ದೇಹವನ್ನು ಸುಟ್ಟು ಬೂದಿ ಮಾಡಿದವು. ಇನ್ನೊಂದು ಶಿವದೇವಸ್ಥಾನಕ್ಕೆ ಭೇಟಿ ಕೊಟ್ಟಿದ್ದಾಗ ಸತ್ತು ಹೋಗಿದ್ದ ಒಬ್ಬ ಮನುಷ್ಯ ಮತ್ತೆ ಜೀವ ತಳೆಯುವಂತೆ ಮಾಡಿದ. ಇನ್ನೊಂದು ಸಂದರ್ಭದಲ್ಲಿ ಪಟ್ಟಿನತ್ತಾರ್ ಆಳವಾದ ಪ್ರಾರ್ಥನೆಯಲ್ಲಿ ನಿರತನಾಗಿದ್ದಾಗ ಕೆಲವು ಕಳ್ಳರು ರತ್ನಾಭರಣ ಖಚಿತವಾದ ಆಭರಣವೊಂದನ್ನು ಆತನ ಕೊರಳಿಗೆ ಹಾಕಿದರು. ಆ ಹಾರವನ್ನು ಕಳ್ಳರು ಸ್ಥಳೀಯ ಭದ್ರಗಿರಿ ರಾಜನ ಅರಮನೆಯಿಂದ ಕದ್ದಿದ್ದರು. ಅಪರಾಧ ತಮ್ಮ ಮೇಲೆ ಸುತ್ತು ಹಾಕಿಕೊಳ್ಳುವುದನ್ನು ತಪ್ಪಿಸಲು ಅವರು ಹಾಗೆ ಮಾಡಿದ್ದರು. ರಾಜನ ಸೈನಿಕರು ಹುಡುಕುತ್ತ ಬಂದು ಹಾರವು ಪಟ್ಟಿನತ್ತಾರ್ ಕುತ್ತಿಗೆಯಲ್ಲಿರುವುದನ್ನು ಗಮನಿಸಿ, ಅವನೇ ಕಳ್ಳನೆಂದು ಅರಮನೆಗೆ ಎಳೆದೊಯ್ದರು. ರಾಜ ಪಟ್ಟಿನತ್ತಾರ್‌ನನ್ನು ಜೈಲಿಗೆ ತಳ್ಳಿಸಿದ. ಪಟ್ಟಿನತ್ತಾರ್ ಶಿವನನ್ನು ಕುರಿತು ಅಲ್ಲೇ ಪ್ರಾರ್ಥಿಸಿದ. ಇಡೀ ಜೈಲಿಗೆ ಬೆಂಕಿ ಹತ್ತಿಕೊಂಡು ಉರಿಯಿತು ಮತ್ತು ಪಟ್ಟಿನತ್ತಾರ್ ಹೊರಗೆ ಬಂದ. ರಾಜನಿಗೆ ತನ್ನ ತಪ್ಪಿನ ಅರಿವಾಗಿ ಪಟ್ಟಿನತ್ತಾರ್‌ನ ಶಿಷ್ಯನಾದ. ಮಕ್ಕಳೊಂದಿಗೆ ಮನರಂಜನೆಗಾಗಿ ಆತ ಆಟವಾಡುತ್ತ ಇದ್ದನಂತೆ. ಮಕ್ಕಳೆಲ್ಲ ನೋಡುತ್ತಿರುವಾಗಲೇ ಇನ್ನೊಂದು ಹೊಂಡದಿಂದ ಮೇಲೆದ್ದು ಬರುತ್ತಿದ್ದನಂತೆ. ಆತನ ಸಮಾಧಿಯು ಆಶ್ಚರ್ಯಚಕಿತವಾಗಿಸುವಂತೆ ಇದೆ. ಚೆನ್ನೈ ಹೊರವಲಯದ ತಿರುವೊತ್ತಿಯೂರ್‌ನಲ್ಲಿ ಕೆಲವು ಅಭಿಮಾನಿಗಳನ್ನು ಕರೆದು ತನ್ನ ಶರೀರವನ್ನು ಒಂದು ಪಾತ್ರೆಯಲ್ಲಿ ಮುಚ್ಚಲು ಹೇಳಿದನಂತೆ. ಕೆಲವು ಸಮಯದ ಬಳಿಕ ಪಾತ್ರೆಯನ್ನು ಆ ಸ್ಥಳದಿಂದ ತೆಗೆದು ನೋಡಿದಾಗ ಅಲ್ಲಿ ಆತನ ಶರೀರವಿರದೆ, ಒಂದು ಶಿವಲಿಂಗ ಆವಿರ್ಭವಗೊಂಡಿತ್ತಂತೆ! ಹೀಗೆ ಶಿವದೇವರಲ್ಲಿ ಆತ ಐಕ್ಯನಾಗಿ ಹೋದ. ಸಂಪತ್ತನ್ನು ಕುರಿತು ಆತನ ಹೇಳಿಕೆ ಹೀಗಿದೆ:

"ನೀನು ಬರುವಾಗ ಏನೂ ತಂದಿಲ್ಲ. ಹೋಗುವಾಗ ಒಂದು ಸಣ್ಣ ನಾಣ್ಯವನ್ನೂ ಕೊಂಡೊಯ್ಯಲಾರೆ. ಒಂದು ಕಣ್ಣು ಹರಿದ ಸೂಜಿ ಕೂಡ ನಿನ್ನ ಜೊತೆಗೆ ಬರುವುದಿಲ್ಲ!"

**ಶ್ರೀ ಪುಂಡಲೀಕ (೧೧ನೇ ಶತಮಾನ) ಕರ್ನಾಟಕ:**

ಶಿವ ಮತ್ತು ವಿಷ್ಣುವನ್ನು ಏಕಪ್ರಕಾರವಾದ ಭಕ್ತಿಯಿಂದ ಈತ ಪೂಜಿಸುತ್ತಿದ್ದ. ಅವನು ತನ್ನ ಯೌವನದ ಒಂದು ಹಂತದಲ್ಲಿ ತಂದೆತಾಯಿಗಳನ್ನು ಗೌರವಿಸುತ್ತಿರಲಿಲ್ಲ. ಪೂಜ್ಯರಾದ ಮಹಾಮಹಿಮರೊಬ್ಬರು ಉಪದೇಶಿಸಿದ ಮೇಲೆ ದೇವರ ದಯೆ ಗಳಿಸಿಕೊಳ್ಳಲು ಮತ್ತು ಶಿವ ಸಾಯುಜ್ಯ ಪಡೆಯಲು ತಂದೆ–ತಾಯಿಗಳ ಸೇವೆ ಮಾಡುವುದೇ ಅತ್ಯುತ್ತಮ ಮಾರ್ಗವೆಂಬುದನ್ನು ಕಂಡುಕೊಂಡ. ತದನಂತರ ತಂದೆತಾಯಿಗಳ ಸೇವೆ ಮಾಡಿ, ಮಿಕ್ಕ ಸಮಯದಲ್ಲಷ್ಟೇ ಇತರ ಕೆಲಸಗಳನ್ನು ಮಾಡುತ್ತಿದ್ದ. ಒಂದು ಐತಿಹ್ಯದ ಪ್ರಕಾರ, ಹೀಗೆ ತಂದೆ–ತಾಯಿಗಳ ಸೇವೆ ಮಾಡುತ್ತಿದ್ದ ಸಂದರ್ಭದಲ್ಲಿ ಮುಂಬಾಗಿಲಿಗೆ ಶ್ರೀ ಕೃಷ್ಣ ಆಗಮಿಸಿದ. "ತಂದೆ–ತಾಯಿಗಳ ಸೇವೆ ಮಾಡುತ್ತಿದ್ದೇನೆ. ಮುಗಿಸಿ ಬರುವವರೆಗೆ ಕಾದಿರು" ಎಂದು ಭಗವಂತನನ್ನು ಅಲ್ಲೇ ಕಾಯಿಸಿದನಂತೆ. ಆತನ ಪಿತೃಭಕ್ತಿಯನ್ನು ಮನಸಾರೆ ಮೆಚ್ಚಿದ ಶ್ರೀಕೃಷ್ಣ, ತನಗೆ ಅಲ್ಲೇ ಒಂದು ದೇವಾಲಯ ಕಟ್ಟಿಸಿದರೆ ತಾನು ಅಲ್ಲಿ ನೆಲೆಸುವುದಾಗಿಯೂ ಹೇಳಿದನಂತೆ. ಆ ಜಾಗವನ್ನು ಅನಂತರ ಪುಂಡಲೀಕಪುರ ಅಥವಾ ಪಂಢರಾಪುರ ಎಂದು ಕರೆಯಲಾಯಿತು. ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಪಾಂಡುರಂಗ ಎಂಬ ಹೆಸರಿನ ದೇವರ ವಿಗ್ರಹವನ್ನು ಪುಂಡಲೀಕ ಪ್ರತಿಷ್ಠಾಪಿಸಿದ. ಪಾಂಡುರಂಗ ಎಂದರೆ 'ಬಿಳಿಯ ದೇಹವುಳ್ಳ ಇದು ಶಿವನನ್ನು ನಿರ್ದೇಶಿಸುತ್ತದೆ' ಎಂದು ಅರ್ಥ. ಕೃಷ್ಣ ಅಥವಾ ವಿಠಲ ಅಲ್ಲ; ಆದರೂ ಪಂಡರಾಪುರದಲ್ಲಿ ಪಾಂಡುರಂಗ ಎಂಬುದು ವಿಷ್ಣುವನ್ನು ನಿರ್ದೇಶಿಸುತ್ತದೆ. ಕೃಷ್ಣ ತನ್ನ ಶಿರದ ಮೇಲೆ ಶಿವಲಿಂಗವನ್ನು ಧರಿಸಿರುವುದು ಇಲ್ಲಿನ ವಿಶೇಷತೆ.

**ಶ್ರೀ ಪವಹರಿ ಬಾಬಾ (೧೯ನೇ ಶತಮಾನ) ಮಹಾರಾಷ್ಟ್ರ:**

ಮಹಾರಾಷ್ಟ್ರದಾದ್ಯಂತ ಅತ್ಯಂತ ಪರಿಚಿತನಾಗಿರುವ ಈ ಸಂತನ ಆಶ್ರಮಕ್ಕೆ ಒಂದು ದಿನ ಕಳ್ಳನೊಬ್ಬ ನುಗ್ಗಿ ಕೈಗೆ ಸಿಕ್ಕಿದ್ದನ್ನು ದೋಚಿ ಗೋಣಿಚೀಲದಲ್ಲಿ ತುಂಬಿಸಿ ಓಡಿಹೋಗುತ್ತಿದ್ದ. ಅಷ್ಟರಲ್ಲಿ ಸಂತನಿಗೆ ಎಚ್ಚರವಾಯಿತು. ಕಳ್ಳನನ್ನು ಅಟ್ಟಿಸಿಕೊಂಡು ಹೋದ. ಕಳ್ಳ ಗೋಣಿಚೀಲ ಅಲ್ಲೇ ಬಿಸಾಡಿ ಇನ್ನೂ ವೇಗವಾಗಿ ಓಡಿದ. ಬಾಬಾ ಇದ್ದ ಬದ್ದ ಶಕ್ತಿ ಒಟ್ಟು ಸೇರಿಸಿ ತಾನೂ ಓಡಿ ಹೇಗೋ ಕಳ್ಳನನ್ನು ಹಿಡಿದು ಬಿಟ್ಟ ಮತ್ತು ಈ ಗೋಣಿಚೀಲದಲ್ಲಿರುವ ಸೊತ್ತು ನಿನಗೇ ಸೇರಬೇಕಾದ್ದು; ಇವು ನನ್ನವಲ್ಲ; ದಯವಿಟ್ಟು ತೆಗೆದುಕೊಂಡು ಹೋಗು ಎಂದು ಕೈಮುಗಿದು ಅಂಗಲಾಚಿ ಬೇಡಿಕೊಂಡ! ಅಹಂಕಾರ ಮತ್ತು ಸ್ವಾರ್ಥದ ಲವಲೇಶವೂ ಇಲ್ಲದ ಬಾಬಾ ಈ ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವೂ ಆ ಭಗವಂತನಿಗೆ ಸೇರಿದ್ದೆಂದು ಭಾವಿಸಿದ್ದ. ಕಳ್ಳನನ್ನು ಕೂಡಾ ಭಗವಂತನೆಂದೇ ಆತ ಭವಿಸಿದ. ಆ ಕಳ್ಳ ಮುಂದೆ ಬಾಬಾನ ಶಿಷ್ಯನಾದ.



**ರಾಮಲಿಂಗ ಸ್ವಾಮಿಗಳು ಅಥವಾ ವಳ್ಳಾಲರ್ (೧೮೨೩–೧೮೭೪), ಚಿದಂಬರಂ ಬಳಿಯ ಮರುಡೂರು, ತಮಿಳುನಾಡು:**

ಭಾರತಕ್ಕೆ ಆಧ್ಯಾತ್ಮಿಕ ಮತ್ತು ನೈತಿಕ ಮಾರ್ಗದರ್ಶನ ಬೇಕಾಗಿದ್ದ ಸಂದರ್ಭದಲ್ಲಿ ತಂದೆ–ತಾಯಿಗಳಿಗೆ ಐದನೆಯ ಮಗುವಾಗಿ ಜನಿಸಿದ ರಾಮಲಿಂಗ ಸ್ವಾಮಿಗಳಿಗೆ ಸಾಂಪ್ರದಾಯಿಕ ಶಿಕ್ಷಣ ಆಗಲಿಲ್ಲ. ಯಾವಾಗಲೂ ಮೌನಿಯಾಗಿರುತ್ತಿದ್ದ ಬಾಲಕನನ್ನು ಕಂಡು ತಂದೆ–ತಾಯಿಗಳು ಈತನಿಗೆ ದೇವರ ಆಶೀರ್ವಾದ ಇರಬೇಕೆಂದು ಭಾವಿಸಿದರು. ಶಿವನನ್ನು ಆರಾಧ್ಯದೈವರಾಗಿ ಭಾವಿಸಿದ ಈತ ಸರಳವಾದ ತಮಿಳು ಭಾಷೆಯಲ್ಲಿ ಆರುಸಾವಿರಕ್ಕಿಂತ ಹೆಚ್ಚು ಗೀತೆಗಳನ್ನು ರಚಿಸಿದ್ದಾನೆ. ಗದ್ಯದಲ್ಲಿ ರಚಿಸಿದ ಈತನ "ಜೀವ ಕಾರುಣ್ಯ ಒಳುಕ್ಕಮ್" (ಕರುಣೆಯ ಹಾದಿ) ಎಂಬ ಕೃತಿ ಒಂದು ಉದ್ಗ್ರಂಥವಾಗಿದ್ದು ಗಮನಾರ್ಹವಾಗಿದೆ. ಮೋಕ್ಷ ಗಳಿಸಬೇಕಾದರೆ ಇತರ ಜೀವಿಗಳಲ್ಲಿ ಕಾರುಣ್ಯ ಇರಲೇಬೇಕೆಂದು ಪ್ರತಿಪಾದಿಸಿದ. 'ದೇವರನ್ನು ಕಾಣಲು ಸಾಧ್ಯವೇ?' ಎಂಬ ಸರಳ ಪ್ರಶ್ನೆಗೆ ಆತ ಕೊಟ್ಟ ಉತ್ತರವೆಂದರೆ "ಮಾನವೀಯತೆಯನ್ನು ತೋರಿಸು. ದೇವರ ಉಪಸ್ಥಿತಿಯನ್ನು ನೀನು ಕಾಣುವೆ" ಎಂಬುದಾಗಿತ್ತು. ಯಾವಾಗಲೂ ಬಿಳಿಬಟ್ಟೆ ತೊಟ್ಟಿರುತ್ತಿದ್ದ ಈ ಸಾಧುವನ್ನು ಎಲ್ಲರೂ 'ವಳ್ಳಾಲರ್' ಎಂದು ಕರೆಯುತ್ತಿದ್ದರು. ಹಿಂಸೆ, ಶೋಷಣೆ, ಅಸಮತೆಗಳ ವಿರುದ್ಧ ಮಾತಾಡುತ್ತಿದ್ದ ಈ ಸ್ವಾಮಿ "ಸಾಮರಸ್ಯ, ಶುದ್ಧ, ಸತ್ಯ, ಸನ್ಮಾರ್ಗ"ಗಳನ್ನು ಪ್ರತಿಪಾದಿಸಿದ. ಆತನ ರಚನೆಗಳನ್ನೆಲ್ಲ ಸಂಗ್ರಹಿಸಿ "ತಿರು ಅರುಪ್ಪ" ಎಂಬ ಹೆಸರಿನಲ್ಲಿ ಹೊರತರಲಾಗಿದೆ. ಒಂದು ನಿಗದಿಗೊಂಡ ದಿನ ಮೆಟ್ಟುಕುಪ್ಪಂ ಎಂಬಲ್ಲಿ ತನ್ನ ವಿಶ್ರಾಂತಿ ಕೊಠಡಿಗೆ ತೆರಳಿ ಸಿದ್ಧ ಸಮಾಧಿಯಲ್ಲಿ ಕುಳಿತ. ಆತನ ಜೀವಾತ್ಮವು ಅಲ್ಲಿ ದಿವ್ಯಜ್ಯೋತಿಯೊಂದಿಗೆ ವಿಲೀನವಾಯಿತು. ಅನಂತರ ಸ್ವಾಮೀಜಿಯನ್ನು ಜೀವಂತವಾಗಲೀ, ತೀರಿಕೊಂಡ ಶರೀರ ರೂಪದಲ್ಲಾಗಲೀ ಯಾರೂ ನೋಡಲಿಲ್ಲ.

**ಸ್ವಾಮಿ ರಾಮಾನಂದ (೧೩೬೦–೧೪೭೦) ಪ್ರಯಾಗ, ಉತ್ತರ ಪ್ರದೇಶ:**

ಮೇಲ್ಜಾತಿ, ಕೆಳಜಾತಿ ಎಂಬ ಬೇಧ–ಭಾವವಿಲ್ಲದೆ ಎಲ್ಲರನ್ನೂ ಸಮಾನವಾಗಿ ಪರಿಗಣಿಸಿ ಸಮಾಜದ ಉದ್ಧಾರಕ್ಕೆ ಶ್ರಮಿಸಿದ ಈ ಸ್ವಾಮಿ ಅತ್ಯಂತ ಕೆಳಸ್ತರದ ಬುಡಕಟ್ಟು ಜನಾಂಗಕ್ಕೆ ಸೇರಿದ ಪಿಪಾ ಎಂಬ ರಾಜಪುತ್ರ ರಾಜನನ್ನು, ಕಬೀರ್ ಎಂಬ ಮುಸಲ್ಮಾನನನ್ನು, ಸೇನಾ ಎಂಬ ಕ್ಷೌರಿಕನನ್ನು, ಧನ್ನು ಎಂಬ ಜಾಟ್ ಜಾತಿಯವನನ್ನು, ರವಿ ಎಂಬ ಚಮ್ಮಾರನನ್ನು ಶಿಷ್ಯರನ್ನಾಗಿ ಸ್ವೀಕರಿಸಿದ್ದ. ಅವರನ್ನೆಲ್ಲ

ವಿಷ್ಣು ಭಕ್ತರನ್ನಾಗಿ ಮಾಡಿ ಸಹ ಪಂಕ್ತಿಯ ಭೋಜನಕ್ಕೆ ಏರ್ಪಾಡು ಮಾಡುತ್ತಿದ್ದ. ಸ್ವಾಮಿ ರಾಮಾನಂದ ಶ್ರೀ ರಾಮನ ಪರಮಭಕ್ತನಾಗಿದ್ದ. ರಾಮ ಮತ್ತು ಸೀತೆಯನ್ನು ಪೂಜಿಸುವ ಆರಾಧನಾ ಪದ್ಧತಿಯೊಂದನ್ನು ಆತ ಬಳಕೆಗೆ ತಂದ. ರಾಮಭಕ್ತಿಯನ್ನು ಜಾತಿಮತ, ಭೇದವೆಣಿಸದೆ ಉತ್ತರ ಭಾರತಾದಾದ್ಯಂತ ಬಳಕೆಗೆ ತಂದ ಈ ಸ್ವಾಮಿ ೧೨ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ರಾಮಾನುಜಾಚಾರ್ಯರು ಮಾಡಿದ ಕ್ರಾಂತಿಯನ್ನು ಉತ್ತರ ಭಾರತದಲ್ಲಿ ಮಾಡಿ ತೋರಿಸಿದ.

**ಶ್ರೀ ರಾಮಾನುಜಾಚಾರ್ಯ (೧೦೧೭–೧೧೩೭) ಶ್ರೀ ಪೆರುಂಬದೂರ್, ತಮಿಳುನಾಡು:**

ಬಡಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದ ಬಾಲಕ ಸಣ್ಣವನಾಗಿದ್ದಾಗಲೇ ಜಾತಿಯ ಸಂಕೋಲೆಗಳಿಂದ ಕಳಚಿಕೊಂಡು ಉತ್ತಮ ಗುರುವೊಬ್ಬನ ಅನ್ವೇಷಣೆಗಾಗಿ ದಕ್ಷಿಣ ಭಾರತದಾದ್ಯಂತ ಪ್ರವಾಸ ಮಾಡಿದ. ತತ್ವಜ್ಞಾನಿ ಸನ್ಯಾಸಿಯಾಗಿದ್ದ ಈತ ಹರಿಹರರಲ್ಲಿ ಭೇದವಿರದ 'ವಿಶಿಷ್ಟಾದ್ವೈತ' ಎಂಬ ಮತವೊಂದನ್ನು ಪ್ರತಿಷ್ಠಾಪಿಸಿದ. ಆತನ ಪ್ರಕಾರ, ಬ್ರಹ್ಮಚೈತನ್ಯವೆಂಬುದು ಮೂಲ ಮತ್ತು ಅತ್ಯುನ್ನತವಾದುದಾಗಿದ್ದು ಪ್ರತಿಯೊಬ್ಬನ ಆತ್ಮವು ಭಕ್ತಿಯ ಮೂಲಕ ಮೂಲ ಆತ್ಮವನ್ನು ಸೇರಿಕೊಳ್ಳಬಹುದಾಗಿದೆ ಎಂಬುದಾಗಿತ್ತು. ವಿಶಿಷ್ಟಾದ್ವೈತಕ್ಕೆ ಸಂಬಂಧಿಸಿದ ಒಟ್ಟು ಒಂಬತ್ತು ಕೃತಿಗಳನ್ನು ರಾಮಾನುಜರು ರಚಿಸಿದ್ದಾರೆ. ಮುಖ್ಯವಾದುವೆಂದರೆ 'ವೇದಾರ್ಥಸಂಗ್ರಹಂ'. ಇದು ವೇದ ಮತ್ತು ಉಪನಿಷತ್ತುಗಳ ಭಾಷ್ಯವಾಗಿದೆ. ಈ ತತ್ವವನ್ನು ಸಮಾಜದ ಕೆಳವರ್ಗದ ಜನರಿಗೂ ಉಪದೇಶಿಸಲಾಯಿತು. ವೇದ ಮಂತ್ರಗಳನ್ನು, ಉಪದೇಶಗಳನ್ನು ರಹಸ್ಯವಾಗಿ ಮಾಡಬೇಕು ಎಂಬ ಗುರುಗಳ ಉಪದೇಶಕ್ಕೆ ವಿರುದ್ಧವಾಗಿ ರಾಮಾನುಜರು ದೇವಸ್ಥಾನದ ಗೋಪುರ ಹತ್ತಿ ಎಲ್ಲರಿಗೂ ಕೇಳಿಸುವಂತೆ ದೊಡ್ಡದಾಗಿ ಘೋಷಿಸಿಬಿಡುತ್ತಿದ್ದರು. ಮತ್ತು ಎಲ್ಲರಿಗೂ ಉಪದೇಶಿಸುತ್ತಿದ್ದರು. ಆಗ ಅವರು ಹೇಳಿದ್ದೇನೆಂದರೆ– "ನಾನು ಸಾವಿರಾರು ಜನರಿಗೆ ಭಕ್ತಿಯ ಮೂಲಕ ಮೋಕ್ಷ ಸಂಪಾದನೆಯ ಹಾದಿಯನ್ನು ತೋರಿಸುತ್ತೇನೆ ಎಂದಾದರೆ, ಟೀಕಿಸುವವರ, ಮತ್ತು ನಿಂದಕರ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ; ಆ ಮೂಲಕ ನರಕಕ್ಕೆ ಹೋಗಲೂ ನಾನು ಸಿದ್ಧ!"

**ಶ್ರೀ ರಾಘವೇಂದ್ರ ಸ್ವಾಮಿ (೧೫೯೫–೧೬೭೧) ಆದವಾನಿ, ಕರ್ನಾಟಕ:**

ಕಾಂಚೀಪುರಂ ಬಳಿ ಭುವನಗಿರಿ ಎಂಬಲ್ಲಿ ಪುರೋಹಿತ ಬ್ರಾಹ್ಮಣರ ಕುಲದಲ್ಲಿ ಜನಿಸಿದ ಈತನನ್ನು ಮನೆಯಲ್ಲಿ ವೆಂಕಣ್ಣ ಎಂದು ಕರೆಯುತ್ತಿದ್ದರು. ಈತನ ಭಕ್ತಿ ಮತ್ತು ವೇದಾಂತ ಶಕ್ತಿಯನ್ನು ಮನಗಂಡ ಜನರು ಈತ ಕೃತಯುಗದ ಪ್ರಹ್ಲಾದನ ಅಪರಾವತಾರವೆಂದೂ ಕಲಿಯುಗದಲ್ಲಿ ಹರಿದಾಸ ಪಂಥವನ್ನು ಜನಪ್ರಿಯಗೊಳಿಸಿದ



ವ್ಯಾಸರಾಯರ ಮರುಹುಟ್ಟು ಎಂದೂ ಮಾತಾಡಿಕೊಳ್ಳುತ್ತಿದ್ದರು. ಕೃಷ್ಣನ ಪರಮಭಕ್ತನಾಗಿದ್ದ ವೆಂಕಣ್ಣ ಪ್ರಯಾಣ ಮಾಡುತ್ತ ಕರ್ನಾಟಕದ ಆದವಾನಿಗೆ ಬಂದ. ಅಲ್ಲಿ ಪುರಂದರದಾಸ ಮತ್ತು ಕನಕದಾಸರ ಭಕ್ತಿಪಂಥಕ್ಕೆ ಮಾರುಹೋದ. ವೆಂಕಣ್ಣನ ಆಧ್ಯಾತ್ಮ ಶಕ್ತಿ ಅನುಪಮವಾದುದಾಗಿತ್ತು ಮತ್ತು ಆತ ಬಿಟ್ಟುಹೋದ ಕೃತಿಗಳೂ ಅಷ್ಟೇ ಪಾಂಡಿತ್ಯಪೂರ್ಣವಾಗಿವೆ. ಒಮ್ಮೆ ಕಳ್ಳಕಾರರ ಹಾವಳಿಯಿದ್ದ ಒಂದು ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಕಳ್ಳರು ದಾಳಿಯಿಟ್ಟು ವೆಂಕಣ್ಣನ ಬಳಿಯಿರುವುದನ್ನೆಲ್ಲಾ ದೋಚಿ ಆತನನ್ನು ಅಲ್ಲೇ ಹುಗಿದು ಹಾಕಿದರು. ಆಗ ವೆಂಕಣ್ಣ ಭಕ್ತಿಯಿಂದ ಹಾಡಿದ, "ಇಂದು ಎನಗೆ ಗೋವಿಂದ, ನಿನ್ನಯ ಪಾದಾರವಿಂದವ ತೋರೋ ಮುಕುಂದನೇ" ಎಂಬ ಹಾಡಿಗೆ ಭಗವಂತನು ಪ್ರತ್ಯಕ್ಷನಾಗಿ ಕಳ್ಳರ ಎದುರಿನಲ್ಲೇ ವೆಂಕಣ್ಣನನ್ನು ಹೊಂಡದಿಂದ ಮೇಲಕ್ಕೆತ್ತಿದ. ಕಳ್ಳರು ದಿಗ್ಭ್ರಮೆಗೊಂಡು, ಆತನ ಕಾಲಿಗೆ ಬಿದ್ದು ತಪ್ಪೊಪ್ಪಿಕೊಂಡು ಆತನ ಶಿಷ್ಯರಾದರು. ರಾಘವೇಂದ್ರ ಗುರುಗಳು ಎಂದೇ ಪ್ರಸಿದ್ಧರಾದ ಈ ಸಂತ ತಮ್ಮ ಸಮಾಧಿಯನ್ನು ಮೊದಲೇ ಗುರುತಿಸಿಕೊಂಡು ಅದನ್ನು ಬೃಂದಾವನ ಎಂದು ಕರೆದರು. ಮಂತ್ರಾಲಯದ ಬಳಿ ಇರುವ ಶ್ರೀ ಗುರು ರಾಘವೇಂದ್ರರ ಈ ಸಮಾಧಿಯು ಕಾಲಾಂತರದಲ್ಲಿ ಮಹಿಮಾತಿಶಯದಿಂದ ತುಂಬಿಕೊಂಡಿತು. ಇವರನ್ನು 'ಮಂತ್ರಾಲಯದ ಮಹಾತ್ಮ' ಎಂದೇ ಕರೆಯಲಾಯಿತು. ಭಕ್ತಿಪುರಸ್ಸರನಾಗಿ, ಪೂರ್ಣ ಶರಣಾಗತಿಯಿಂದ ಗುರು ರಾಘವೇಂದ್ರ ಎಂದು ಅಡ್ಡ ಬಿದ್ದವನಿಗೆ ಇಂದಿಗೂ ತಮ್ಮ ಸಮಾಧಿಯಿಂದಲೇ ಸಾಂತ್ವನ ನೀಡುವ ಈ ಸಂತರು ಅಶರೀರ ಮತ್ತು ಮೌನದಿಂದಲೇ ಲೋಕಕಲ್ಯಾಣ ಮಾಡುತ್ತಿದ್ದಾರೆ.

ಗುರು ರಾಘವೇಂದ್ರರ ಒಂದು ಹಾಡಿನ ಸಾರಾಂಶ ಹೀಗಿದೆ. "ನಾನು ಈ ಭೂಮಿಗೆ ಭಾರವಾಗಿದ್ದೇನೆ. ಸರಿಯಾದ ದಾರಿ ಬಿಟ್ಟು ಕೆಟ್ಟವರ ಸಂಗ ಮಾಡಿದೆ. ವೇಣುಗೋಪಾನೇ, ನೀನೇ ದೊಡ್ಡವನು, ನಿನ್ನ ವಿನಾ ನನ್ನನ್ನು ಬೇರಾರೂ ಈ ದುಃಖ ಸಾಗರದಿಂದ ಪಾರುಗಾಣಿಸಲಾರರು. ಹರಿಯೇ, ನೀನೇ ಕಾಯಬೇಕು."

**ಶ್ರೀ ರಾಮದಾಸ, ಭದ್ರಾಚಲ ಆಂಧ್ರ ಪ್ರದೇಶ:**

ತಂದೆ–ತಾಯಿಗಳು ಗೋಪಣ್ಣ ಎಂದು ಹೆಸರಿಟ್ಟಿದ್ದ ಈತ, ಗೋಲ್ಕೊಂಡದ ನವಾಬನಾಗಿದ್ದ ಅಬುಲ್ ಹಸನ್ ತಾನಾಶಾನ ಮಂತ್ರಿ ಅಕ್ಕಣ್ಣನ ಅಳಿಯನಾಗಿದ್ದ. ರಾಜನ ಕಂದಾಯ ಅಧಿಕಾರಿಯಾಗಿದ್ದ ಗೋಪಣ್ಣ, ರಾಮನ ಪರಮ ಭಕ್ತನಾಗಿ ಹಲವಾರು ಭಕ್ತಿಗೀತೆಗಳನ್ನು ರಚಿಸಿ ಆನಂದ ಭೈರವಿ ರಾಗದಲ್ಲಿ ಹಾಡುತ್ತಿದ್ದ. ಊರಿನ ದೇವಸ್ಥಾನದಲ್ಲಿ ಸಂತ ಕಬೀರದಾಸನಿಗೆ ಮುಸ್ಲಿಮ್ ಎಂಬ ಕಾರಣಕ್ಕಾಗಿ ಪ್ರವೇಶ ನಿರಾಕರಿಸಲಾಯಿತು. ಆಗ ಗೋಪಣ್ಣ ಮಧ್ಯೆ ಪ್ರವೇಶಿಸಿ ಕಬೀರದಾಸನಿಗೆ

ದೇವಸ್ಥಾನ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟ. ಕಬೀರದಾಸನೇ ಗೋಪಣ್ಣನಿಗೆ ಉಪದೇಶ ನೀಡಿ, ರಾಮಭಕ್ತನಾದುದರಿಂದ ರಾಮದಾಸ ಎಂಬ ನಾಮಕರಣ ಮಾಡಿದ. ಭದ್ರಾಚಲಂನಲ್ಲಿ ಶ್ರೀ ರಾಮಚಂದ್ರ ಪತ್ನಿ ಸೀತೆಯನ್ನು ಕಳೆದುಕೊಂಡಿದ್ದ. ರಾಮದಾಸ ಚತುರ್ಭುಜ ರಾಮನ ಮಂದಿರವನ್ನು ಭದ್ರಾಚಲಂನಲ್ಲಿ ಕಟ್ಟಿಸಿದ. ರಾಮನ ವಿಗ್ರಹದ ಮುಂಭಾಗದ ಎರಡು ಕೈಗಳಲ್ಲಿ ಬಿಲ್ಲು, ಬಾಣ ಮತ್ತು ಹಿಂಭಾಗದ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರ ಇರುವುದು ಈ ವಿಗ್ರಹದ ವಿಶೇಷತೆ. ಸುಲ್ತಾನನ ಭಂಡಾರದ ಹಣವನ್ನು ಉಪಯೋಗಿಸಿ ದೇವಸ್ಥಾನ ಕಟ್ಟಿಸಿದ ಎಂಬ ಆರೋಪ ಬಂದು ರಾಮದಾಸನನ್ನು ಜೈಲಿಗಟ್ಟಲಾಯಿತು. ಸ್ಥಳೀಯ ಐತಿಹ್ಯವೊಂದರ ಪ್ರಕಾರ ಶ್ರೀರಾಮಚಂದ್ರನೇ ಸುಲ್ತಾನನ ಹಣವನ್ನು ಹಿಂದಿರುಗಿಸಿ ರಾಮದಾಸನನ್ನು ಬಿಡುಗಡೆ ಮಾಡಿಸಿದ.

**ಶ್ರೀ ರಮಣ ಮಹರ್ಷಿ (೧೮೭೯–೧೯೫೦) ತಿರುವಣ್ಣಾಮಲೈ (ಅರುಣಾಚಲಂ), ತಮಿಳುನಾಡು:**

ಸುಂದರಂ ಅಯ್ಯರ್ ಮತ್ತು ಅಳಗಮ್ಮ ದಂಪತಿಗೆ ಹುಟ್ಟಿದ ಮಗುವಿಗೆ ವೆಂಕಟರಮಣ ಎಂದು ಹೆಸರಿಟ್ಟರು. ಆದರೆ ಭಕ್ತರಿಗೆ ಮಹರ್ಷಿ ರಮಣ ಎಂದೇ ಪ್ರಖ್ಯಾತನಾದ. ಅರುಣಾಚಲ ಅಥವಾ ಅರುಣಗಿರಿಯ ಸಂತ ಎಂಬ ಇನ್ನೊಂದು ಹೆಸರು ಈತನಿಗಿದೆ. ಚಿಕ್ಕವನಾಗಿದ್ದಾಗ ಶಾಲೆಯಲ್ಲಿ ಕಲಿಯುತ್ತಿದ್ದ ಪಾಠ ಪ್ರವಚನಗಳತ್ತ ಅವನಿಗೆ ಲಕ್ಷ್ಯವೇ ಇರುತ್ತಿರಲಿಲ್ಲ ಹಾಗೂ ಯಾವ ಪ್ರಾಪಂಚಿಕ ವಿದ್ಯಮಾನಗಳಲ್ಲಿಯೂ ಅವನಿಗೆ ಆಸಕ್ತಿ ಇರಲಿಲ್ಲ. ಧ್ಯಾನವೆಂಬುದು ಅವನಿಗೆ ಸಹಜ ಸ್ವಾಭಾವಿಕವಾಗಿತ್ತು. ಸರಳತೆ, ಪರಿಶುದ್ಧತೆ, ಸಮಾನತೆ ಮತ್ತು ಸಹೋದರತೆಗಳಿಗೆ ಉದಾಹರಣೆಯಂತಿದ್ದ. ಅವನ ಮೌನದ ಪ್ರಭಾವಳಿಯಿಂದಲೇ ಲಕ್ಷಾಂತರ ಭಕ್ತರಿಗೆ ಪೂರ್ಣ ಆನಂದದ ಅನುಭವ ಆಗುತ್ತಿತ್ತು. ಮಾತು ಅತ್ಯಂತ ಕಡಿಮೆ. ಆದರೆ ಆಡಿದ ಒಂದೊಂದು ಮಾತು ಪರಿಪೂರ್ಣವಾಗಿರುತ್ತಿತ್ತು. "ಆತ್ಮಾನುಭೂತಿಯ ವಿಧಾನಗಳನ್ನು ಪ್ರಶ್ನಿಸಲು ನಾನಾರು?" ಎಂದು ರಮಣ ಮಹರ್ಷಿ ಕೇಳುತ್ತಿದ್ದರು. ಆತ್ಮನಿರೀಕ್ಷಣೆ ಮತ್ತು ಆತ್ಮಾನುಭೂತಿಯೆಂಬುದು ಒಂದು ಅನುಭವವೇ ಹೊರತು ಅಲ್ಲಿ ಮಾತಿಗೆ ಅವಕಾಶವಿಲ್ಲ ಎಂದು ಅವರು ಪ್ರತಿಪಾದಿಸಿದರು.

ಮಹರ್ಷಿ ಹೇಳಿದ ಕೆಲವು ಮುಖ್ಯ ಮಾತುಗಳೆಂದರೆ–

* ಸಂತರ ಜೊತೆಗಿನ ಸಹವಾಸ ಬಿಡುಗಡೆಯ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ.
* ದೇವರು ಮತ್ತು ಗುರು ನಿಜವಾಗಿ ಒಬ್ಬನೇ. ಅವರಲ್ಲಿ ಸಾಮ್ಯ ಇದೆ.
* ದೇವರ ದರ್ಶನ ಮಾಡಲು ಆತ್ಮಾವಲೋಕನ ಬಹಳ ಮುಖ್ಯ.



* ನಾನು ಯಾರು ಎಂಬುದನ್ನು ಅರಿಯದೆ, ಕೇವಲ ದೇಹವೇ ನಾನು ಎಂಬುದಾಗಿ ಯಾರು ಭಾವಿಸುತ್ತಾರೋ, ಅವರು ಜನನ ಮರಣಗಳ ಚಕ್ರದಲ್ಲಿ ಸಿಕ್ಕಿ ಅಸಂಖ್ಯ ಕಷ್ಟಕೋಟಲೆಗಳಿಗೆ ತುತ್ತಾಗುತ್ತಾರೆ.
* ಆತ್ಮ ಎಂಬುದರ ವಿನಾ ಬೇರೆ ದೇವರಿಲ್ಲ.
* ನಿನ್ನ ಒಳಗೆ ದೇವರನ್ನು ನಿನಗೆ ನೋಡಲು ಸಾಧ್ಯವಾಗದಿದ್ದರೆ, ಬೇರೆ ಕಡೆ ನೋಡುತ್ತೇನೆ ಎಂಬುದು ಕೇವಲ ಭ್ರಮೆ.
* ಶಿಷ್ಯ– "ದೇವರೆಂದರೆ ಯಾರು?"
* ಗುರು– "ಮನಸ್ಸನ್ನು ಯಾರು ಅರ್ಥಮಾಡಿಕೊಳ್ಳುತ್ತಾನೋ ಅವನೇ ದೇವರು"

ಶಿಷ್ಯ– "ನನ್ನ ಮನಸ್ಸಿನ ಶಕ್ತಿಯನ್ನು ನಾನು ತಿಳಿದಿದ್ದೇನೆ."

ಗುರು– "ದೇವರು ಒಬ್ಬನೇ ಎಂಬುದನ್ನು ಶ್ರುತಿಗಳು ಸಾರುತ್ತವೆ. ನಿನ್ನ ಮನಸ್ಸನ್ನು ನೀನು ತಿಳಿದವನಾದುದರಿಂದ ನಿಸ್ಸಂಶಯವಾಗಿ ನೀನೇ ದೇವರೆಂಬುದನ್ನು ತಿಳಿ!"

**ಶ್ರೀರವಿದಾಸ್ (೧೪೧೪–೧೫೪೦) ವಾರಾಣಸಿ, ಉತ್ತರ ಪ್ರದೇಶ:**

ಬನಾರಸ್‌ನ ಹೊರವಲಯದಲ್ಲಿ ಅಸ್ಪೃಶ್ಯರಾದ ಬಡಚಮ್ಮಾರ ಕುಟುಂಬದಲ್ಲಿ ಹುಟ್ಟಿದ ಈತನನ್ನು ರೈದಾಸ್, ರವಿದಾಸ ಅಥವಾ ರೋಹಿದಾಸ ಎಂದೆಲ್ಲ ಕರೆಯುತ್ತಿದ್ದರು. ಜೀವನ ಪೂರ್ತಿ ಅವನು ಚಮ್ಮಾರ ವೃತ್ತಿಯಿಂದಲೇ ಪ್ರಾಮಾಣಿಕವಾಗಿ ದುಡಿದು ಬದುಕಿದ. "ನನಗೆ ನಿಜವಾಗಿ ಜನರ ಕಾಲಿಗೆ ಬೇಕಾದ ಚಪ್ಪಲಿ ಹೊಲಿಯಲು ಬಾರದು; ಆದರೂ ಜನ ನಾನು ಚಪ್ಪಲಿ ಹೊಲಿಯಬೇಕೆಂದು ಅಪೇಕ್ಷಿಸುತ್ತಾರೆ" ಎಂದು ಆತ ಹೇಳುತ್ತಿದ್ದ. ಚಿಕ್ಕಂದಿನಿಂದಲೇ ಅವನು ಸಾಧು ಸ್ವಭಾವದ ವ್ಯಕ್ತಿಯಾಗಿದ್ದ ಮತ್ತು ಪ್ರಾಪಂಚಿಕ ವ್ಯವಹಾರಗಳಿಗೆ ವಿಮುಖನಾಗಿದ್ದ. ಅವಿದ್ಯಾವಂತನಾಗಿದ್ದರೂ ಭಗವಾನ್ ಶ್ರೀರಾಮಚಂದ್ರನ ಪರಮಭಕ್ತನಾಗಿ ಆತ ಸರಳ ಹಿಂದಿ ಭಾಷೆಯಲ್ಲಿ ರಚಿಸಿದ ಭಕ್ತಿಗೀತೆಗಳು ಪ್ರತಿಭಾವಂತ ಕವಿಯೊಬ್ಬ ರಚಿಸಿದ ಗೀತೆಗಳಿಗಿಂತಲೂ ಉತ್ಕೃಷ್ಟವಾಗಿವೆ, ಸಾಹಿತ್ಯಿಕ ಮೌಲ್ಯದಿಂದ ಕೂಡಿವೆ. ಅತ್ಯಂತ ಶಕ್ತಿಯುತವಾಗಿದ್ದು, ಅಂತಃಕರಣ, ಪ್ರೀತಿ ಮತ್ತು ಭಕ್ತಿಯಿಂದ ಕೂಡಿವೆ. ಹುಟ್ಟಿನಿಂದ ಬರುವ ಮೇಲು ಕೀಳು ಮತ್ತು ಭೇದಭಾವವನ್ನು ಅವನು ವಿರೋಧಿಸಿದ. ಕ್ಷಿಪ್ರ ಅವಧಿಯಲ್ಲಿ ಅವನ ಮಹಿಮಾ ಗುಣ ಪ್ರಸಿದ್ಧವಾಯಿತು. ಮತ್ತು ನಾಲ್ಕು ವರ್ಗಗಳ ಜನರೂ ಅವನ ಶಿಷ್ಯರಾದರು. ರವಿದಾಸ ಕಾಶಿಯ ಸಂತ ಸ್ವಾಮಿ ರಾಮಾನಂದನ ಶಿಷ್ಯನೂ ಮತ್ತು ಸಂತ ಕಬೀರದಾಸನ ಸಮಕಾಲೀನನೂ ಆಗಿದ್ದನು. ಗಗಾರನ್‌ಗಾಂವ್‌ನ ರಾಜ ಪಿಪಾ, ಚಿತ್ತೋರ್‌ನ ರಾಣಿ ಝಾಲಿ, ರಾಜಕುವರಿ ಮೀರಾಬಾಯಿ ಮೊದಲಾದವರು

ಅವನ ಶಿಷ್ಯರಾಗಿದ್ದರು. ಸಿಖ್ಖರ ಪವಿತ್ರ ಗ್ರಂಥ "ಗುರುಗ್ರಂಥ ಸಾಹಿಬ್"ನಲ್ಲಿ ಆತನ ಮೂವತ್ತೊಂಬತ್ತು 'ಶಬದ್'ಗಳು (ಜ್ಞಾನಸೂಕ್ತಿಗಳು) ಸೇರ್ಪಡೆಗೊಂಡಿವೆ. ಒಂದು ಸಾರಿ ಅವನು ಹೀಗೆ ಹೇಳಿದ "ನನ್ನ ಜೊತೆಗಾರರೇ, ನನ್ನನ್ನು ಚಮ್ಮಾರ ಜಾತಿಯಲ್ಲಿ ಹುಟ್ಟಿದವನೆಂದು ಎಲ್ಲರೂ ಹೇಳುತ್ತಾರೆ. ಆದರೆ ನನ್ನ ಹೃದಯದಲ್ಲಿ ದೇವರ ಆಶೀರ್ವಾದದ ಸಂತೋಷವನ್ನು ನಾನು ಅನುಭವಿಸುತ್ತಿದ್ದೇನೆ. ಈಚಲುಮರ ಪರಿಶುದ್ಧ ಮರ ಅಲ್ಲವೆಂದು ಭಾವಿಸಲಾಗಿದೆ. ಆದರೆ ಆ ಮರದಿಂದ ಹಾಳೆಗಳನ್ನು ತಯಾರಿಸಿ ದೇವರ ನಾಮಾವಳಿಗಳನ್ನು ಬರೆದರೆ ಜನರು ತಲೆಬಾಗಿ ಅದನ್ನು ಗೌರವಿಸುತ್ತಾರೆ. ನನ್ನ ಜಾತಿಯ ಜನರು ಸತ್ತ ಜಾನುವಾರುಗಳನ್ನು ಬನಾರಸ್‌ನ ಹೊರವಲಯಕ್ಕೆ ಎಳೆದೊಯ್ಯುತ್ತಾರೆ. ಆದರೆ ನನಗೆ ಬ್ರಾಹ್ಮಣರೇ ತಲೆಬಾಗುತ್ತಾರೆ. ನಾನು ದೇವರನ್ನು ಮಾತ್ರ ಆಶ್ರಯಿಸಿದ್ದೇನೆ."

ಆತನ ಉಪದೇಶದ ಸಾರ ಹೀಗಿದೆ:

* "ದೇವರು ಯಾರ ಸೊತ್ತೂ ಅಲ್ಲ."
* "ಯಾರು ಆತನನ್ನು ಪ್ರೀತಿಸುತ್ತಾರೋ ಅವರನ್ನು ದೇವರು ಆಶ್ರಯಿಸುತ್ತಾನೆ."
* "ಒಬ್ಬನೇ ದೇವರು ಬೇರೆ ಬೇರೆ ರೂಪಗಳಲ್ಲಿ ಎಲ್ಲಾ ವಸ್ತುಗಳಲ್ಲಿಯೂ ಸೇರಿಕೊಂಡಿರುವನು."
* "ಎಲ್ಲರ ಹೃದಯಗಳಲ್ಲೂ ದೇವರು ನೆಲೆಸಿದ್ದಾನೆ. ನಮ್ಮ ಕೈ ಮತ್ತು ಕಾಲುಗಳಿಗಿಂತ ದೇವರು ಹತ್ತಿರದಲ್ಲಿದ್ದಾನೆ."
* "ನನ್ನ ಬೆಂಬಲಕ್ಕಿರುವುದು ದೇವರ ಹೆಸರು ಒಂದೇ. ಅದೊಂದೇ ನನ್ನ ಜೀವನ ಕೂಡಾ. ನನ್ನ ಉಸಿರು ಮತ್ತು ಸಂಪತ್ತು ದೇವರ ವಿನಾ ಬೇರೇನೂ ಇಲ್ಲ."

**ಶ್ರೀ ರಾಮಕೃಷ್ಣ ಪರಮಹಂಸ (೧೮೩೬–೧೮೮೬), ಕಾಮಾರ್‌ಪುಕುರ್, ಪಶ್ಚಿಮಬಂಗಾಳ:**

ಪುರೋಹಿತ ಮನೆತನದ ಸಂಪ್ರದಾಯಸ್ಥ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಈತನಿಗೆ ಮನೆಯಲ್ಲಿ ಗದಾಧರ ಎಂಬ ನಾಮಕರಣ ಆಯಿತು. ಕೊಲ್ಕೊತ್ತಾ ಬಳಿಯಿರುವ ದಕ್ಷಿಣೇಶ್ವರದಲ್ಲಿ ಕೆಳವರ್ಗದ ಮಹಿಳೆಯೊಬ್ಬಳು ಕಟ್ಟಿಸಿದ ಕಾಳಿಕಾ ಮಾತೆಯ ದೇವಸ್ಥಾನದಲ್ಲಿ ಅರ್ಚಕ ವೃತ್ತಿ ಕೈಗೊಳ್ಳುವ ಮೂಲಕ ವೃತ್ತಿ ಜೀವನ ಆರಂಭಿಸಿದ. ಶಾಲೆಯ ಸಾಂಪ್ರದಾಯಿಕ ಶಿಕ್ಷಣ ಇರದಿದ್ದ ಈತನಿಗೆ ದೈವದ ಅನುಗ್ರಹವಿತ್ತು. ಹಿಂದೂ ಸಮಾಜದ ಅಥವಾ ಇಡೀ ಜಗತ್ತಿನ ಅದ್ವಿತೀಯ ಸಂತ ಪುರುಷರಲ್ಲಿ ಈತ ಮುಂಚೂಣಿಯಲ್ಲಿ ನಿಲ್ಲುತ್ತಾನೆ. ಶಾರದಾದೇವಿ ಎಂಬಾಕೆಯನ್ನು ಗದಾಧರ ವಿವಾಹವಾದ.



ಒಮ್ಮೆ ಹೆಂಡತಿಗೆ ಹೇಳಿದ– "ದಯಾಮಯಿಯಾದ ತಾಯಿಯಂತೆ ನೀನು ನನಗೆ ಕಾಣುತ್ತೀಯಾ!". ಅವನ ಹೃದಯದಲ್ಲಿ ಕಾಳಿಕಾಮಾತೆ ನೆಲೆಸಿದ್ದಳು ಮತ್ತು ಆಕೆಯ ಸೂಚನೆ ಮತ್ತು ಮಾರ್ಗದರ್ಶನ ಗದಾಧರನಿಗೆ ಸದಾ ಇರುತ್ತಿತ್ತು. ಯಾವುದೇ ಧರ್ಮದ, ಮೂಲಕವೂ ದೇವರನ್ನು ಕಾಣಲು ಸಾಧ್ಯ ಎಂದು ಗದಾಧರ ಉಪದೇಶಿಸಿದ. ಹಾಗಾಗಿ ಅವನನ್ನು ಸರ್ವಧರ್ಮಗಳ ಸಮನ್ವಯ ಪಿತಾಮಹ ಎಂದೂ ಕರೆಯಲಾಯಿತು. ಆಧುನಿಕ ಕಾಲದ ಅವತಾರ ಪುರುಷ ಎಂದು ಅವನನ್ನು ಲಕ್ಷಾಂತರ ಮಂದಿ ಪೂಜಿಸಿದರು. ಎಲ್ಲ ಜಾತಿ ಮತ ಧರ್ಮಗಳ ಅನುಯಾಯಿಗಳೂ ಆತನಿಗಿದ್ದರು. ಎಲ್ಲರನ್ನೂ ಸಮಾನವಾಗಿ ಸ್ವೀಕರಿಸಿದ. ಕತೆ ಮತ್ತು ದೃಷ್ಟಾಂತಗಳ ಮೂಲಕ ಆತ ಉಪದೇಶಿಸಿದ. ಆತನ ಉಪದೇಶಗಳನ್ನು ಒಟ್ಟು ಸೇರಿಸಿ "ಶ್ರೀ ರಾಮಕೃಷ್ಣರ ಉಪದೇಶಾಮೃತ" ಎಂಬ ಹೆಸರಿನಲ್ಲಿ ಹೊರತರಲಾಗಿದೆ. ದೇವರ ಸ್ಥಾನ ನೀಡಿ ರಾಮಕೃಷ್ಣ ಆಶ್ರಮದ ಮಠಗಳಲ್ಲಿ ದೈನಂದಿನ ಪ್ರಾರ್ಥನೆ ಪೂಜೆಗಳನ್ನು ಆತನಿಗೆ ಸಲ್ಲಿಸಲಾಗುತ್ತಿದೆ. ಆತನ ಉಪದೇಶದ ಪ್ರಮುಖ ಸಾರವೆಂದರೆ–

* ಎಷ್ಟು ನಂಬಿಕೆಗಳೋ ಅಷ್ಟು ದಾರಿಗಳು.
* ದೇವರು ಒಬ್ಬನೇ. ಕಾಣುವುದೆಲ್ಲ ಆತನ ವಿವಿಧ ಮುಖಗಳು.
* ದೇವರಿಗೆ ಹಲವಾರು ಹೆಸರುಗಳಿವೆ. ಪ್ರಾರ್ಥನೆ, ಧ್ಯಾನಗಳಿಂದ ಆತನನ್ನು ಕಾಣಬಹುದು.
* ಬೇಡಿಕೆಯ ಆರ್ತ ಸ್ವರದಲ್ಲಿ ದೇವರನ್ನು ಕೂಗು. ಆತನನ್ನು ನೀನು ಖಂಡಿತ ನೋಡುವೆ.

**ಶ್ರೀ ಶಾರದಾಮಣಿ ದೇವಿ (೧೮೫೩–೧೯೨೦) ಜಯರಾಮ್ ಭಟಿ, ಬಂಕುರಾ ಜಿಲ್ಲೆ, ಪಶ್ಚಿಮಬಂಗಾಳ:**

ಸಂಪ್ರದಾಯಸ್ಥ ಕುಲೀನ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಈಕೆ ಆರಂಭಿಕ ಶಿಕ್ಷಣದ ಬಳಿಕ ತನ್ನ ೬ನೇ ವರ್ಷದಲ್ಲಿ ಗದಾಧರನನ್ನು ವರಿಸಿದಳು. ಮತ್ತೆ ಎಂಟು ವರ್ಷಗಳ ಬಳಿಕ ಅಂದರೆ ದೊಡ್ಡವಳಾದ ಮೇಲೆ ಆತನ ಮನೆಗೆ ಹೋದಳು. ಸರಳತೆ, ದಯೆ, ಪರಿಶುದ್ಧತೆ ಮತ್ತು ಸಮರ್ಪಣಾ ಮನೋಭಾವದ ಈ ಮಮತಾಮಯಿ ಜೀವನಪೂರ್ತಿ ಪ್ರಾರ್ಥನೆ, ಭಕ್ತಿ ಮತ್ತು ಸೇವೆಗಳಲ್ಲಿ ಮುಳುಗಿದಳು. ರಾಮಕೃಷ್ಣನ ಕುರಿತು ಆಕೆ ಹೀಗೆ ಹೇಳಿದಳು: "ಅವರು ನನ್ನ ತಂದೆ, ನನ್ನ ತಾಯಿ; ಸಹೋದರ, ನನ್ನ ಸ್ನೇಹಿತ ಮತ್ತು ಆತ ನನಗೆ ಎಲ್ಲವೂ." ಅವಳು ಗಂಡನನ್ನು 'ಯಜಮಾನರೇ' ಎಂದು ಕರೆಯುತ್ತಿದ್ದಳು. ರಾಮಕೃಷ್ಣನಾದರೋ ಆಕೆ ಕಾಳಿಕಾಮಾತೆಯ ಅಪರಾವತಾರವೆಂದು ಆಕೆಗೆ ಪೂಜೆ ಮಾಡುತ್ತಿದ್ದ ಮತ್ತು ಆಕೆ ದೇವ ಮಾತೆ ಎಂದೇ ಹೇಳುತ್ತಿದ್ದ. ಆಕೆಯದು ಎಲ್ಲವನ್ನೂ ಒಳಗೊಳ್ಳುವ

ಪ್ರೀತಿಯಾಗಿತ್ತು, ತಾಯಿಯ ಪ್ರೀತಿಯಾಗಿತ್ತು. ಪವಿತ್ರ ದೇವಮಾತೆಯ ಪ್ರೀತಿಯ ಮಂಗಳದಾಯಿ ವ್ಯಕ್ತಿತ್ವ ಉಳ್ಳವಳಾದುದರಿಂದ ಜೀವನದಲ್ಲಿ ಸಂಕಟ, ನೋವು ಇರುವವರು ಸಾಂತ್ವನ ಮತ್ತು ಭರವಸೆಯ ಅಭಯಹಸ್ತಕ್ಕಾಗಿ ಆಕೆಯ ಬಳಿಗೆ ಬರುತ್ತಿದ್ದರು. ಆಕೆಯ ಮಧುರ ಪ್ರೀತಿ ಮತ್ತು ಭರವಸೆಯ ಮಾತುಗಳಿಂದ ಸಂಕಟಮಯಿಗಳಾಗಿ ಬಂದವರು ಗುಣಮುಖರಾಗಿ ತೆರಳುತ್ತಿದ್ದರು. ಶ್ರೀ ರಾಮಕೃಷ್ಣರಿಗೆ ಮಾತ್ರವಲ್ಲ, ಲಕ್ಷಾಂತರ ಭಕ್ತರಿಗೆ ಆಕೆ ತಾಯಿಯಾಗಿದ್ದಳು. "ಮನುಷ್ಯನ ಸಾವಿನ ನಂತರ ಆತನ ಬೆನ್ನ ಹಿಂದೆ ಬರುವುದು ಅವನು ಮಾಡಿದ ಕರ್ಮ ಮಾತ್ರ" ಎಂದು ಆಕೆ ಹೇಳುತ್ತಿದ್ದಳು.

* ಮನಸ್ಸು ಸಿದ್ಧವಾಗಿಲ್ಲದಿದ್ದರೂ ಎಂತಹ ಸನ್ನಿವೇಶದಲ್ಲಾದರೂ ಜಪ ಮಾಡುವುದನ್ನು ಬಿಡಬೇಡಿ. ಮತ್ತೆ ಮತ್ತೆ ಜಪ ಮಾಡುತ್ತಲೇ ಇರಿ.

* ಏಕಾಗ್ರತೆ ಮತ್ತೆ ಪೂರ್ಣಭಕ್ತಿ ಹಾಗೂ ಶರಣಾಗತಿಯಿಂದ ಒಂದು ಬಾರಿ ಜಪ ಮಾಡಿದರೂ ಅದರ ಪರಿಣಾಮ ಅದ್ಭುತ.

### ಶ್ರೀ ಶಂಕರದೇವ (೧೪೪೯–೧೫೬೮) ಅಲಿಪುಖುರಿ, ಬಾರ್ದೋವಾ, ನೌಗಾಂಗ್ ಜಿಲ್ಲೆ, ಅಸ್ಸಾಮ್:

ಕುಸುಮಾವರದ ಶಿರೋಮಣಿ ಭೂಯಾನ್ ಕುಟುಂಬದಲ್ಲಿ ಈ ಪ್ರಸಿದ್ಧ ಕವಿ, ಸಂತನ ಜನನವಾಯಿತು. ಬಹುಮುಖ ಪ್ರತಿಭಾವಂತನಾಗಿದ್ದ ಈತನಲ್ಲಿ ಅಸ್ಸಾಮೀ ಸಂಸ್ಕೃತಿ, ಜೀವನ ಮತ್ತು ಸಾಹಿತ್ಯ ಸಮಾವೇಶಗೊಂಡಿವೆ. ವೈಷ್ಣವ ಮತಕ್ಕೆ ಸಂಬಂಧಿಸಿದ 'ಭಕ್ತಿರತ್ನಾಕರ' ಎಂಬ ಕೃತಿಯನ್ನು ರಚಿಸಿದ್ದಾನೆ. ಅಸ್ಸಾಮಿನ ನವವೈಷ್ಣವ ಪಂಥ ಈತನಿಂದ ಆರಂಭವಾಯಿತು. ವಿಷ್ಣುವನ್ನು ಮಾತ್ರ ಪೂಜಿಸಿರಿ ಎಂದು ಶಂಕರದೇವ ಪ್ರತಿಪಾದಿಸಿದ. ಭಾಗವತ ಪುರಾಣದ ತತ್ವಗಳು ಅವನ ಪ್ರತಿಪಾದನೆಗಳಲ್ಲಿ ಮಡುಗಟ್ಟಿತ್ತು; "ಒಬ್ಬ ದೇವರು" ಅಂದರೆ ಕೃಷ್ಣನ ಕುರಿತ ಅದಮ್ಯವಾದ ಪ್ರೀತಿ ಮತ್ತು ನಿರ್ಮಲ ಭಕ್ತಿ ಇರಬೇಕು. ಸೇವಕ ಮನೋಭಾವದ ಭಕ್ತಿ ಅಥವಾ ದಾಸ್ಯ ವೃತ್ತಿ ಮತ್ತು ದೇವರು ಇರಬೇಕು. ಗುರು ಎಂಬ ಭಾವನೆ ಇಲ್ಲಿ ಪ್ರಮುಖವಾದದ್ದು. ಅತ್ಯುನ್ನತವಾದ, ಅತ್ಯುತ್ತಮನಾದ, ಅತ್ಯಂತ ಆದರ್ಶಯುತನಾದ ಒಬ್ಬನೇ ಒಬ್ಬ ದೇವರು ಇರುವವನಾದರೆ ಆತ ಕೃಷ್ಣ (ವಿಷ್ಣು) ಮತ್ತು ಅವನಿಗೆ ಸಂಪೂರ್ಣ ಶರಣಾಗುವುದೇ ಅತ್ಯುತ್ತಮ ಹಾದಿ ಎಂದು ಆತ ಉಪದೇಶಿಸಿದ. ಇತರ ದೇವರುಗಳನ್ನು, ದೇವತೆಗಳನ್ನು ಪೂಜಿಸುವ ಅಗತ್ಯವೇ ಇಲ್ಲ ಎಂದ. ಹುಟ್ಟಿನಿಂದ, ಸಂಪತ್ತಿನಿಂದ ಮತ್ತು ಅಧಿಕಾರದಿಂದ ಅವನು ಒಳ್ಳೆಯ ಸ್ಥಾನದಲ್ಲಿದ್ದ. ಧರ್ಮ ಪ್ರಸಾರಕ್ಕಾಗಿ ಅವೆಲ್ಲವನ್ನೂ ತ್ಯಜಿಸಿ ಬಡತನವನ್ನು ಆಹ್ವಾನಿಸಿಕೊಂಡ. ಅವನ ಮೇಲೆ ಮಾಟ–ಮಂತ್ರ ಪ್ರಯೋಗಿಸಲಾಯಿತು. ತುಂಬ



ಕಷ್ಟನಷ್ಟ ಅನುಭವಿಸಿದ. ಆ ಕಾಲದಲ್ಲಿ ದೇಶದ ಪೂರ್ವಾಂಚಲದಲ್ಲಿ ವಾಮಾಚಾರಗಳು ವಿಪರೀತವಾಗಿದ್ದವು. ಮೂರ್ತಿ ಪೂಜೆ ಮತ್ತು ಪ್ರಾಣಿಬಲಿಗಳ ವಿರುದ್ಧ ಅವನು ಪ್ರಚಾರ ಮಾಡಿದ. ಅದರ ವಿರುದ್ಧ ಶಂಕರದೇವ ಹೋರಾಡಿದ. ಚಳವಳಿ ಬೆಳೆಯುತ್ತಿದ್ದಂತೆ ಬಾರ್ದೋವಾದಲ್ಲಿ 'ಸತ್ರ'ವನ್ನು (ಮಠ) ಸ್ಥಾಪನೆ ಮಾಡಿದ. ಅವರ ಶಿಷ್ಯರಲ್ಲಿ ಪ್ರಮುಖರಾದ ದಾಮೋದರ ದೇವ, ಮಾಧವ ದೇವ ಮತ್ತು ಹರಿದೇವ ಕೂಡ ಮಠಗಳನ್ನು ಸ್ಥಾಪಿಸಿದರು. ಅವನು ಸ್ಥಾಪನೆ ಮಾಡಿದ ಮುಖ್ಯ ಮಠಗಳಲ್ಲಿ ಕೆಲವು: ಬಾರ್‌ಪೇಟ, ಔನಿಯಾತಿ ಸತ್ರ, ದಕ್ಕಿನ್ ಪರ್ ಸತ್ರ, ಗರಮಾರ್ ಸತ್ರ, ಮತ್ತು ಬ್ರಹ್ಮಪುತ್ರ ನದಿಯ ಮುಖಜ ಭೂಮಿಯಲ್ಲಿರುವ ಮಜುಲಿ ದ್ವೀಪದಲ್ಲಿರುವ ಕಮಲಬಾರಿ ಮಠಗಳು ಪ್ರಸಿದ್ಧವಾಗಿವೆ. ಇವಲ್ಲದೆ ಅಸ್ಸಾಮಿನ ಹಲವೆಡೆ ಸ್ಥಾಪಿಸಲಾಗಿರುವ ಮಠಗಳಲ್ಲಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ತಾತ್ವಿಕ ಚಿಂತನ ಚಟುವಟಿಕೆಗಳು ನಡೆಯುತ್ತಿವೆ.

* "ವಿಷ್ಣುವನ್ನು ಜಗತ್ತಿನ ಎಲ್ಲ ಚರಾಚರಗಳಲ್ಲಿ ಯಾರು ಕಾಣುತ್ತಾರೋ, ಪ್ರತಿಯೊಂದೂ ಜೀವಜಂತುವನ್ನೂ ತನ್ನದೇ ಜೀವಾತ್ಮದ ಭಾಗ ಎಂದು ಯಾರು ನಿರ್ಮಲಚಿತ್ತದಿಂದ ಭಾವಿಸುತ್ತಾರೋ ಅವರು ಜೀವಂತ ಇರುವಾಗಲೇ ಮೋಕ್ಷ ಸಂಪಾದಿಸುತ್ತಾರೆ" ಎಂದು ಶಂಕರ ದೇವ ಹೇಳಿದ.
* "ಹರಿ ಎಂಬ ನಾಮವು ಕೇವಲ ನಾಮವಾಗಿರದೆ ಅದು ಅವನೇ ಆಗಿದ್ದಾನೆ."
* "ಪ್ರಕೃತಿ ಮತ್ತು ಪುರುಷರ ನಿಯಾಮಕ ಶಕ್ತಿ ಮಾಧವನೇ ಆಗಿದ್ದಾನೆ. ಹರಿಯು ಎಲ್ಲರ ಆತ್ಮಸಖ ಆಗಿದ್ದಾನೆ. ಇದು ಶಂಕರ ದೇವನ ಉಪದೇಶದ ಮುಖ್ಯಾಂಶ."

### ಶ್ರೀ ಶಂಕರಾಚಾರ್ಯ (೭೮೮–೮೨೦), ಕಾಲಟಿ, ಕೇರಳ

ಬಡ ಬ್ರಾಹ್ಮಣ ಕುಟುಂಬದ ದಂಪತಿಗಳಿಗೆ ಒಬ್ಬನೇ ಮಗನಾಗಿ ಹುಟ್ಟಿದ ಈ ಬಾಲಕ ಸಣ್ಣ ವಯಸ್ಸಿನಲ್ಲಿಯೇ ಸನ್ಯಾಸಾಶ್ರಮ ಸ್ವೀಕರಿಸಿ ಶಂಕರಾಚಾರ್ಯ ಆದರು. ಬದುಕಿದ್ದು ಕೇವಲ ೩೨ ವರ್ಷ. ಆದರೆ ನಾಲ್ಕು ಬಾರಿ ದೇಶ ಸಂಚಾರ ಮಾಡಿ ಹಿಂದೂ ಧರ್ಮವನ್ನು ಪುನಃಸ್ಥಾಪನೆ ಮಾಡಿದ ಪವಾಡ ಸದೃಶ ವ್ಯಕ್ತಿತ್ವದ ವರ್ಚಸ್ವೀ ಸಂತ. ಶಂಕರಚಾರ್ಯರು ತತ್ವಶಾಸ್ತ್ರಜ್ಞ, ವಿದ್ವಾಂಸ, ಕವಿ, ಭಾಷ್ಯಕಾರ ಮತ್ತು ಅದ್ವೈತ ಮತಸ್ಥಾಪಕನಾಗಿ ಅಜರಾಮರರಾದರು. ಸನಾತನ ಧರ್ಮಕ್ಕೆ ಭಾಷ್ಯ ಬರೆದುದಲ್ಲದೆ ವಾದ ಮಂಡನೆಗೆ ಬಂದ ಎಲ್ಲರನ್ನೂ ಸೋಲಿಸಿ, ಕೊನೆಗೆ ಎಲ್ಲರನ್ನೂ ಒಗ್ಗೂಡಿಸಿ ಹಿಂದೂ ಧರ್ಮದ ಪುನರುತ್ಥಾನ ಮಾಡಿದರು. ಭಾರತದ ನಾಲ್ಕು ದಿಕ್ಕುಗಳ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ

ಧರ್ಮ ಪ್ರಸಾರಕ್ಕೆ ಭದ್ರ ತಳಪಾಯ ಹಾಕಿಕೊಟ್ಟರು. ತನ್ನ ನಾಲ್ವರು ಪ್ರಮುಖ ಶಿಷ್ಯರಾದ ಪದ್ಮಪಾದ (ಇವರಿಗೆ ಇಬ್ಬರು ಶಿಷ್ಯರಿದ್ದರು), ಹಸ್ತಾಮಲಕ (ಇವರಿಗೆ ಇಬ್ಬರು ಶಿಷ್ಯರಿದ್ದರು) ಸುರೇಶ್ವರ (ಇವರಿಗೆ ಮೂವರು ಶಿಷ್ಯರಿದ್ದರು) ಮತ್ತು ತೋಟಕ(ಇವರಿಗೆ ಮೂವರು ಶಿಷ್ಯರಿದ್ದರು)ರೊಂದಿಗೆ 'ದಶನಾಮೀ ಸನ್ಯಾಸ ವ್ಯವಸ್ಥೆ'ಯನ್ನು ಹುಟ್ಟು ಹಾಕಿದರು. ಶಂಕರಾಚಾರ್ಯರ ಒಟ್ಟು ೭೨ ರಚನೆಗಳು ಲಭ್ಯ ಇವೆ. ಅವುಗಳಲ್ಲಿ 'ಭಜಗೋವಿಂದಂ', 'ಅಚ್ಯುತಾಷ್ಟಕಂ', 'ಶಿವಪಂಚಾಕ್ಷರ ಸ್ತೋತ್ರಂ', 'ದಕ್ಷಿಣಾಮೂರ್ತಿ ಸ್ತೋತ್ರಂ', 'ಶಿವಾನಂದ ಲಹರಿ' ಮೊದಲಾದವು ಪ್ರಖ್ಯಾತವಾಗಿವೆ. ವೇದಾಂತ ಸಾಧನೆಗೆ ಮಾರ್ಗದರ್ಶಿಗಳಾದ ಅಪರೋಕ್ಷಾನುಭೂತಿ, ಉಪದೇಶ ಪಂಚಕಂ, ವಿವೇಕ ಚೂಡಾಮಣಿ ಮೊದಲಾದವು ಅತ್ಯದ್ಭುತ ಆಧ್ಯಾತ್ಮಿಕ ಗ್ರಂಥಗಳಾಗಿದ್ದು ವಿಶ್ವದಲ್ಲಿ ಮನ್ನಣೆಗೆ ಪಾತ್ರವಾಗಿವೆ. ಮೊಟ್ಟ ಮೊದಲನೆಯ ಬಾರಿಗೆ ಹತ್ತು ಪ್ರಮುಖ ಉಪನಿಷತ್ತುಗಳಿಗೆ, ಭಗವದ್ಗೀತೆಗೆ ಮತ್ತು ಬ್ರಹ್ಮಸೂತ್ರ ಅಥವಾ ಪ್ರಸ್ಥಾನತ್ರಯಗಳಿಗೆ ಶಂಕರಾಚಾರ್ಯರು ಭಾಷ್ಯ ಬರೆದಿದ್ದು ಇವು ಎಲ್ಲ ಕಾಲಕ್ಕೂ ಸಲ್ಲುವ ಸರ್ವಮಾನ್ಯ ಅಧಿಕೃತ ಗ್ರಂಥಗಳಾಗಿವೆ. "ಬ್ರಹ್ಮ ಸತ್ಯ; ಜಗತ್ತು ಮಿಥ್ಯ" (ದೇವರು ಮಾತ್ರ ಸತ್ಯ; ಈ ಜಗತ್ತು ಕೇವಲ ಮಾಯೆ) ಮತ್ತು "ಆತ್ಮ, ಪರಮಾತ್ಮ ಬೇರೆ ಬೇರೆ ಅಲ್ಲ; ಅವು ಒಂದೇ" ಎಂಬ ಉಪದೇಶವನ್ನು ಶಂಕರಾಚಾರ್ಯರು ನೀಡಿದರು. ಇದು ಅದ್ವೈತ ತತ್ವ ಎಂದು ಪ್ರಸಿದ್ಧವಾಗಿದೆ.

**ಶ್ರೀ ಸಾಯಿಬಾಬಾ (೧೮೩೮–೧೯೧೮), ಪತ್ರಿ/ಶಿರಡಿ, ಔರಂಗಾಬಾದ್/ಕೊಲ್ಹಾಪುರ ಜಿಲ್ಲೆ, ಮಹಾರಾಷ್ಟ್ರ:**

ಔರಂಗಾಬಾದ್‌ನ ಪತ್ರಿ ಎಂಬಲ್ಲಿ ಬಡಕುಟುಂಬವೊಂದರಲ್ಲಿ ಈತ ಹುಟ್ಟಿದ. ಚಿಕ್ಕವನಿದ್ದಾಗಲೇ ತಂದೆ–ತಾಯಿಯರು ಅವನನ್ನು ತ್ಯಜಿಸಿದರು. ಒಬ್ಬ ಫಕೀರ ಅವನನ್ನು ಸಾಕಿದ. ಇಷ್ಟಾಗಿಯೂ ಅವನ ಜನ್ಮಸ್ಥಳ ಮತ್ತು ಮೂಲದ ಬಗ್ಗೆ ಭಿನ್ನಾಭಿಪ್ರಾಯ ಇದೆ. ಹತ್ತಿರದ ಮಸೀದಿಯೊಂದರಲ್ಲಿ ಅವನು ವಾಸಿಸುತ್ತಿದ್ದ; ಆದರೆ ಶಿರ್ಡಿ ಎಂಬಲ್ಲಿ ಸಾಯುವವರೆಗೂ ಹಿಂದೂ ರೂಢಿ ಸಂಪ್ರದಾಯದಂತೆ ಜೀವಿಸಿದ. ಒಬ್ಬ ಆಧ್ಯಾತ್ಮಿಕ ಗುರುವಾಗಿ ಹಿಂದೂ ಮತ್ತು ಮುಸ್ಲಿಮರಿಂದ ಸಮಾನವಾಗಿ ಆತ ಸ್ವೀಕರಿಸಲ್ಪಟ್ಟುದಲ್ಲದೆ, ದತ್ತಾತ್ರೇಯನ ಅವತಾರ ಎಂದು ಹೇಳಲಾಗಿದೆ. ಕಥೆ ಮತ್ತು ದೃಷ್ಟಾಂತಗಳ ಮೂಲಕ ಅವನು ಉಪದೇಶಿಸುತ್ತಿದ್ದ. ಜಾತಿ ಮತ ಭೇದವಿಲ್ಲದೆ ಪ್ರಪಂಚದಾದ್ಯಂತ ಲಕ್ಷಾಂತರ ಸಂಖ್ಯೆಯಲ್ಲಿ, ವಿಶೇಷತಃ ಗುರುವಾರಗಳಂದು ಆತನ ಸಮಾಧಿಸ್ಥಳಕ್ಕೆ ಭೇಟಿ ನೀಡುತ್ತಾರೆ. ಜನರ ಹೃದಯದೊಳಗೆ ಲಗ್ಗೆಯಿಟ್ಟು ಅವರ ಆಂತರ್ಯದಲ್ಲಿ ಎಂತಹ ಆಲೋಚನೆಗಳಿವೆ ಎಂಬುದನ್ನು ಶಿರ್ಡಿ ಬಾಬಾ ಹೇಳುತ್ತಿದ್ದ ಮತ್ತು ಬಂದವರಿಗೆಲ್ಲ ಅನುಕೂಲವಾಗುವಂತೆ



ಮಾಡುತ್ತಿದ್ದ. 'ಪವಿತ್ರಪಿತ'ನಾದ (ಸಾಯಿ=ಪವಿತ್ರಪುರುಷ; ಬಾಬಾ=ಪಿತ, ತಂದೆ) ಶಿರ್ಡಿ ಸಾಯಿಬಾಬಾನನ್ನು ಪ್ರಪಂಚದಾದ್ಯಂತ ಪೂಜಿಸಲಾಗುತ್ತಿದೆ. ಕೆಲವೆಡೆ ಅವರಿಗೆ ದೇವಸ್ಥಾನವನ್ನೂ ಕಟ್ಟಲಾಗಿದೆ. ಹಲವಾರು ಪವಾಡಗಳನ್ನು ಶಿರ್ಡಿ ಸಾಯಿಬಾಬಾ ಮೆರೆದಿದ್ದರು. ಕ್ಯಾನ್ಸರನ್ನು ಗುಣಪಡಿಸಿದ್ದು, ನೀರಿನಿಂದ ದೀಪವನ್ನು ಹಚ್ಚಿದ್ದು, ಅಸ್ತಮಾ, ಕುರುಡತನ, ಹುಚ್ಚು ಇತ್ಯಾದಿಗಳನ್ನು ಮತ್ತು ಮೂತ್ರಪಿಂಡದ ಕಲ್ಲುಗಳನ್ನು ನಿವಾರಿಸಿ ಗುಣಪಡಿಸಿದ್ದು, ಯಾವುದೇ ಶಸ್ತ್ರ ಚಿಕಿತ್ಸೆ ನಡೆಸದೆ ಕೇವಲ ವಿಭೂತಿಯ ಸಹಾಯದಿಂದ ಕಣ್ಣಿನಲ್ಲಾದ ರೋಗದ ಗೆಡ್ಡೆ ಹೊರತೆಗೆದದ್ದು ಇತ್ಯಾದಿ ಪವಾಡಗಳನ್ನು ಶಿರ್ಡಿಬಾಬಾ ಮಾಡಿದ್ದಾರೆ. ಪ್ರತಿಯೊಂದು ರೋಗಕ್ಕೂ ಅಸೌಖ್ಯಕ್ಕೂ ನಿವಾರಣೆಗಾಗಿ ಭಸ್ಮವನ್ನು ಕೊಡುತ್ತಿದ್ದರು ಮತ್ತು ಕ್ಯಾನ್ಸರ್ ಮೊದಲಾದ ತೀವ್ರರೋಗಗಳೂ ಅದರಿಂದ ನಿವಾರಣೆಯಾಗುತ್ತಿತ್ತು! ೧೯೧೮ರ ವಿಜಯದಶಮಿ ದಿನ ಅವರು ಸಮಾಧಿಯಾದರು. "ಎಲ್ಲರ ಗುರು ದೇವರೊಬ್ಬನೇ; ಅಲ್ಲಾಹ್ ಎಲ್ಲರ ಮಾಲೀಕನಾಗಿದ್ದಾನೆ" ಎಂದು ಶಿರ್ಡಿ ಬಾಬಾ ಹೇಳುತ್ತಿದ್ದರು. "ನೀವು (ಹಿಂದೂಗಳು ಮತ್ತು ಮುಸಲ್ಮಾನರು) ಒಬ್ಬಳೇ ತಾಯಿಯ ಮಕ್ಕಳಾಗಿದ್ದೀರಿ" ಎಂದು ಆಗಾಗ ಹೇಳುತ್ತಿದ್ದರು.

**ಶ್ರೀ ಸಹಜಾನಂದ ಸ್ವಾಮೀ (೧೭೮೧–೧೮೩೦), ಚಪ್ಪಯ್ಯಾ, ಗುಜರಾತ್:**

ಈತನ ಮೊದಲ ಹೆಸರು ಘನಶ್ಯಾಮ್. ಗುಜರಾತದ ಚಪ್ಪಯ್ಯ ಎಂಬಲ್ಲಿ ಜನಿಸಿದ ಈತನಿಗೆ ಪ್ರಾಪಂಚಿಕ ವ್ಯವಹಾರಗಳಲ್ಲಿ ಆಸಕ್ತಿಯಿಲ್ಲದೆ ಗುರುವೊಬ್ಬನನ್ನು ಅರಸುತ್ತ ಕಾಶಿಗೆ ಹೋದ. ಅಲ್ಲಿ ಸ್ವಾಮೀ ರಾಮಾನಂದ ಅವರ ಭೇಟಿಯಾಯಿತು. ರಾಮಾನಂದನು ಘನಶ್ಯಾಮನಿಗೆ ಸಹಜಾನಂದ ಎಂದು ಮರುನಾಮಕರಣ ಮಾಡಿದ. ೧೮೦೧ರಲ್ಲಿ ಗುಜರಾತಿಗೆ ವಾಪಸ್ಸು ಬಂದು ವೈಷ್ಣವ ಸಂಪ್ರದಾಯದ ಭಕ್ತಿಪಂಥವೊಂದನ್ನು ಹುಟ್ಟುಹಾಕಿದ. ಧರ್ಮ, ಜ್ಞಾನ ಮತ್ತು ವೈರಾಗ್ಯದ ಹಾದಿಯಲ್ಲಿ ಸಂಪೂರ್ಣ ಭಕ್ತಿಯ ಮೂಲಕ ಮೋಕ್ಷವನ್ನು ಸಂಪಾದಿಸಬಹುದು ಎಂದು ಪ್ರತಿಪಾದಿಸಿದ. ಮುಂದೆ ಈ ಸಂಪ್ರದಾಯದಲ್ಲಿ ಗುರುಗಳಾದ ಗುಣತೀರ್ಥಾನಂದ ಸ್ವಾಮಿ (೧೮೩೦–೧೮೬೭), ಭಗತ್ ಜೀ ಮಹಾರಾಜ್ (೧೮೬೭–೧೮೯೭), ಶತ್ರೀ ಮಹಾರಾಜ್ (೧೮೯೭–೧೯೫೧) ಮತ್ತು ಯೋಗಿರಾಜಿ ಮಹಾರಾಜ್ (೧೯೫೧–೧೯೭೧) ಮೊದಲಾದವರು ಆಧ್ಯಾತ್ಮಿಕ ನೇತಾರರಾದರು. ಕೃಷ್ಣಭಕ್ತನಾದ ಸಹಜಾನಂದ ಸ್ವಾಮಿ ಗುಜರಾತಿ ಭಾಷೆಯಲ್ಲಿ ರಚಿಸಿದ ಭಕ್ತಿ ಕೀರ್ತನೆಗಳನ್ನು ಹಬ್ಬ ಹರಿದಿನಗಳ ಸಂದರ್ಭದಲ್ಲಿ ಇಂದಿಗೂ ಹಾಡಲಾಗುತ್ತದೆ. ಭಗವಾನ್ ಸ್ವಾಮಿ ನಾರಾಯಣ ಎಂಬ ಹೆಸರಿನಲ್ಲಿ ಆತನನ್ನು ಪೂಜಿಸಲಾಗುತ್ತಿದೆ. ದೈವೀ ಜ್ಞಾನ ಸಂಪನ್ನನಾಗಿದ್ದ ನೆಂದು ನಂಬಲಾಗಿರುವ ಸಹಜಾನಂದ ಸ್ವಾಮಿ ಜ್ಞಾನಮಾರ್ಗದ ಮೂಲಕ ಮೋಕ್ಷ ಸಂಪಾದಿಸಿದ ಪುಣ್ಯಪುರುಷನಾಗಿದ್ದಾನೆ.

**ಶ್ರೀ ಸ್ವಾಮೀ ಸೋನಾ ಕಾಕಾಜಿ, (೧೮೭೮–೧೯೪೨), ಶ್ರೀನಗರ, ಕಾಶ್ಮೀರ:**

ಕಾಶ್ಮೀರದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಸೋನಾ ಕಾಕನ ತಂದೆಯನ್ನು ಲೋರಿಪೀರ್ ಎಂದು ಕರೆಯುತ್ತಿದ್ದರು. ಕಾಕಾನ ಅಣ್ಣನೂ ಸಂತನಾಗಿದ್ದ. ಬ್ರಹ್ಮಚಾರಿಯಾಗಿಯೇ ಉಳಿದಿದ್ದ ಈತ ಉಪಾಸನೆಗಾಗಿ ಪ್ರತಿನಿತ್ಯ ಸ್ಮಶಾನದಲ್ಲಿ ಕುಳಿತುಬಿಡುತ್ತಿದ್ದ. ಅಲ್ಲಿ ಅವನಿಗೆ ಸಾಕ್ಷಾತ್ಕಾರ ಆಯಿತಂತೆ. 'ತ್ರಿಕಾಲದರ್ಶಿ' ಎಂದು ಕಾಶ್ಮೀರದಲ್ಲಿ ಅವನನ್ನು ಕರೆಯಲಾಗುತ್ತಿತ್ತು. ಭೂತ, ವರ್ತಮಾನ ಮತ್ತು ಭವಿಷ್ಯತ್ ವಿಚಾರಗಳೆಲ್ಲ ಅವನಿಗೆ ತಿಳಿಯುತ್ತಿತ್ತು. ತನ್ನ ಸಾವಿನ ಸ್ಥಳ ಮತ್ತು ಸಮಯವನ್ನು ಅವನು ಮೊದಲೇ ತಿಳಿಯಪಡಿಸಿದ್ದ. ಅವನೊಬ್ಬ ವಿನೀತ ಸಂತನಾಗಿ ಲಕ್ಷಾಂತರ ಭಕ್ತರಿಗೆ ಸಹಾಯ ಮಾಡಿದ. ಅವನನ್ನು ಎಲ್ಲರೂ ಸೋನಾಬಾಬಾ (ತಂದೆ), ಸೋನಾ ಬಾಯೂ ಅಥವಾ ಸೋನಾ ಮಾತೂ (ಆಧ್ಯಾತ್ಮ ಶಕ್ತಿಯುಳ್ಳವನು) ಎಂದು ಕರೆಯುತ್ತಿದ್ದರು.

**ಶ್ರೀ ಸೂರದಾಸ (೧೪೭೮–೧೫೮೩) ಸಿರಿ, ದೆಹಲಿ:**

ಹುಟ್ಟುವಾಗಲೇ ಅಂಧನಾಗಿದ್ದ ಸೂರದಾಸ ಬಾಲ್ಯದಲ್ಲೇ ಐಹಿಕ ಬದುಕಿನ ಕಡೆಗೆ ಜುಗುಪ್ಸೆ ಹೊಂದಿ ಆಧ್ಯಾತ್ಮ ಸಾಧನೆಗೆ ತೊಡಗಿದ. ಬ್ರಹ್ಮಚಾರಿಯಾಗಿ ಉಳಿದ. ಅತೀವ ಕೃಷ್ಣಭಕ್ತನಾದ ಅವನು ವ್ರಜಭಾಷೆಯಲ್ಲಿ (ಹಿಂದಿಯ ಉಪಭಾಷೆ) ರಚಿಸಿದ ಭಕ್ತಿಗೀತೆಗಳು ಅದ್ವಿತೀಯವಾಗಿವೆ. ಭಾವುಕ ಅಭಿವ್ಯಕ್ತಿ, ಆಲಂಕಾರಿಕ ವಿವರಣೆ, ಭಕ್ತಿ ನಿರಭತೆ, ಆಧ್ಯಾತ್ಮಿಕ ಅನುಭೂತಿ, ಗೇಯಾಂಶ ಮತ್ತು ಸಾಹಿತ್ಯಿಕ ಮೌಲ್ಯಗಳಿಂದ ಅವನ ರಚನೆಗಳು ಚಿರಸ್ಥಾಯಿಯಾಗಿ ಉಳಿಯುವಂತಿವೆ. ಮೂರು ಸಂಪುಟಗಳಲ್ಲಿ ಅವನ ಸಾಹಿತ್ಯವನ್ನು ಹೊರತರಲಾಗಿದೆ: ೧. ಲಕ್ಷ ವಚನಗಳುಳ್ಳ 'ಸೂರ ಸಾರಾವಳಿ, ೨. ಸಚಿತಿ ಲಹರಿ ಮತ್ತು ೩. ಸೂರ್ ಸಾಗರ್, ಕೊನೆಯ ಕೃತಿ ಕೃಷ್ಣನ ಬದುಕು, ಬಾಲಲೀಲೆ, ಗೋಪಾಲನೆ, ಗೋಪಿಕೆಯರನ್ನು ರೇಗಿಸುವ ಚಿತ್ರಣ, ಅವನ ಸ್ನೇಹಿತರ ವಿನೋದ ಹಾಗೂ ಸಾಹಸ ಕೃತ್ಯಗಳ ವರ್ಣನೆಗಳಿಂದ ತುಂಬಿ ಮಹತ್ವದ ಕೃತಿಯಾಗಿ ಉಳಿದಿದೆ. ಕೃಷ್ಣನ ದುಷ್ಟಶಿಕ್ಷೆ ಮತ್ತು ಶಿಷ್ಟ ಪರಿಪಾಲನೆಯ ಚಿತ್ರಣವನ್ನು ಒಳಗೊಂಡು ಪ್ರಾಪಂಚಿಕ ಬದುಕಿನ ನೆಲೆಯಿಂದ ದೈವತ್ವಕ್ಕೇರಿದ ಅತಿಮಾನುಷ ವ್ಯಕ್ತಿತ್ವದ ಹೃದಯಸ್ಪರ್ಶಿ ಚಿತ್ರಣದಿಂದ ಈ ಕೃತಿ ಲಕ್ಷಾಂತರ ಜನಗಳ ಮನಸ್ಸನ್ನು ಶ್ರೀಮಂತಗೊಳಿಸಿದೆ.

**ಶ್ರೀ ಸಮರ್ಥರಾಮದಾಸ (೧೬೦೮–೧೬೮೧) ಜಂಬಾ, ಮಹಾರಾಷ್ಟ್ರ:**

ಸೂರ್ಯಾಜಿ ಪಂತ್ ಮತ್ತು ರಾಣಬಾಯಿ ಸಮರ್ಥ ಎಂಬ ಬ್ರಾಹ್ಮಣ ದಂಪತಿಗಳ ಮೂರನೇ ಮಗನಾಗಿ ಹುಟ್ಟಿದ ಈತನಿಗೆ ನಾರಾಯಣ ಎಂಬ



ನಾಮಕರಣವಾಯಿತು. ತನ್ನ ಹನ್ನೆರಡನೇ ವರ್ಷಕ್ಕೆ ಆಧ್ಯಾತ್ಮ ಚಟುವಟಿಕೆಗಳಲ್ಲಿ ತೊಡಗಿಕೊಂಡು ಅನಂತರದ ಹನ್ನೆರಡು ವರ್ಷಗಳ ಕಾಲ ಜಪತಪ ಆಚರಣೆ, ಅಧ್ಯಯನ, ತಪಸ್ಸು ಮುಂತಾದ ಗಂಭೀರ ಪ್ರಯತ್ನದಲ್ಲಿ ತೊಡಗಿಕೊಂಡ. ಅಷ್ಟುಕಾಲ ತನ್ನ ಆರಾಧ್ಯದೈವ ಶ್ರೀರಾಮನ ನಾಮಾವಳಿಯನ್ನು ಹದಿಮೂರು ಕೋಟಿ ಸಲ ಜಪಿಸಿದ್ದ! ಆದುದರಿಂದ ಅವನಿಗೆ ರಾಮದಾಸ ಎಂಬ ಹೆಸರಾಯಿತು. ಅವನು ರಾಮಭಕ್ತ ಹನುಮಂತನ ಅವತಾರವೆಂದೂ ದೇವರಿಂದ ಶ್ರೀರಾಮ ಮಂತ್ರೋಪದೇಶ ನೇರವಾಗಿ ಆಯಿತೆಂದೂ ಭಾವಿಸಲಾಗಿದೆ. ಧಾರ್ಮಿಕ ಕೆಲಸಕಾರ್ಯಗಳಿಗೆ ಮಾತ್ರವಲ್ಲ, ಪ್ರಾಪಂಚಿಕ ಚಟುವಟಿಕೆಗಳಿಗೂ ಜನರು ಅವನ ಮಾರ್ಗದರ್ಶನ ಸಲಹೆ ಸೂಚನೆ ತೆಗೆದುಕೊಳ್ಳುತ್ತಿದ್ದರು. ಅವನ ಶ್ರೇಷ್ಠ ಕೃತಿ 'ದಾಸಬೋಧೆ' ಮನುಷ್ಯ ಜೀವನದ ಎಲ್ಲ ಆಯಾಮಗಳನ್ನು ಒಳಗೊಂಡಿದ್ದು ಏಕಕಾಲಕ್ಕೆ ಬುದ್ಧಿ ಭಾವಗಳನ್ನು ಅರಳಿಸುವ ಮರಾಠೀ ಕೃತಿಯಾಗಿದೆ. ಅವನು ಒಬ್ಬ ಯೋಧ ಸಂತ. ಹಲವು ಬಾರಿ ವಿದೇಶೀ ಆಕ್ರಮಣಕಾರರ ವಿರುದ್ಧ ಸ್ವತಃ ಕತ್ತಿ ಹಿಡಿದು ಹೋರಾಡಿದ. ಸಾಮಾಜಿಕ ಪರಿವರ್ತನೆಗಾಗಿ ಶ್ರಮಿಸಿದವನೂ ಹೌದು. ಸದಾ ಅಶಕ್ತರ ಮತ್ತು ದುರ್ಬಲರ ಪರವಾಗಿ ನಿಂತ. ಪ್ರಾಮಾಣಿಕತೆಯ ಮತ್ತು ಸಂಪೂರ್ಣ ನಿಷ್ಠೆಯ ಕಾಯಕದ ಮಹತ್ವವನ್ನು ಒತ್ತಿ ಹೇಳುತ್ತಿದ್ದ. ಮರಾಠಾ ರಾಜ ಛತ್ರಪತಿ ಶಿವಾಜಿಗೆ ಗುರುವಾಗಿ ಮರಾಠರಿಗೆ ಮಾರ್ಗದರ್ಶನ ನೀಡುತ್ತಿದ್ದ, ಆಧ್ಯಾತ್ಮಿಕ ನೇತಾರನಾಗಿ ದೈವಭಕ್ತಿಯನ್ನು ಪ್ರತಿಪಾದಿಸಿದ.

* "ಯಾವ ಹೆಸರಿನಿಂದ ಅವನನ್ನು ಪೂಜಿಸುತ್ತೇವೆ ಎಂಬುದು ಮುಖ್ಯವಲ್ಲ; ಎಷ್ಟು ನಿಯಮಿತವಾಗಿ, ಸತತವಾಗಿ, ನಿಷ್ಠೆ, ಶ್ರದ್ಧಾ ಭಕ್ತಿಯಿಂದ ಪೂಜಿಸುತ್ತೇವೆ ಎಂಬುದು ಮುಖ್ಯ."
* "ದೇವರನ್ನು ನಮ್ಮ ಸ್ನೇಹಿತನಾಗಿ, ತಂದೆಯಾಗಿ, ತಾಯಿಯಾಗಿ, ಜ್ಞಾನವಾಗಿ, ಸಂಪತ್ತಾಗಿ ಮತ್ತು ಎಲ್ಲವೂ ಆಗಿ ಅರಿತುಕೊಳ್ಳಬೇಕು."

–ಇವು ಸಮರ್ಥ ರಾಮದಾಸನ ಹಿತೋಪದೇಶದ ಸಾರ.

**ಶ್ರೀ ತುಕಾರಾಮ (೧೬೦೮–೧೬೫೦), ಪುಣೆ ಬಳಿಯ ದೇಹು, ಮಹಾರಾಷ್ಟ್ರ:**

ಬೋಲ್ಹೋಬಾ ಮತ್ತು ಕನಕೈ ಎಂಬ ಕೆಳಜಾತಿಯ ದಂಪತಿಗಳಿಗೆ ಮಗನಾಗಿ ಹುಟ್ಟಿದ. ಚಿಕ್ಕಂದಿನಿಂದಲೇ ದೇವರ ಕಡೆಗೆ ಆಕರ್ಷಿತನಾಗಿ ಧಾರ್ಮಿಕ ಚಟುವಟಿಕೆಗಳಲ್ಲಿ ನಿರತನಾದ. ಕೃಷಿ ಉತ್ಪನ್ನಗಳ ವ್ಯಾಪಾರಿಯಾಗಿ ಸಾಕಷ್ಟು ಹಣ ಸಂಪಾದಿಸಿದ. ಆದರೆ ಹಣದ ಬಗ್ಗೆ ಯಾವ ಮೋಹವೂ ಇರಲಿಲ್ಲ. ಎಲ್ಲವನ್ನೂ ಜನರಿಗಾಗಿ ಯಥೇಚ್ಛ ಖರ್ಚು ಮಾಡಿ ಕೈ ಖಾಲಿ ಮಾಡಿಕೊಳ್ಳುತ್ತಿದ್ದ. ಕೆಲವೊಮ್ಮೆ ಸಾಲ ಮಾಡಿ ಅಗತ್ಯವುಳ್ಳವರಿಗೆ ಹಂಚಿಬಿಡುತ್ತಿದ್ದ. ಹಾಗಾಗಿ ಹಲವಾರು ಸಂಕಷ್ಟಗಳಲ್ಲಿ

ಸಿಕ್ಕಿಹಾಕಿ ಕೊಳ್ಳುತ್ತಿದ್ದ. ಏಕಾದಶಿ ದಿವಸ ಉಪವಾಸ ಮಾಡುತ್ತಿದ್ದ. ವರ್ಷದಿಂದ ವರ್ಷಕ್ಕೆ ಅವನ ಭಕ್ತಿ ವೈರಾಗ್ಯ ಹೆಚ್ಚಿ ಪಂಡರಾಪುರದ ಕೃಷ್ಣನ ಪರಮಭಕ್ತನಾಗಿ "ಪಾಂಡುರಂಗಾ, ನಾನು ನೀನು ಅಭಿನ್ನ; ನನ್ನ ನಿನ್ನ ನಡುವೆ ಯಾವ ಭೇದವೂ ಇಲ್ಲ; ನಾನೇ ನೀನು; ನೀನೇ ನಾನು" ಎನ್ನುತ್ತ ಭಕ್ತಿಯ ಪರಾಕಾಷ್ಠೆಯಲ್ಲಿ ದೇವರದರ್ಶನ ಪಡೆದುಕೊಳ್ಳುತ್ತಿದ್ದ. ಯಾವುದೇ ಸಾಂಪ್ರದಾಯಿಕ ಶಿಕ್ಷಣ ಇರದಿದ್ದ ಅವಿದ್ಯಾವಂತನಾಗಿದ್ದರೂ ಅವನ ಭಕ್ತಿ ಜ್ಞಾನ ಮತ್ತು ವೈರಾಗ್ಯದ ಮುಂದೆ ಯಾವುದೂ ಸಾಟಿಯಿರಲಿಲ್ಲ. ಅವನ ಹಾಡುಗಳನ್ನು ಒಟ್ಟಾಗಿ 'ಗಾಥಾ' ಎಂದು ಸಂಕಲಿಸಲಾಗಿದೆ. ದೇವರನ್ನು ಸ್ತುತಿಸುವ ಅವನ ಹಾಡುಗಳು ಭಕ್ತಿ–ಭಾವದಲ್ಲಿ ಮಿಂದಿವೆ. ಹೃದಯ ಕಲಕುವಂತಿವೆ ಮತ್ತು ಪ್ರತಿಯೊಬ್ಬ ವಿದ್ಯಾವಂತನಿರಲಿ, ಅವಿದ್ಯಾವಂತನಿರಲಿ, ಮರಾಠಿಗನ ಬಾಯಲ್ಲಿ ಗುಣಿಗುಣಿತವಾಗುತ್ತಿರುತ್ತವೆ. ಅವನ ಕೀರ್ತನೆಗಳ ಸಂಗೋಷ್ಠಿಗಳಲ್ಲಿ, ಭಕ್ತಿ ಮೇಳಗಳಲ್ಲಿ ಲಕ್ಷಾಂತರ ಜನರು ಸೇರುತ್ತಿದ್ದರು ಮತ್ತು ಆ ಮೂಲಕ ಅವರೆಲ್ಲ ಭಕ್ತಿರಸದಲ್ಲಿ ಮೀಯುತ್ತಿದ್ದರು. ಆದರೆ ಅವನ ಒಳ್ಳೆಯ ಕೆಲಸ ಮತ್ತು ಸೇವೆ ಸಮಾಜದ ಅಸೂಯೆಗೆ ವಿದ್ಯಾವಂತರಿಗೆ ಹಿಡಿಸಲಿಲ್ಲ. ಅವನ ಅಭಂಗಗಳನ್ನೆಲ್ಲಾ ಕಟ್ಟಿ ಹೊಳೆಗೆ ಎಸೆದರು. ಆಶ್ಚರ್ಯದ ಸಂಗತಿಯೆಂದರೆ ಹದಿಮೂರನೇ ದಿನ ಪುಸ್ತಕದ ಕಟ್ಟು ತುಸುವೂ ಹಾಳಾಗದೆ ನದಿಯಿಂದ ಮೇಲೆ ಬಂದು ಜನರ ಕೈಗೆ ಸಿಕ್ಕಿತು. ಅಂತಹ ಅಮಾನವೀಯ ಕೆಲಸ ಮಾಡಿದ ಜನರನ್ನು ಸಂತ ತುಕಾರಾಮ ಕ್ಷಮಿಸಿದ. ತನ್ನ ಮೈಮೇಲೆ ಕುದಿಯುವ ನೀರನ್ನು ಎರಚಿದ ವ್ಯಕ್ತಿಯ ಮೇಲೆಯೇ ತುಕಾರಾಮ ಒಂದು ವಿಶೇಷ ಹಾಡು ರಚಿಸಿದ. ಅದರಿಂದಾಗಿ ಅವನ ಬೊಕ್ಕೆಗಳೆಲ್ಲ ಮಾಯವಾಗಿ ಗಾಯಗಳು ಗುಣವಾದವು. ಜೀವಂತವಾಗಿಯೇ ತುಕಾರಾಮ ಸ್ವರ್ಗಕ್ಕೆ ಹೋದನೆಂದು ಜನರು ನಂಬುತ್ತಾರೆ.

"ನಮ್ಮ ಜೀವನವನ್ನು ದೇವರಿಗೆ ಮುಡಿಪಾಗಿಡುವ ಅಗತ್ಯವಿದೆ."

"ನಾನು ಬಯಸುವುದೇನೆಂದರೆ ನನ್ನ ತಲೆಯ ಮೇಲೆ ಇಡುವುದನ್ನು ನಿನ್ನ ಪಾದಗಳನ್ನು ಮಾತ್ರ."

"ನಿನ್ನ ಕೈ ನನ್ನ ಶಿರದ ಮೇಲಿರಲಿ; ನನ್ನ ಹೃದಯವು ನಿನ್ನ ಪಾದ ಕಮಲಗಳಲ್ಲಿರಲಿ" ಇವು ಸಂತ ತುಕಾರಾಮನ ಪ್ರಾರ್ಥನೆಯ ಕೆಲವು ಸಾಲುಗಳು.

**ಶ್ರೀ ತುಳಸೀದಾಸ (೧೫೩೨–೧೬೨೩) ರಾಜ್‌ಪುರ್, ಬಾಂದಾಜಿಲ್ಲೆ, ಉತ್ತರ ಪ್ರದೇಶ:**

ಆರಂಭದಲ್ಲಿ ಅವನ ಹೆಸರು ತುಳಸೀರಾಮ್ ಎಂದಿತ್ತು. ಯಾರನ್ನು ಆತ ಅತಿಯಾಗಿ ಪ್ರೀತಿಸುತ್ತಿದ್ದನೋ ಅಂತಹ ಹೆಂಡತಿಯಿಂದ ಸತತವಾಗಿ ನಿಂದೆ, ಅವಹೇಳನ ಮತ್ತು ಬೈಗುಳಗಳಿಗೆ ಗುರಿಯಾಗಿ, ನೊಂದು ಅವನು ಅಧ್ಯಾತ್ಮದತ್ತ ತಿರುಗಿದ. ಹದಿನಾಲ್ಕು ವರ್ಷಗಳ ಕಾಲ ಕೇವಲ ದೇವಸ್ಥಾನಗಳ ಭೇಟಿಯಲ್ಲೇ



ಕಾಲ ಕಳೆದ. ಹನುಮಂತನ ದಯೆಯಿಂದಾಗಿ ಧನುರ್ಧಾರಿಯಾದ ಶ್ರೀರಾಮನ ಕೃಪಾಕಟಾಕ್ಷವಾಯಿತು. ಪುರಾಣಕಾಲದ ವಾಲ್ಮೀಕಿ ಮಹರ್ಷಿಯ ಪುನರವತಾರವೆಂದು ಜನರು ಭಾವಿಸಿದರು. ಹಿಂದಿಯಲ್ಲಿ ಹಲವಾರು ಗ್ರಂಥಗಳನ್ನು ಬರೆದ. ಆತನ ಪ್ರಸಿದ್ಧ ಕೃತಿಯೆಂದರೆ 'ರಾಮಚರಿತ ಮಾನಸ'. ಶ್ರೀ ಹನುಮಂತನ ದಯೆಯಿಂದಾಗಿ ರಾಮಕತೆಯನ್ನು ಮಧುರ ಹಿಂದಿಯಲ್ಲಿ ಬರೆದಿದ್ದೇನೆ ಎಂದಾತ ಹೇಳಿದ್ದಾನೆ. ಅದೊಂದು ದ್ವಿಪದಿಗಳ ಸಮೂಹ. ಮುಘಲ್ ದೊರೆ ಯಾವುದೋ ಕಾರಣಕ್ಕೆ ಅವನನ್ನು ಜೈಲಿಗಟ್ಟಿದ. ಆದರೆ ಪವಾಡ ನಡೆಯಿತು. ದೊರೆಯ ಮುಂದೆಯೇ ಅವನು ಜೈಲಿನಿಂದ ಬಿಡಿಸಿಕೊಂಡು ಬಂದ ಮತ್ತು ಬಡ ಹೆಂಗಸೊಬ್ಬಳ ತೀರಿಕೊಂಡ ಗಂಡನನ್ನು ಬದುಕಿಸಿಕೊಟ್ಟ! ಸಂತೋಷ ಅಥವಾ ದುಃಖವನ್ನು ನಮಗೆ ಬೇರಾರೂ ಕೊಡುವುದಿಲ್ಲ. ನಮ್ಮ ಕರ್ಮಗಳೇ ನಮ್ಮ ಸುಖದುಃಖಗಳನ್ನು ನಿರ್ಧರಿಸುತ್ತವೆ" ಎಂದಾತ ಹೇಳುತ್ತಿದ್ದ.

**ಶ್ರೀ ತುಂಜತ್ ರಾಮಾನುಜ ಎಳುತ್ತಚ್ಚನ್ (೧೪೯೫–೧೫೭೫) ತುಂಜನ್‌ಪರಂಬು, ಕೇರಳ:**

ಸಮಾಜದ ಅತ್ಯಂತ ಕೆಳಸ್ತರದ ಜಾತಿಯೊಂದರಲ್ಲಿ ಹುಟ್ಟಿದ ಬಾಲಕನಿಗೆ ಅಸಾಧಾರಣವಾದ ನೆನಪಿನ ಶಕ್ತಿ ಇತ್ತು. ಒಮ್ಮೆ ಹೇಳಿದರೆ ಅದನ್ನೆಂದೂ ಆತ ಮರೆಯುತ್ತಿರಲಿಲ್ಲ. ಸಂಸ್ಕೃತದಲ್ಲಿ ಪಾಂಡಿತ್ಯ ದೊರೆಯಿತು. ಸ್ಥಳೀಯ ಗುರುವೊಬ್ಬನ ಕೃಪೆಯಿಂದಾಗಿ ಗುರುಕುಲ ಪದ್ಧತಿಯಲ್ಲಿ ಕಲಿಯುವ ಅವಕಾಶ ದೊರೆಯಿತು. ವಿಷ್ಣುಭಕ್ತನಾದ ಅವನ ಹೃದಯದಲ್ಲಿ ಸದಾ ಶ್ರೀರಾಮ ನೆಲಸಿದ್ದ. ಮೂಲ ಸಂಸ್ಕೃತ ವಾಲ್ಮೀಕಿ ರಾಮಾಯಣದಿಂದ ಪ್ರಭಾವಿತನಾಗಿ ಸಂಸ್ಕೃತ ಬೆರೆತ ಮಲಯಾಳಂನ 'ಆಧ್ಯಾತ್ಮಿಕ ರಾಮಾಯಣಂ' ಎಂಬ ಮಹಾಕಾವ್ಯ ರಚಿಸಿದ. ಮಲಯಾಳಂನ ಮೊದಲ ಮಹಾಕಾವ್ಯವೆಂದು ಇದನ್ನು ಪರಿಗಣಿಸಲಾಗಿದೆ. ಕೇರಳದ ಸಂಪ್ರದಾಯಸ್ಥ ಹಿಂದೂಗಳ ಮನೆಯಲ್ಲಿ ಪ್ರತಿನಿತ್ಯವೂ ಈ ಕಾವ್ಯವನ್ನು ವಾಚಿಸುತ್ತಾರೆ. ನಿಷ್ಠಾವಂತ ಜನರು ಅನುಸರಿಸಲು ಕೆಲವು ಸಂಪ್ರದಾಯಗಳನ್ನು ಅವನು ಹಾಕಿಕೊಟ್ಟ. ಮೇಲ್ಪತ್ತೂರು ನಾರಾಯಣ ಭಟ್ಟತ್ತಿರಿ ಎಂಬಾತ ವಾಸಿಯಾಗದ ರೋಗದಿಂದ ಬಳಲುತ್ತಿರಲು, ಭಗವಾನ್ ಶ್ರೀಕೃಷ್ಣನ ಮೇಲೆ ಒಂದು ಭಕ್ತಿಕಾವ್ಯ ರಚಿಸುವಂತೆ (ನಾರಾಯಣೀಯಂ) ಸಲಹೆ ಕೊಟ್ಟವನು ಇವನು. ಆ ಕಾವ್ಯ ಮುಗಿಯುವ ವೇಳೆಗೆ ಭಟ್ಟತ್ತಿರಿಯ ರೋಗವೂ ವಾಸಿಯಾಗಿತ್ತು. "ಎಲ್ಲರೂ ನಿನ್ನನ್ನು ತ್ಯಜಿಸಿದರೂ ಹರಿ ನಿನ್ನ ರಕ್ಷಣೆಗೆ ಇರುವನು. ಅವನು ಜಗತ್ತಿನ ದೊರೆ ಮತ್ತು ನಿನ್ನನ್ನು ಸಂರಕ್ಷಿಸಲು ಯಾವಾಗಲೂ ನಿನ್ನ ಪಕ್ಕದಲ್ಲೇ ನಿಂತಿರುವನು" ಎಂಬುದಾಗಿ ಅವನ ಒಂದು ವಚನ ಸಾರುತ್ತದೆ.

**ಶ್ರೀ ತ್ಯಾಗರಾಜ ಸ್ವಾಮಿ, (೧೫೬೭–೧೬೪೭) ತಿರುವಾರೂರು, ತಮಿಳುನಾರು:**

ಆಂಧ್ರಪ್ರದೇಶದಿಂದ ವಲಸೆ ಬಂದ ಬಡಬ್ರಾಹ್ಮಣ ಕುಟುಂಬವೊಂದರಲ್ಲಿ ಈತ ಜನಿಸಿದ. ಈತ ಹುಟ್ಟುಕವಿ. ಸೊಗಸಾದ ಗೀತೆಗಳನ್ನು ರಚಿಸುತ್ತಿದ್ದ. ಜೊತೆಗೆ ಒಳ್ಳೆಯ ಸಂಗೀತಗಾರನೂ ಆಗಿದ್ದ. ಹಾಗಾಗಿ ವಾಗ್ಗೇಯಕಾರನೆಂದು ಪ್ರಸಿದ್ಧನಾದ. ನಿಷ್ಠಾವಂತ ರಾಮಭಕ್ತ. ತೆಲುಗು ಭಾಷೆಯಲ್ಲಿ ಮತ್ತು ಸಂಸ್ಕೃತದಲ್ಲಿ ಸುಮಾರು ೧೬೦೦ರಷ್ಟು ಕೀರ್ತನೆಗಳನ್ನು ರಚಿಸಿದ. ನಾದೋಪಾಸನೆಯಲ್ಲಿಯೇ ಕಾಲ ಕಳೆಯುತ್ತಿದ್ದ. "ನಮೋ ನಮೋ ರಾಘವಾಯ" ಎಂಬ ತನ್ನ ಮೊದಲನೆಯ ಗೀತೆಯನ್ನು ತನ್ನ ೧೩ನೇ ವರ್ಷ ವಯಸ್ಸಿನಲ್ಲಿ ರಚಿಸಿದ. ತನ್ನ ರಚನೆಗಳಲ್ಲಿ ಒಟ್ಟು ೧೮೮ ರಾಗಗಳನ್ನು ಪ್ರಯೋಗಿಸಿದ್ದಾನೆಂದು ಹೇಳಲಾಗಿದೆ. ತ್ಯಾಗರಾಜರ ಪಂಚರತ್ನ ಕೀರ್ತನೆಗಳನ್ನು ಕೇಳದ ಅಥವಾ ಹಾಡದ ಯಾವ ಸಂಗೀತ ಕಲಾವಿದನೂ ಇಲ್ಲ. ಕರ್ನಾಟಕ ಶಾಸ್ತ್ರೀಯ ಸಂಗೀತ ತ್ರಿಮೂರ್ತಿಗಳಲ್ಲಿ ಇವರನ್ನು ಒಬ್ಬರೆಂದು ಪರಿಗಣಿಸಲಾಗಿದೆ. ಉಳಿದಿಬ್ಬರು ಶ್ಯಾಮಾಶಾಸ್ತ್ರಿ ಮತ್ತು ಮುತ್ತುಸ್ವಾಮಿ ದೀಕ್ಷಿತರ್. ತ್ಯಾಗರಾಜರು ೩೬ ಕೋಟಿ ಸಲ ರಾಮ ಮಂತ್ರ ಜಪಿಸಿದ್ದಾರೆಂದು ಹೇಳಲಾಗಿದ್ದು ಆ ಕಾರಣವಾಗಿಯೇ ಶ್ರೀರಾಮಚಂದ್ರನು ಸೀತಾಸಮೇತನಾಗಿ ದರ್ಶನ ನೀಡಿದನಂತೆ. ಆದ್ದರಿಂದ ಹೆಚ್ಚು ಹೆಚ್ಚು ಭಕ್ತಿಗೀತೆಗಳನ್ನು ರಚಿಸಲು ತ್ಯಾಗರಾಜರಿಗೆ ಸಾಧ್ಯವಾಯಿತಂತೆ. "ಸಂಗೀತ ಮತ್ತು ಭಕ್ತಿಗಿಂತ ಮಿಗಿಲಾದ ಪುಣ್ಯದ ಹಾದಿಯಿಲ್ಲ" ಎಂದು ಹೇಳುತ್ತಿದ್ದ ಅವರು, ಸಂಗೀತದಲ್ಲೇ ತಮ್ಮ ಜೀವನ ಸಫಲಗೊಳಿಸಿದರು. "ಓ! ಮನವೇ, ವಿಶ್ವನಿಯಾಮಕನಾದ ಆ ದೇವರೇ ನಿನ್ನ ಹೃದಯದಲ್ಲಿ ನೆಲೆಸಿರಲು ಹೆಚ್ಚಿನದೇನನ್ನು ನೀನು ಬಯಸುತ್ತಿದ್ದೀಯಾ? ಯಾಕೆ ನೀನು ಸಂತೋಷವಾಗಿಲ್ಲ?" ಎಂದು ಒಂದು ಹಾಡಿನ ಮೂಲಕ ತ್ಯಾಗರಾಜರು ಕೇಳುತ್ತಾರೆ.

**ಶ್ರೀ ತಿರುಮೂಲರ್ (ಕ್ರಿ.ಶ. ೯೦೦), ತಮಿಳುನಾಡು:**

ಈತ ಯೋಗ ಸಾಧನೆಯ ಹಾದಿಯಲ್ಲಿ ಹಲವಾರು ವರ್ಷಗಳನ್ನು ಕಳೆದ. ಅಲ್ಲಿನ ರಾಜ ಅವನನ್ನು ಓರ್ವ ಸಂತನನ್ನಾಗಿ ಪರಿವರ್ತಿಸಿದ. ಸಿದ್ಧ ಔಷಧಿ ಪ್ರಕಾರಕ್ಕೆ ಅವನು ಬಹುದೊಡ್ಡ ಕೊಡುಗೆ ಕೊಟ್ಟಿದ್ದಾನೆ. ಅವನ 'ತಿರುಮಂತಿರಂ' (ಪವಿತ್ರ ಶ್ಲೋಕಗಳು) ಕೃತಿ ಹಲವು ಶತಮಾನಗಳ ಹಿಂದಿನದು ಎಂದು ಭಾವಿಸಲಾಗಿದೆ. ಸುಮಾರು ಮೂರು ಸಾವಿರ ವಚನಗಳುಳ್ಳ ಇದು ವಸ್ತುವಿನ ಅತಿ ಸಣ್ಣ ಕಣದ ಅಧ್ಯಯನ ಮಾಡುವುದಲ್ಲದೆ, ಚಿಂತನೆಯ ಪರಿಶುದ್ಧತೆ ಮತ್ತು ಪಾವಿತ್ರ್ಯವನ್ನು ಒತ್ತಿ ಹೇಳುತ್ತದೆ. "ಮನುಕುಲದಲ್ಲಿ ಒಂದೇ ಜಾತಿ ಇದೆ; ಅದು ದೇವರ ಜಾತಿ" ಎಂದು ತಿರುಮೂಲರ್ ಹೇಳಿದನು.



"ಒಂದೇ ವಸ್ತು ಬಹುಮುಖಗಳಲ್ಲಿ ತೋರಿಬರುತ್ತದೆ. ಎಲ್ಲವೂ ಒಂದೇ ಮತ್ತು ಒಂದೇ ಎಲ್ಲವೂ."

"ಕಳ್ಳ ತನ್ನನ್ನು ತಾನೇ ಹಗ್ಗದಲ್ಲಿ ಕಟ್ಟಿಕೊಂಡರೆ ಹೇಗೆ ತನ್ನ ಅಪರಾಧದಿಂದ ಮುಕ್ತನಾಗುವುದಿಲ್ಲವೋ ಹಾಗೆಯೇ ಮನುಷ್ಯ ಪ್ರಯತ್ನ ಮಾತ್ರದಿಂದಲೇ ತನ್ನ ಪಾಪಗಳಿಂದ ಬಿಡುಗಡೆ ಹೊಂದುವುದಿಲ್ಲ" ಇವು ಆತನ ತತ್ವದ ಸಾರ.

**ಶ್ರೀ ತಾಯುಮಾನವರ್ (೧೭೦೬–೧೭೪೨) ತಿರುಚನಾಪಳ್ಳಿ, ತಮಿಳುನಾಡು:**

ವೇದಾರಣ್ಯಂನ ವೆಲ್ಲಾಳ್ಳಾಲ ಕೆಡಿಲಿಯಪ್ಪ ಮತ್ತು ಗಜವಲ್ಲಿ ದಂಪತಿಗಳು ತಮ್ಮ ಮಗನಿಗೆ ತಾಯುಮಾನವರ್ ಎಂದು ಹೆಸರಿಟ್ಟರು. ದಂಪತಿಗಳಿಗೆ ಬಹುಕಾಲ ಮಕ್ಕಳಾಗದೆ ಶಿವನನ್ನು (ತಾಯುಮಾನವರ್) ಕುರಿತು ತಪಸ್ಸು ಮಾಡಿ ಹುಟ್ಟಿದ ಮಗುವಾದ ಕಾರಣ ಶಿವನ ಹೆಸರನ್ನೇ ಇಟ್ಟರು. ಸಣ್ಣ ಹುಡುಗನಾಗಿದ್ದಾಗಲೇ ಪ್ರಾಪಂಚಿಕ ವ್ಯವಹಾರಗಳಿಂದ ವಿಮುಖನಾಗಿ ಬದುಕಿನ ನಿಗೂಢಗಳನ್ನು ಅರಿಯಲು ಶಿವನ ಕುರಿತು ತಪಸ್ಸು ಮಾಡಲು ತೊಡಗಿದ. ಸಂತ ಕವಿಯಾದ ಕಾರಣ ಹಾಡುಗಳು, ಗೀತೆಗಳು ಪುಂಖಾನುಪುಂಖವಾಗಿ ಅವನಿಂದ ಹೊರಹೊಮ್ಮುತ್ತಿದ್ದವು. ಹೀಗೆ ಬಂದ ಹಾಡುಗಳು ೧೪೦೦ಕ್ಕಿಂತ ಹೆಚ್ಚಾಗಿವೆ. ಅವನ್ನೆಲ್ಲ ತಾಳೆಗರಿಗಳಲ್ಲಿ ಬರೆದಿಡಲಾಗಿದೆ. ಅವನಿಗೆ ಅಸಂಖ್ಯ ಶಿಷ್ಯರಿದ್ದರು. ರಾಮನಾಡ್‌ನ ರಾಜ ಕೂಡ ಇವನ ಅಭಿಮಾನಿಯಾಗಿದ್ದ. ಯಾವಾಗಲೂ ಮೌನಿಯಾಗಿರುತ್ತಿದ್ದುದರಿಂದ ಅವನಿಗೆ ಮೌನಮುನಿ ಎಂಬ ಹೆಸರೂ ಇತ್ತು. ಹೃದಯದ ತೀವ್ರ ತರಂಗಗತಿಯಲ್ಲಿ ಬಂದ ಹಾಡುಗಳು, ದೈವೀ ಪ್ರಭೆ ಮತ್ತು ಆಂತರಿಕ ಸ್ಫೂರ್ತಿಯಿಂದ ಚಿಮ್ಮಿ ಬಂದ ಸಾರ್ಥಕ ಮಾತುಗಳಾಗಿದ್ದವು. ಸರಳ, ನೇರ, ತೀವ್ರ ಮತ್ತು ಮಧುರವಾದ ಹಾಡುಗಳ ಮೂಲಕ ಶಿವ ಸಿದ್ಧಾಂತವನ್ನು ಪ್ರಚುರಪಡಿಸಿದ. ಒಮ್ಮೆ ರಾಮನಾಡ್‌ನಲ್ಲಿ ತೀವ್ರ ಬರಗಾಲ ಬಂದು ಆಹಾರಧಾನ್ಯದ ಕೊರತೆ ತಲೆದೋರಿದಾಗ ತಾಯುಮಾನವರ್ ಮಳೆಗಾಗಿ ಪ್ರಾರ್ಥಿಸಿದ. ಧಾರಾಕಾರ ಮಳೆ ಬಂದು ಕೆರೆಕಟ್ಟೆಗಳೆಲ್ಲ ತುಂಬಿಹೋದವು. ಸ್ಥಳೀಯ ರಾಜ ಚೊಕ್ಕನಾಥನ ಬಳಿಯೂ ಅವನು ಕೆಲಕಾಲ ಕೆಲಸ ಮಾಡಿದ. ರಾಜನ ಬಳಿಯಿಂದ ತೆರಳುವಾಗ ರಾಜ ಬೆಲೆ ಬಾಳುವ ಶಾಲು ಒಂದನ್ನು ಅವನಿಗೆ ಉಡುಗೊರೆಯಾಗಿ ನೀಡಿದ. ಆದರೆ ತಾಯುಮಾನವರ್ ಅದಕ್ಕೆ ಯಾವ ಬೆಲೆಯನ್ನೂ ಕೊಡಲಿಲ್ಲ. ಹಾದಿಯಲ್ಲಿ ಹೋಗುತ್ತಿರುವಾಗ ಕೆಳಜಾತಿಯ ಮಹಿಳೆಯೊಬ್ಬಳು ಚಳಿಯಲ್ಲಿ ನಡುಗುತ್ತಿರುವುದನ್ನು ನೋಡಿ, ಆ ಶಾಲನ್ನು ಅವಳಿಗೆ ಕೊಟ್ಟ. ಆಕೆ 'ಒಲ್ಲೆ' ಎಂದಾಗ ಬಲವಂತದಿಂದ ಅವಳು ತೆಗೆದುಕೊಳ್ಳುವಂತೆ ಮಾಡಿದ. "ತಾಯೀ, ನನಗಿಂತ ನಿನಗೇ ಇದರ ಆವಶ್ಯಕತೆ ಹೆಚ್ಚಾಗಿದೆ" ಎಂದ. ವಿಷಯ ತಿಳಿದ ರಾಜನಿಗೆ ತುಂಬ ಕೋಪ ಬಂತು. ಕೂಡಲೇ ಆತನನ್ನು ಹೆಡೆಮುರಿ

ಕಟ್ಟಿ ತನ್ನಿರಿ ಎಂದು ಸೈನಿಕರಿಗೆ ಆಜ್ಞಾಪಿಸಿದ. ಸಂತ ತಾಯುಮಾನವರ್ ಅದರಿಂದ ಕೊಂಚವೂ ವಿಚಲಿತನಾಗಲಿಲ್ಲ. ಶಾಲು ಕೊಟ್ಟು ಸನ್ಮಾನಿಸಿದಾಗ ಯಾವ ಭಾವನೆಯಿಂದಿದ್ದನೋ ಶಿಕ್ಷೆ ಕೊಟ್ಟಾಗಲೂ ಅದೇ ಭಾವನೆಯನ್ನು ಹೊಂದಿದ್ದ. ಅತ್ಯಂತ ಬೆಲೆ ಬಾಳುವ ಶಾಲನ್ನು ಕೀಳುಕುಲದ ಆ ಬಡ ಹೆಂಗಸಿಗೆ ಯಾಕೆ ದಾನ ಮಾಡಿದೆ ಎಂದು ಕೇಳಿದಾಗ ತಾಯುಮಾನವರ್, "ಅಯ್ಯಾ, ರಾಜನೇ, ಆಕೆ ಸಾಕ್ಷಾತ್ ಅಖಿಲಾಂಡೇಶ್ವರಿಯೇ ಆಗಿದ್ದಾಳೆ. ಶಾಲು ಕೊಟ್ಟಿದ್ದಕ್ಕಾಗಿ ನಿನ್ನನ್ನು ಹರಸಿದ್ದಾಳೆ" ಎಂದ. ಈ ಸಂತ ಎಲ್ಲದರಲ್ಲೂ ದೇವರನ್ನು ಕಾಣುತ್ತಾನೆ ಮತ್ತು ದೇವರಿಗಾಗಿ ಎಲ್ಲವನ್ನೂ ಮಾಡುತ್ತಾನೆ; ಈತನ ದೃಷ್ಟಿಯಲ್ಲಿ ಕೆಳಜಾತಿಯ ಒಬ್ಬ ಹೆಂಗಸು ಕೂಡಾ ದೇವತೆಯೇ ಆಗಿದ್ದಾಳೆ" ಎಂದು ಭಾವಿಸಿದ ರಾಜ ಸುಮ್ಮನಾದ. ತಾಯುಮಾನವರ್ ೧೭೪೨ರಲ್ಲಿ ತನ್ನ ಸಮಾಧಿ ಸ್ಥಳಕ್ಕೆ ಹೋಗಿ ಬಾಗಿಲು ಹಾಕಿಕೊಂಡು ಅಲ್ಲೇ ಮೋಕ್ಷ ಹೊಂದಿದ.

"ಮೊದಲ ಅಕ್ಷರವಾದ 'ಅ' ಇಲ್ಲದ ಭಾಷೆ ಇಲ್ಲ. ದೇವರ ದಯೆ ಇಲ್ಲದ ಜಗತ್ತು ಕೂಡ ಇಲ್ಲ. ಅವನು ಅತ್ಯಂತ ವಿಶೇಷನಾದವನು. ಅವನನ್ನು ಯಾವುದರ ಜೊತೆಗೂ ಹೋಲಿಸಲಾಗದು. ಅವನಿಗೆ ಜರಾಮರಣಗಳಿಲ್ಲ. ಪರಿಶುದ್ಧ ಆತ್ಮಗಳ ಮೂಲಕ ಅವನ ದಯೆ ಇಳಿದುಬರುತ್ತದೆ. ಅಂತಹ ಆತ್ಮಗಳೇ ಬೆಳಕಿನ ಬೀಜಗಳು ಮತ್ತು ದೇವರೆಡೆಗೆ ನಮ್ಮನ್ನು ಕೊಂಡೊಯ್ಯುವಂತಹವು."

"ಅವನ ವ್ಯಕ್ತಿತ್ವವೇ ದಯಾಮಯವಾದುದು. ಅವನು ಕರುಣಾಳು. ಕ್ಷಮಾಮಯಿ. ಅವನು ಜೀವಿಗಳ ಜೀವ. ಮೆದುಳಿನಲ್ಲಿರುವ ಆಲೋಚನಾ ಶಕ್ತಿಯೇ ಅವನು. ಹೃದಯದಲ್ಲಿರುವ ಸಂವೇದನೆ. ಕಿವಿಯಿಂದ ಕೇಳುವವನು ಅವನೇ, ಶ್ವಾಸಕೋಸದ ಮೂಲಕ ಉಸಿರಾಡುವವನು ಅವನೇ, ನಾಲಿಗೆಯಿಂದ ಮಾತಾಡುವವನು ಅವನೇ, ಎಲ್ಲವೂ ಅವನೇ. ಅವನು ತನ್ನ ದಯೆಯಿಂದ ಈ ಎಲ್ಲವನ್ನೂ ಮಾಡುತ್ತಿರುತ್ತಾನೆ. ಅಂಟಿಯೂ ಅಂಟದಂತಿರುತ್ತಾನೆ. ವಿಶ್ವದ ಆಚೆಗೂ ಯಾವ ದ್ವಂದ್ವವಿಲ್ಲದಂತೆ ಇರುತ್ತಾನೆ. ಅವನು ಹೇಗೆ ಇರಬೇಕೋ ಹಾಗೇ ಇರುತ್ತಾನೆ. ಸಂಪೂರ್ಣವಾದ ದೈವಿಕ ಸತ್ಯವಾದ ನಟರಾಜನನ್ನು ಧ್ಯಾನಿಸು. ಪ್ರತಿದಿನ ಅವನನ್ನು ಪೂಜಿಸು. ಅವನು ನಿನಗೆ ದಾರಿ ತೋರಿಸುತ್ತಾನೆ! ಶಿವೋಹಂ!"

**ಶ್ರೀ ಉತ್ಪಲದೇವ (ಕ್ರಿ.ಶ. ೯೦೦) ನೌಹಟ್ಟಾ, ಕಾಶ್ಮೀರ:**

ಕಾಶ್ಮೀರದ ಶ್ರೀನಗರಬಳಿಯ ನೌಹಟ್ಟಾ ಅಥವಾ ನಾರಾಯುತ್ ಎಂಬಲ್ಲಿ ಬ್ರಾಹ್ಮಣ ವಂಶದಲ್ಲಿ ಹುಟ್ಟಿದ ಉತ್ಪಲದೇವ ಕೆಲಕಾಲ ವೈವಾಹಿಕ ಜೀವನ ನಡೆಸಿದ. ಶಿವನನ್ನು ಕುರಿತು ಅತೀವ ಭಕ್ತಿಯಿಂದ ತಪಸ್ಸು ಮಾಡುತ್ತಿದ್ದ. ಈತ ಹಲವಾರು ಭಕ್ತಿಗೀತೆಗಳನ್ನು ಕಾಶ್ಮೀರಿ ಭಾಷೆಯಲ್ಲಿ ರಚಿಸಿದ. ಸಾಹಿತ್ಯಿಕ ಮೌಲ್ಯ, ಆಧ್ಯಾತ್ಮಿಕ ಅರ್ಥ ಮತ್ತು ಸಂಗೀತದ ಮಾಧುರ್ಯವನ್ನು ಒಳಗೊಂಡ ಅವು ತುಂಬ ಪ್ರಸಿದ್ಧವಾಗಿವೆ. 'ಪ್ರತ್ಯಭಿನ್ಯ' ಎಂಬ ತಾತ್ವಿಕ ಹಾದಿಯ ಅನುಯಾಯಿಯಾದ ಉತ್ಪಲದೇವ ಅದಕ್ಕೆ 'ಕಾರಿಕಾಸೂತ್ರ' ಎಂಬ ಭಾಷ್ಯ ಬರೆದಿದ್ದಾನೆ. 'ಈಶ್ವರ ಸಿದ್ಧಿ' ಎಂಬುದು ಅವನ ಬಹುಪ್ರಸಿದ್ಧವಾದ ಇನ್ನೊಂದು ಕೃತಿ. ಶಿವನ ನಾಮಾವಳಿಯನ್ನು ಭಜಿಸುವ ಬಹು ಸುಂದರವಾದ 'ಶಿವಸ್ತೋತ್ರ ನಾಮಾವಳಿ' ಎಂಬ ಇನ್ನೊಂದು ಕೃತಿಯನ್ನೂ ಅವನು ರಚಿಸಿದ್ದಾನೆ.



**ಶ್ರೀ ವಳ್ಳುವರ್ ಅಥವಾ ತಿರುವಳ್ಳುವರ್ (ಕ್ರಿ.ಪೂ. ೩೦೦) ತಿರುವಳ್ಳೂರ್, ಚೆನ್ನೈ, ತಮಿಳುನಾಡು:**

ಚೆನ್ನೈ ಬಳಿಯ ತಿರುವಳ್ಳೂರ್‌ನಲ್ಲಿ ಸುಮಾರು ಎರಡು ಸಾವಿರದ ಮುನ್ನೂರು ವರ್ಷಗಳ ಹಿಂದೆ ನೇಕಾರ ಕುಲದಲ್ಲಿ ಹುಟ್ಟಿದ ಈತನ ಆರಂಭಿಕ ಜೀವನದ ಬಗ್ಗೆ ಖಚಿತವಾದ ಮಾಹಿತಿ ಇಲ್ಲ. ತ್ರಿಮೂರ್ತಿಗಳಲ್ಲಿ ಒಬ್ಬನಾದ ಬ್ರಹ್ಮನ ಅವತಾರವೆಂದು ಸ್ಥಳೀಯವಾಗಿ ಭಾವಿಸಲಾಗಿದೆ. ಭಾರತ ಸಮುದ್ರ ಮತ್ತು ಬಂಗಾಳ ಕೊಲ್ಲಿ ಸಂಗಮಗೊಳ್ಳುವ ಸಮುದ್ರ ತೀರದಲ್ಲಿ ತಮಿಳುನಾಡು ಸರಕಾರ ಈ ಮಹಾಸಂತನ ಸ್ಮರಣಾರ್ಥ ೧೩೩ ಅಡಿ ಎತ್ತರದ ಶಿಲಾವಿಗ್ರಹವೊಂದನ್ನು ಸ್ಥಾಪಿಸಿದೆ.

ಮನುಕುಲದ ಆಧ್ಯಾತ್ಮ ಮತ್ತು ನೈತಿಕ ನಡವಳಿಕೆಗೆ ಮಾರ್ಗದರ್ಶಿ ಸೂತ್ರದಂತಿರುವ 'ತಿರುಕ್ಕುರಳ್' (ಪವಿತ್ರ ವಚನಗಳು) ಎಂಬ ಸಾರ್ವಕಾಲಿಕ ಕೃತಿಯೊಂದನ್ನು ತಿರುವಳುವರ್ ಬರೆದಿದ್ದಾನೆ. ಯಾವ ದೇವರನ್ನೂ ಅದರಲ್ಲಿ ಹೆಸರಿಸಲಾಗಿಲ್ಲ. ಹಿಂದೂ ಧರ್ಮದ ಪ್ರಕಾರ ಮಾನವ ಅನುಸರಿಸಬೇಕಾದ ಮೌಲಿಕವಾದ, ನೈತಿಕವಾದ, ಆಧ್ಯಾತ್ಮಿಕವಾದ ಜೀವನ ಹಾದಿಯನ್ನು ಅದರಲ್ಲಿ ಹೇಳಲಾಗಿದೆ.

೧೩೩೦ ದ್ವಿಪದಿಗಳಲ್ಲಿ ಸಾಮಾಜಿಕ ಜೀವನದ ಎಲ್ಲ ಆಯಾಮಗಳನ್ನು ಅಂದರೆ ಪುರುಷಾರ್ಥಗಳಲ್ಲಿ ಮೊದಲ ಮೂರನ್ನು (ಧರ್ಮ, ಅರ್ಥ, ಕಾಮ) ತರಲಾಗಿದೆ. (ಧರ್ಮ=ತಪ್ಪು, ಸರಿ ಹಾಗೂ ಕರ್ತವ್ಯಗಳು; ಅರ್ಥ=ಸಂಪತ್ತು; ಕಾಮ=ಅಪೇಕ್ಷೆಗಳು, ಆಸೆಗಳು, ಆಕಾಂಕ್ಷೆಗಳು). ಇದರಲ್ಲಿ ಅವನು ಅರಂನಂತಿರುವ ಮೋಕ್ಷ, ಪೊರುಳ್ ಮತ್ತು ಇನ್ಬಂಗಳನ್ನು ಬಿಟ್ಟಿದ್ದಾನೆ.

'ತಿರುಕ್ಕುರಳ್' ಹೀಗೆ ಆರಂಭವಾಗುತ್ತದೆ–

* ಅಕ್ಷರಗಳ ಮಾಲೆ 'ಅ'ದಿಂದ ಆರಂಭವಾಗುತ್ತದೆ; ಅದರಂತೆ ಪುರಾತನ ಜಗತ್ತು ಆ ಪ್ರಭುವಿನಿಂದ ಆರಂಭಗೊಂಡಿದೆ.
* ಆ ಜ್ಞಾನಿಯ ದಿವ್ಯಾನುಗ್ರಹದಿಂದ ಈ ಜಗತ್ತಿನ ನಿರ್ಮಾಣವಾಗಿದೆ. ಅವನಿಲ್ಲದಿದ್ದರೆ ಇಡೀ ಪ್ರಪಂಚವು ನಾಶದ ಗುಡ್ಡೆಯಾಗುತ್ತದೆ.

"ಹುಟ್ಟು ಸಾವಿನ ಈ ಸಂಕಟದ ಹಾದಿಯಿಂದ ಪಾರಾಗಬೇಕಾದರೆ, ಆ ದಿವ್ಯಜ್ಞಾನವನ್ನು ಅಥವಾ ಶಾಶ್ವತವಾದ ಆ ದೈವೀ ಬೋಧೆಯನ್ನು ತಿಳಿಯುವುದೊಂದೇ ಮಾರ್ಗ."

**ಶ್ರೀ ವಲ್ಲಭಾಚಾರ್ಯ (೧೪೭೯–೧೫೩೧) ರಾಯ್‌ಪುರ, ಮಧ್ಯಪ್ರದೇಶ:**

ಮಧ್ಯಪ್ರದೇಶದ ರಾಯ್‌ಪುರ ಜಿಲ್ಲೆಯ ಚಂಪಾರಣ್ಯದಲ್ಲಿ ತೆಲುಗು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಈತ ಶ್ರೀಕೃಷ್ಣನ ಪರಮಭಕ್ತ ಶ್ರೀಕೃಷ್ಣನೇ ಪರಬ್ರಹ್ಮ ಎಂದು ಭಾವಿಸಿದ್ದ. ಬಾಲಕೃಷ್ಣನನ್ನು ವಾತ್ಸಲ್ಯಭಾವದಿಂದ ಪೂಜಿಸುತ್ತಿದ್ದ. ಈತ ವಲ್ಲಭ ಸಂಪ್ರದಾಯದಲ್ಲಿ ವೈಷ್ಣವ ಪಂಥವೊಂದನ್ನು ಹುಟ್ಟುಹಾಕಿ ರಾಜಸ್ಥಾನ ಮತ್ತು ಗುಜರಾತಿನಲ್ಲಿ ಅದನ್ನು ಹಬ್ಬಿಸಿದ. ಅತ್ಯಂತ ಮೇಧಾವಿ ಮತ್ತು ವಿದ್ವಾಂಸನಾಗಿದ್ದ ವಲ್ಲಭಾಚಾರ್ಯ ಸಂಸ್ಕೃತದಲ್ಲಿ ಹಲವಾರು ಗ್ರಂಥಗಳನ್ನು ರಚಿಸಿದ್ದಾನೆ. ವ್ಯಾಸ ಸೂತ್ರ ಭಾಷ್ಯ, ಜೈಮಿನಿ ಸೂತ್ರ ಭಾಷ್ಯ ಎಂಬೆರಡು ಭಾಷ್ಯಗಳನ್ನಲ್ಲದೆ ವ್ರಜಭಾಷೆಯಲ್ಲಿ ಭಾಗವತ ತತ್ವ ಸಂಬೋಧಿನಿ, ಸಿದ್ಧಾಂತ ರಹಸ್ಯ ಮೊದಲಾದ ಕೃತಿಗಳನ್ನು ಬರೆದಿದ್ದಾನೆ. ಈತ ಶುದ್ಧ ಅದ್ವೈತ ತತ್ವವನ್ನು ಪ್ರತಿಪಾದಿಸಿದ.

ತನ್ನ 'ಪುಷ್ಟಿಪ್ರವಾಳಮರ್ಯಾದಾ' ಎಂಬ ಕೃತಿಯಲ್ಲಿ ಪುಷ್ಟಿಮಾರ್ಗ ಅಥವಾ ದಯಾಮಾರ್ಗವನ್ನು ಒತ್ತಿ ಹೇಳಿದ್ದಾನೆ. ಮೋಕ್ಷ ಸಂಪಾದನೆಗೆ ಈ ಹಾದಿ ಅತ್ಯುತ್ತಮ ಎಂಬುದು ಆತನ ವಾದ. ಜಾತಿ, ಲಿಂಗ ಯಾವ ಭೇದವೂ ಇಲ್ಲದೆ ಭಕ್ತಿಮಾರ್ಗದ ಮೂಲಕ ಮೋಕ್ಷ ಸಂಪಾದನೆ ಬಹುಸುಲಭ. ಜ್ಞಾನ ಮಾರ್ಗ ಮತ್ತು ಭಕ್ತಿಮಾರ್ಗದ ಮೂಲಕ ಮೋಕ್ಷ ಸಾಧ್ಯ. ಆದರೆ ದೇವರ ಕುರಿತಾದ ಅಖಂಡ ನಿಷ್ಠೆ ಮತ್ತು ಪ್ರಾಮಾಣಿಕತೆ ಬೇಕಾಗುತ್ತವೆಂದು ಹೇಳುತ್ತಿದ್ದ. ತನ್ನ ಕೊನೆಯ ಉಪನ್ಯಾಸವನ್ನು ಕಾಶಿಯಲ್ಲಿ ಕೊಟ್ಟ. ಆಗ ಜೊತೆಗೆ ತನ್ನ ಇಬ್ಬರು ಮಕ್ಕಳೂ ಇದ್ದರು. ಅನಂತರ ಮೌನವ್ರತ ಪಾಲಿಸಿದ. ಮೂರೂವರೆ ವಚನಗಳಲ್ಲಿ ತನ್ನ ಸಂದೇಶವನ್ನು ಹೀಗೆ ಬರೆದುಕೊಟ್ಟ; ಅದು 'ಶಿಕ್ಷಾ ಸಶರಾರ್ಧ ಶ್ಲೋಕೀ" ಎಂದೇ ಪ್ರಸಿದ್ಧವಾಗಿದೆ. ದೇವರನ್ನು ಕಾಣಲು ತೊಡಕಾಗಿರುವ ನಾಲ್ಕು ಅಂಶಗಳ ಕುರಿತು ಅದರಲ್ಲಿ ಹೇಳಿದ್ದಾನೆ:

೧. ಕೃಷ್ಣನ ಹೊರತಾದ ಬೇರೆ ದೇವರುಗಳ ಆರಾಧನೆ.
೨. ದೇವರಿಗೆ ತಮ್ಮನ್ನು ಅರ್ಪಿಸಿಕೊಳ್ಳದೆ ವೃಥಾ ಪ್ರಾಪಂಚಿಕ ಜೀವನದಲ್ಲಿ ತಲ್ಲೀನನಾಗಿರುವುದು.
೩. ಕೆಟ್ಟದಾಗಿ ಮಾತಾಡುವುದು.
೪. ದೈವದ ಉಪಸ್ಥಿತಿ ಇಲ್ಲದೇ ಇರುವ ಬದುಕು.



ಈ ಸಂದೇಶ ನೀಡಿದ ಬಳಿಕ ಆತ ನೇರವಾಗಿ ಗಂಗಾನದಿ ಪ್ರವೇಶ ಮಾಡಿದ. ಸ್ವಲ್ಪ ಹೊತ್ತಿನ ಬಳಿಕ ಜಾಜ್ವಲ್ಯಮಾನವಾದ ಜ್ಯೋತಿಯೊಂದು ಆ ಪ್ರದೇಶದಿಂದ ಹೊರಟು ಆಕಾಶವನ್ನು ಸೇರಿಕೊಂಡಿತು.

**ಶ್ರೀ ಬಿಲ್ವಮಂಗಲಂ ನಂಬೂದಿರಿ–II (೧೫೭೫–೧೬೬೦), ತ್ರಿಶ್ಶೂರು, ಕೇರಳ:**

ತ್ರಿಶ್ಶೂರಿನಲ್ಲಿ ನಂಬೂದಿರಿ ಎಂಬ ಬ್ರಾಹ್ಮಣ ಪಂಗಡದಲ್ಲಿ ಜನಿಸಿದ ಈತ ಪ್ರಕಾಂಡ ಪಂಡಿತನೂ ಸಹಜ ಕವಿಯೂ ಆಗಿದ್ದ. ಸಣ್ಣ ವಯಸ್ಸಿನಲ್ಲೇ ಸನ್ಯಾಸಾಶ್ರಮ ಸ್ವೀಕರಿಸಿದ ಬಿಲ್ವಮಂಗಲಂಗೆ ಆರೇಳು ವಿಷ್ಣು ದೇವಸ್ಥಾನಗಳ ಪಾರುಪತ್ಯವಿತ್ತು. ಗುರುವಾಯೂರಪ್ಪನ (ಶ್ರೀಕೃಷ್ಣ) ಪರಮಭಕ್ತನಾದ ಈತನಿಗೆ ದೇವರ ಜೊತೆಗೆ ನೇರ ಸಂವಾದ ಶಕ್ಯವಿತ್ತು. ಯಾವಾಗ ಬೇಕೆಂದಾಗ ಯಾವುದೇ ರೂಪದಲ್ಲಿ ಮಹಾವಿಷ್ಣುವನ್ನು ಅವನು ನೋಡಬಲ್ಲವನಾಗಿದ್ದ. ಕೆಲವೊಮ್ಮೆ ಬಾಲಕೃಷ್ಣನ ರೂಪದಲ್ಲಿ, ಇನ್ನೂ ಕೆಲವೊಮ್ಮೆ ಅನಂತನ ಮೇಲೆ ಮಲಗಿರುವ ಶೇಷಶಯನನಾಗಿ! ದೇವಸ್ಥಾನದ ಪ್ರಾಂಗಣದಲ್ಲಿ ಇತರ ಬಾಲಕರೊಂದಿಗೆ ಆಡುತ್ತಾ ಇರುವ ಶ್ರೀಕೃಷ್ಣನನ್ನು ಅವನು ಎಷ್ಟೋ ಸಲ ನೋಡಿದನಂತೆ. ಸ್ಥಳೀಯ ರಾಜನೊಬ್ಬನಿಗೆ ಶ್ರೀಕೃಷ್ಣನನ್ನು ನೋಡಬೇಕೆಂಬ ಆಸೆ ಹೆಚ್ಚಾದಾಗ ಬಿಲ್ವಮಂಗಲಂ ಆತನನ್ನು ದೇವಸ್ಥಾನದ ಪ್ರಾಂಗಣದೊಳಗೆ ಕರೆದೊಯ್ದು ಬೇರೆ ಮಕ್ಕಳೊಂದಿಗೆ ಆಡುತ್ತಿದ್ದ ಬಾಲಕೃಷ್ಣನನ್ನು ತೋರಿಸಿದನಂತೆ. ದೇವಸ್ಥಾನದಿಂದ ವಾಪಸು ಬರುವಾಗ ಅದೇ ಶ್ರೀಕೃಷ್ಣ ಕುಷ್ಠರೋಗಿಯೊಬ್ಬನ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡು ಆರೈಕೆ ಮಾಡುವುದನ್ನು ನೋಡಿದನಂತೆ. ಇನ್ನೊಂದು ದಿನ ಬಿಲ್ವಮಂಗಲಂ ಜೊತೆಗೆ ಆ ರಾಜ ದಾರಿಯಲ್ಲಿ ನಡೆಯುತ್ತಿದ್ದಾಗ ಶ್ರೀ ಕೃಷ್ಣನ ಮಧುರವಾದ ಮುರಳೀನಾದ ಕಿವಿಗೆ ಬಿದ್ದಿತು. ಅದು ಸ್ವತಃ ಶ್ರೀಕೃಷ್ಣ ದೇವರ ವೇಣುವಾದನ ಎಂದು ಬಿಲ್ವಮಂಗಲಂ ಹೇಳಿದಾಗ ಆ ಜಾಗದಲ್ಲಿ ದೇವಸ್ಥಾನ ಕಟ್ಟಿಸುವ ಆಲೋಚನೆ ರಾಜನಿಗೆ ಬಂದಿತಂತೆ. ಅದರಂತೆ ಅಲ್ಲಿ ಕಟ್ಟಿಸಿದ ದೇವಸ್ಥಾನ ಮುಂದೆ ಅಂಬಲಪುಳ ಶ್ರೀಕೃಷ್ಣ ದೇವಸ್ಥಾನವಾಗಿ ಪ್ರಸಿದ್ಧಿಗೆ ಬಂದಿತು. ಬಿಲ್ವಮಂಗಲಂ ಒಮ್ಮೆ ಅನಂತಪುರದ (ತಿರುವನಂತಪುರ) ಕಾಡಿನಲ್ಲಿ ಮಹಾವಿಷ್ಣುವನ್ನು ಅರಸುತ್ತಾ ತಿರುಗಾಡುತ್ತಿದ್ದಾಗ ಮಹಾವಿಷ್ಣು ತನ್ನ ನಿಜ ಅವತಾರದಲ್ಲಿ ದರ್ಶನ ಕೊಟ್ಟನಂತೆ. ದೇವರಿಗೆ ಏನಾದರೂ ನೈವೇದ್ಯ ಅರ್ಪಿಸಬೇಕೆಂಬ ಭರದಲ್ಲಿ ಕಾಡಿನಲ್ಲಿ ಏನೂ ದೊರೆಯದೆ ಸ್ಥಳದಲ್ಲಿ ಸಿಕ್ಕಿದ ಒಂದು ಮಾವಿನಹಣ್ಣನ್ನೇ ತೆಂಗಿನ ಗೆರಟೆಯಲ್ಲಿ ಹಾಕಿ ವಿನೀತನಾಗಿ ದೇವರಿಗೆ ಅರ್ಪಿಸಿದನಂತೆ. ಮಹಾವಿಷ್ಣು ಅದನ್ನು ಆನಂದದಿಂದ ಸ್ವೀಕರಿಸಿ ಬಿಲ್ವಮಂಗಲಂಗೆ ಆಶೀರ್ವಾದ ಮಾಡಿದ.

**ಶ್ರೀ ಯಾಮುನಾಚಾರ್ಯ ಅಥವಾ ಆಳವಂದಾರ್ (ಕ್ರಿ.ಶ. ೧೧೫೦) ಪಾಂಡ್ಯದೊರೆ ಆಳುತ್ತಿದ್ದ ಕಾಲದ ಮದುರೈ, ತಮಿಳುನಾಡು:**

ನಾಥಮುನಿ ಸ್ವಾಮಿಯ ಮೊಮ್ಮಗನಾಗಿ ಮತ್ತು ಈಶ್ವರ ಮುನಿಯ ಮಗನಾಗಿ ಮದುರೆಯಲ್ಲಿ ಅಥವಾ ಮದುರೆಯ ಸಮೀಪ ಯಾಮುನಾಚಾರ್ಯ ಜನಿಸಿದ. ಚಿಕ್ಕಂದಿನಲ್ಲಿ ವೈಷ್ಣವ ಸಂಪ್ರದಾಯದ ಪ್ರಭಾವಕ್ಕೆ ಒಳಗಾದ. ವಿದ್ಯಾರ್ಥಿಯಾಗಿದ್ದಾಗಲೇ ವೇದ ಹಾಗೂ ಇತರ ಪುರಾಣಗಳನ್ನು ಕರಗತ ಮಾಡಿಕೊಂಡ. ಇತರ ವಿದ್ಯಾರ್ಥಿಗಳಿಗಿಂತ ಅವನು ತುಂಬಾ ಮುಂದಿರುತ್ತಿದ್ದ. ಹಾಗಾಗಿ ಅಧ್ಯಾಪಕರ ಮೆಚ್ಚಿನ ಶಿಷ್ಯನಾದ. ತನ್ನ ಹನ್ನೆರಡನೆಯ ವರ್ಷಕ್ಕೆ ಅತಿ ಕಠಿಣವಾದ ಸನ್ನಿವೇಶವೊಂದರಲ್ಲಿ ಸಿಕ್ಕಿಕೊಂಡು ಅದರಲ್ಲಿ ಜಯಶಾಲಿಯಾದ ಮೇಲೆ ಅವನ ಪ್ರಸಿದ್ಧಿ ಇಡೀ ದೇಶದಲ್ಲಿ ಹರಡಿಕೊಂಡಿತು. ಒಮ್ಮೆ ಅವನು ಗುರುಗಳ ಪರವಾಗಿ ರಾಜಸಭೆಯಲ್ಲಿ ವಿದ್ವಾನ ಕೋಲಾಹಲನೊಡನೆ ವಾದ ಮಾಡಬೇಕಾಗಿ ಬಂದಿತು. ರಾಜ ಮತ್ತು ರಾಣಿಯ ಉಪಸ್ಥಿತಿಯಲ್ಲಿ ವಿದ್ವತ್ ಸಭೆಯಲ್ಲಿ ಮೂರೇ ಮೂರು ಪ್ರಶ್ನೆಗಳನ್ನು ಹಾಕಿ ಆ ಪಂಡಿತ ಶ್ರೇಷ್ಠನ ಬಾಯಿ ಕಟ್ಟಿಹಾಕಿದ. ಇದರಿಂದ ರಾಣಿಗೆ ತುಂಬ ಸಂತೋಷ ಆಯಿತು.

"ನೀನು ನಿಜವಾಗಿಯೂ ಆಳವಂದಾರ್" ಎಂದು ಆಕೆ ಹೇಳಿದಳು. ಆಳವಂದಾರ್ ಎಂದರೆ ಆಳುವವನು ಎಂದರ್ಥ. "ನೀನು ಆಳಲು ಬಂದಿದ್ದೀ" ಎಂದು ಆಕೆ ಹೇಳಿದಳು. ಆ ಮಾತು ನಿಜವಾಯಿತು. ಅವನು "ಆಳವಂದಾರ್" ಆದ. ಆದರೆ ರಾಜ ಬಿಡಲಿಲ್ಲ. ಅತಿ ಕಷ್ಟಕರವಾದ ಮೂರು ಪ್ರಶ್ನೆಗಳನ್ನು ರಾಜ ಆಳವಂದಾರ್‌ಗೆ ಕೇಳಿದ. ಆಶ್ಚರ್ಯಕರ ಸಂಗತಿಯೆಂದರೆ ಆ ಮೂರು ಪ್ರಶ್ನೆಗಳಿಗೂ ಆಳವಂದಾರ್ ಸಮರ್ಪಕ ಉತ್ತರಗಳನ್ನು ನೀಡಿದ. ರಾಜನಿಗೆ ಎಷ್ಟು ಸಂತೋಷವಾಯಿತೆಂದರೆ ಅರ್ಧ ರಾಜ್ಯವನ್ನು ಆಳವಂದಾರ್‌ಗೆ ಬಹುಮಾನವಾಗಿ ಕೊಟ್ಟ! ಅವನು ರಾಜ್ಯವನ್ನು ಆಳುತ್ತಿರುವಾಗ ಅವನ ಗುರು ಮಣಕ್ಕಲ್ ನಂಬಿ ಶ್ರೀರಂಗಂನ ರಂಗನಾಥ ಸ್ವಾಮಿಯ ಕುರಿತು ಹೇಳುತ್ತಾ "ದೇವರಿಗಿಂತ ದೊಡ್ಡ ಸಂಪತ್ತು ಬೇರೆ ಇಲ್ಲ" ಎಂದು ಹೇಳಿದ. ಗುರುಗಳ ಮಾತಿನ ಅಂತರಾರ್ಥವನ್ನು ಅರಿತ ಆಳವಂದಾರ್ ಈ ಐಹಿಕ ರಾಜ್ಯವನ್ನು ಆಳುವುದು ನಮ್ಮ ಕೆಲಸವಲ್ಲ; ಆಧ್ಯಾತ್ಮಿಕ ಜಗತ್ತನ್ನು ಆಳಬೇಕು ಎಂದು ತೀರ್ಮಾನಿಸಿ ರಾಜ್ಯವನ್ನು ಪುನಃ ರಾಜನಿಗೆ ಬಿಟ್ಟುಕೊಟ್ಟು ಯೋಗ ಜೀವನವನ್ನು ಆರಂಭಿಸಿದ. ಪಂಡಿತೋತ್ತಮನಾಗಿ 'ಸಿದ್ಧಿತ್ರಯ', 'ಗೀತಾರ್ಥ ಸಂಗ್ರಹ', 'ಆಗಮ ಪ್ರಾಮಾಣ್ಯ' ಮೊದಲಾದ ಗ್ರಂಥಗಳನ್ನು ರಚಿಸಿದ. 'ಚಿತ್-ಅಚಿತ್' ಮತ್ತು 'ಈಶ್ವರ' ಎಂಬ ಮೂಲ ಸಂಸ್ಕೃತ ಕೃತಿಗಳಿಗೆ ಭಾಷ್ಯ ಬರೆದ. ಈ ಭಾಷ್ಯದ ಆಧಾರದ ಮೇಲೆ, ಆ ವಿಚಾರವನ್ನು ಬೆಳೆಸಿ ಮುಂದೆ ಶ್ರೀ ರಾಮಾನುಜಾಚಾರ್ಯರು ತಮ್ಮ ವಿಶಿಷ್ಟಾದ್ವೈತ ತತ್ವವನ್ನು ಸ್ಥಾಪಿಸಿದರು.



**ವಿಠಲ ಪಂಥರ ಸಂತ ಕುಟುಂಬ ಮತ್ತು ರಖುಮಾಬಾಯಿ, ಅಳಂದಿ, ಪುಣೆ ಜಿಲ್ಲೆ, ಮಹಾರಾಷ್ಟ್ರ:**

ಒಂದೇ ಕುಟುಂಬದಲ್ಲಿ ಆಗಿ ಹೋದ ಅಷ್ಟೊಂದು ದೊಡ್ಡ ಪ್ರಮಾಣದ ಸಂತ ಕುಲವನ್ನು ಜಗತ್ತಿನ ಬೇರಾವುದೇ ದೇಶದಲ್ಲಿ ಕಾಣಲಾರೆವು. ವಿಠಲ ಪಂತ ಎಂಬ ಸುಜ್ಞಾನಿಯೊಬ್ಬನ ಮನೆಯಲ್ಲಿ ಅಂತಹ ಪವಾಡ ಜರುಗಿ ಹೋಯಿತು. ಅವನು ಕೆಲಕಾಲ ಕಾಶಿಯಲ್ಲಿ ರಾಮಾನಂದ ಸ್ವಾಮಿಯ ಶಿಷ್ಯನಾಗಿದ್ದ. ಊರಿಗೆ ಬಂದು ರಖುಮಾಬಾಯಿಯ ಕೈಹಿಡಿದಾಗ "ಜಗತ್ ಕಲ್ಯಾಣಕ್ಕಾಗಿ ಮಂಗಳದಾಯಿಯಾದ ಸಂತಾನ ನಿಮ್ಮ ಉದರದಲ್ಲಿ ಜನಿಸುವವು" ಎಂದು ಅಶರೀರವಾಣಿಯಾಯಿತು. "ಇಂದ್ರಿಯಗಳು ನಮ್ಮ ಹಿಡಿತದಲ್ಲಿದ್ದಾಗ ಅತೀಂದ್ರಿಯ ಅನುಭವಗಳು ಆಗುವವು" ಎಂದು ವಿಠಲ ಪಂತ ಆಗಾಗ ಹೇಳುತ್ತಿದ್ದ. ದಿವ್ಯಾನುಭೂತಿ ಇದ್ದ ವ್ಯಕ್ತಿಯಾದುದರಿಂದ ಆತ ತನ್ನ ಮಕ್ಕಳಿಗೆ ವೇದಾರ್ಥಗಳನ್ನು ಸಂಕೇತಿಸುವ ಹೆಸರುಗಳನ್ನಿಟ್ಟ!

**ಶ್ರೀ ನಿವೃತ್ತಿ (೧೨೭೩-೧೨೯೭):**

ಮೊದಲ ಮಗನಿಗೆ ನಿವೃತ್ತಿ ಎಂದು ಹೆಸರಿಟ್ಟರು. ನಿವೃತ್ತಿ ಎಂದರೆ, ಇಂದ್ರಿಯಗಳನ್ನು ನಿಗ್ರಹಿಸಿಕೊಂಡವನೆಂದು ಅರ್ಥ. ತನ್ನನ್ನು ತಾನು ಅರಿತುಕೊಳ್ಳಲು ನಿವೃತ್ತಿ ಎಂಬುದು ಮೊದಲ ಹೆಜ್ಜೆ. ಒಂದು ಮುಂಜಾನೆ, ಅವನು ಬ್ರಹ್ಮಗಿರಿ ಬೆಟ್ಟದಲ್ಲಿರುವ ತ್ರ್ಯಂಬಕೇಶ್ವರ ದೇವಸ್ಥಾನಕ್ಕೆ ಪೂಜೆ ಮಾಡಲು ಕುಟುಂಬ ಸಮೇತ ಹೋಗುತ್ತಿರುವಾಗ ಇದ್ದಕ್ಕಿದ್ದಂತೆ ಹುಲಿಯೊಂದು ಅವರ ಮುಂದೆ ನೆಗೆದು ಬಂದು ನಿಂತಿತು. ಎಲ್ಲರೂ ಹೆದರಿ ದಿಕ್ಕಾಪಾಲಾಗಿ ಓಡಿದರು. ನಿವೃತ್ತಿಯೂ ಕೂಡ ಓಡಿ ಹೋಗುತ್ತಿರಲು ಒಂದು ಗವಿಯ ಮುಂದೆ ಬಂದು ನಿಂತ. ಆ ಗವಿಯಲ್ಲಿ ಗೈನಿನಾಥ ಎಂಬ ಮುನಿಯೊಬ್ಬ ಆಳವಾದ ತಪಸ್ಸಿನಲ್ಲಿ ನಿರತನಾಗಿದ್ದ. ಅವನು ಎಚ್ಚರವಾಗುವವರೆಗೆ ಕಾದುಕುಳಿತು ಅವನ ಪರಿಚಯ ಮಾಡಿಕೊಂಡ. ಅವನಿಂದ ನಿಜವಾದ ಜ್ಞಾನದ ಉಪದೇಶವಾಯಿತು. ಸಹೋದರ ಜ್ಞಾನದೇವನಿಗೂ ಆ ಉಪದೇಶ ಮಾಡುವಂತೆ ಗುರು ಹೇಳಿದ. ನಿವೃತ್ತಿಯ ಉದ್ಘೋಷಣೆ ಹೀಗಿತ್ತು. "ಜಾತಿ ಮತ ಕುಲದ ಬಗ್ಗೆ ಯಾರು ಚಿಂತಿಸುತ್ತಾರೆ? ನನಗೆ ಭಯವಿಲ್ಲ, ಹೆಸರಿಲ್ಲ, ಆಕಾರವಿಲ್ಲದ ಎಲ್ಲ ಜೀವಿಗಳ ಹೃದಯದಲ್ಲಿ ನೆಲೆಸಿರುವ ಆತ್ಮನೇ ನಾನು. ನನಗೆ ಸಾವಿಲ್ಲ; ರೂಪ ಸಹಿತವಾಗಿಯೂ ರೂಪ ರಹಿತವಾಗಿಯೂ ನಾನು ಇರುವೆನು."

**ಶ್ರೀ ಜ್ಞಾನದೇವ (೧೨೭೫–೧೨೯೬):**

ಜ್ಞಾನದೇವ ಅಥವಾ ಜ್ಞಾನೇಶ್ವರ ವಿಠಲ ಪಂತನ ಎರಡನೆಯ ಮಗನಾಗಿ ಜನಿಸಿದ. ಅವನು ಬದುಕಿದ್ದು ಕೇವಲ ೨೧ ವರ್ಷ. ಅವನ ಮನಸ್ಸು ಸದಾ ದೇವರಲ್ಲಿ ಅಥವಾ ಬ್ರಹ್ಮಸತ್ಯದಲ್ಲಿ ಐಕ್ಯವಾಗಿರುತ್ತಿತ್ತು. ಅಣ್ಣನೇ ಅವನಿಗೆ ಗುರುವೂ ಆಗಿದ್ದ. ಅತಿ ಸಣ್ಣ ವಯಸ್ಸಿನಲ್ಲೇ ಸನ್ಯಾಸಾಶ್ರಮ ಸ್ವೀಕರಿಸಿದ. ತನ್ನ ೧೪ನೇ ವರ್ಷದಲ್ಲಿ ಚಿರಕಾಲ ಉಳಿಯಬಲ್ಲ ಕೃತಿ 'ಭಾವಾರ್ಥ ದೀಪಿಕಾ' ಬರೆದ. ಜನ ಅದನ್ನು 'ಜ್ಞಾನೇಶ್ವರಿ' (ಜ್ಞಾನದ ಅಧೀಶ್ವರಿ) ಎಂದೇ ಕರೆದರು. ಅದು ಮರಾಠಿಯ ದೈನಂದಿನ ಆಡು ಭಾಷೆಯಲ್ಲಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಭಗವದ್ಗೀತೆಗೆ ಬರೆದ ಭಾಷ್ಯವಾಗಿದೆ ಅದು. ಕೇವಲ ನೆನಪಿನಾಧಾರದಲ್ಲಿ ಭಗವದ್ಗೀತೆಯ ಆರು ಸಾವಿರ ಶ್ಲೋಕಗಳನ್ನು ಆತ ಹೇಳುತ್ತಿದ್ದನಂತೆ. 'ಅನುಭವಾಮೃತ' ಎಂಬುದು ಆತನ ಇನ್ನೊಂದು ಕೃತಿಯಾಗಿದೆ. ಅವನು ಹಲವಾರು ಅಭಂಗಗಳನ್ನು ರಚಿಸಿದ್ದಾನೆ. ಜ್ಞಾನೇಶ್ವರನ ಮರಣಾನಂತರ ಸಚ್ಚಿದಾನಂದ ಎಂಬಾತ ಜ್ಞಾನೇಶ್ವರನ ಎಲ್ಲ ರಚನೆಗಳನ್ನು (ಜ್ಞಾನೇಶ್ವರನ ಹೆಂಡತಿಯಿಂದಲೂ ಆತ ಸಂಗ್ರಹ ಮಾಡಿದ) ಒಂದೆಡೆ ಕಲೆ ಹಾಕಿದ. ಒಮ್ಮೆ ಒಂದು ಪಂಥಾಹ್ವಾನ ಬಂದಾಗ ತಾನು ಹಾಡಿ ಉಳಿದರ್ಧ ಭಾಗದ ಋಗ್ವೇದದ ಚರಣವೊಂದನ್ನು ಒಂದು ಎಮ್ಮೆಯ ಮೂಲಕ ಹಾಡಿಸಿದನಂತೆ! ಸ್ಥಳೀಯ ನಂಬಿಕೆಯ ಪ್ರಕಾರ ತಾನು ಪೂಜೆ ಮಾಡುತ್ತಿದ್ದ ದೇವರೊಂದಿಗೆ ಅವನು ಐಕ್ಯಗೊಂಡನಂತೆ. ಪಂಡರಾಪುರದ ವಿಠ್ಠೋಬ ಅವನ ಆರಾಧ್ಯ ದೈವ. ಸಂತ ನಾಮದೇವ ಅವನ ಸಮಕಾಲೀನನಾಗಿದ್ದ. ಜ್ಞಾನದೇವ ಸಮಾಧಿ ಹೊಂದಿದ ಅಳಂದು ಎಂಬ ಸ್ಥಳದಲ್ಲಿ ಮುಂದೆ ಸಂತ ಏಕನಾಥ ಎಂಬವನ ಪ್ರಯತ್ನದಿಂದ ದೇವಸ್ಥಾನವೊಂದು ನಿರ್ಮಾಣವಾಯಿತು. "ಆಕಾಶದ ನಿರಭ್ರ ಬೆಳಕು ಸಮುದ್ರದಲ್ಲಿ ಪ್ರತಿಫಲಿತವಾಗುವ ಹಾಗೆ ಸಣ್ಣ ಕೆರೆಯಲ್ಲಿಯೂ ಕಾಣದೊರೆಯುತ್ತದೆ. ಹಾಗೆಯೇ ದೇವರ ಆವಿರ್ಭಾವವನ್ನು ಎಲ್ಲ ಜೀವಿಗಳಲ್ಲಿಯೂ ಕಾಣಬಹುದು" ಎಂದು ಜ್ಞಾನದೇವ ಹೇಳುತ್ತಿದ್ದ.

"ದೇವರಿಗೆ ಜಾತಿ, ಮತ, ಪಂಥ, ಲಿಂಗ ಎಂದು ಭೇದವಿಲ್ಲ. ನಮ್ಮ ಮನಸ್ಸು ಆತನಲ್ಲಿ ಲೀನವಾಗಿರಬೇಕಾದುದು ಮಾತ್ರ ಅತಿ ಮುಖ್ಯ."

"ನಾಳೆಗೆ ಕಾಯುವುದು ಬೇಡ. ಎಲ್ಲ ಕರ್ಮಗಳನ್ನೂ ದೇವರಿಗೆ ಅಲ್ಲಲ್ಲೇ ಅರ್ಪಿಸಿ ಮನಸ್ಸನ್ನು ಶುದ್ಧಗೊಳಿಸುತ್ತಿರಬೇಕು. ಹುಟ್ಟು, ಸಾವು, ದುಃಖ ಮತ್ತು ಎಲ್ಲ ರೀತಿಯ ಬಂಧನಗಳಿಂದ ಬಿಡುಗಡೆಗೊಳ್ಳುವ ನಿಜವಾದ ಹಾದಿಯೆಂದರೆ ಅದೇ."



"ಸಾಧ್ವಿ ಪತಿವ್ರತೆ ಮಹಿಳೆ ಗಂಡನನ್ನು ಹೇಗೆ ಆರಾಧಿಸುವಳೋ ಹಾಗೆ ಯಾವ ಭಯವಿಲ್ಲದೆ, ಪರಿಣಾಮ ಲೆಕ್ಕಿಸದೆ, ಯಾವ ಆಸೆಗಳಿಲ್ಲದೆ ದೇವರನ್ನು ಪೂಜಿಸಿ."

"ಸಂತೋಷ ಮತ್ತು ದುಃಖ ಎರಡೂ ಸಮಾನವಾದವು. ಹರಿನಾಮವೊಂದೇ ಸತ್ಯ. ನಮ್ಮ ಏಕಮಾತ್ರ ಬೆಂಬಲಿಗನಾಗಿ ಇರುವವನು ಅವನೊಬ್ಬನೇ."

"ಅಶುದ್ಧ ಮನಸ್ಸಿನ ವ್ಯಕ್ತಿ ತಾನು ಎಷ್ಟೇ ಪರಿಶುದ್ಧ ಅಂದುಕೊಂಡರೂ ಅವನನ್ನು ಶುದ್ಧಾತ್ಮ ಎನ್ನಲಾಗದು."

"ಕಡುಪಾಪಿಯೂ ದೇವರ ಧ್ಯಾನದಿಂದ ಒಳ್ಳೆಯವನಾಗಬಲ್ಲ. ಪಶ್ಚಾತ್ತಾಪದಿಂದ ಮಿಂದ ಬಳಿಕ ಪರಿಶುದ್ಧನಾಗಿ ತನ್ನ ಹೃದಯ ದೇಗುಲವನ್ನು ಅವನು ಪ್ರವೇಶಿಸಬೇಕು. ಭಕ್ತಿಯಿಂದ ದೇವರನ್ನು ಪ್ರಾರ್ಥಿಸಬೇಕು. ಸಂಪೂರ್ಣ ಶರಣಾಗತನಾಗಬೇಕು. ಗಾಳಿ ಹೇಗೆ ಧೂಳನ್ನು ಹೊತ್ತೊಯ್ಯುತ್ತದೋ ಹಾಗೇ ಅವನ ಎಲ್ಲ ಪಾಪಕರ್ಮಗಳೂ ನಾಮಾವಶೇಷವಾಗಿ ಹೋಗುವವು." "ಕಣ್ಣುಗಳ ಸಹಾಯವಿಲ್ಲದೆ, ದೇವರನ್ನು ನೋಡಿದೆ. ಕೈಗಳ ಸಹಾಯವಿಲ್ಲದೆ ಅವನನ್ನು ಮುಟ್ಟಿದೆ. ದೇಹದ ನೆರವಿಲ್ಲದೆ ಅವನನ್ನು ಅಪ್ಪಿಕೊಂಡೆ."– ಇವು ಸಂತ ಜ್ಞಾನೇಶ್ವರನ ಕೆಲವು ಮಾತುಗಳು.

**ಶ್ರೀ ಸೋಪಾನ (೧೨೭೭–೧೨೯೮):**

ವಿಠಲ ಪಂಥನ ಮೂರನೇ ಮಗನೇ 'ಸೋಪಾನ'. ಸೋಪಾನ ಎಂದರೆ ಹಾದಿ, ಪಥ, ಮೆಟ್ಟಿಲು ಎಂದರ್ಥ. ವಿಠಲ ಪಂಥನ ಪ್ರಕಾರ ಗುರಿ ನಿಷ್ಕರ್ಷೆಯಾದ ಬಳಿಕ ಸಾಗುವ ಹಾದಿ ಬಲುಸುಲಭ. ತನ್ನ ಅಣ್ಣ ಸಂತ ಜ್ಞಾನೇಶ್ವರ ಇವನಿಗೆ ಗುರು. ಜಾತಿ, ಮತಗಳ ಭೇದವಿಲ್ಲ ಎಂಬುದನ್ನು ಆಚರಣೆಯಲ್ಲಿಯೂ ತರುತ್ತಿದ್ದ. ಇವರ ಜಾತಿಯ ಕುರಿತೇ ಸ್ಥಳೀಯ ಬ್ರಾಹ್ಮಣರು ಕೇವಲವಾಗಿ ಮಾತಾಡಿದಾಗ, ಅವನು ಅವರನ್ನೇ ಪ್ರಶ್ನಿಸಿದ– "ಪಾಂಡವರ ಋಷಿ ವ್ಯಾಸ ಮತ್ತು ವಾಲ್ಮೀಕಿಯವರ ಜಾತಿಯ ಶ್ರೇಷ್ಠತೆ ಏನಿತ್ತು?"

**ಭಕ್ತೆ ಮುಕ್ತಾಬಾಯಿ (೧೨೭೯–೧೨೯೮):**

ವಿಠಲ ಪಂಥನಿಗೆ ಹುಟ್ಟಿದ ನಾಲ್ಕನೇ ಮಗು ಹೆಣ್ಣು; ಅದಕ್ಕೆ 'ಬಿಡುಗಡೆ' ಎಂಬ ಅರ್ಥದ 'ಮುಕ್ತಾ' ಎಂದು ನಾಮಕರಣ ಮಾಡಿದ. "ಇಂದ್ರಿಯಗಳ ನಿಗ್ರಹ ಮಾಡು. ದೈವೀಜ್ಞಾನದ ಮುಂಜಾವಿನ ಬೆಳಕು ಹರಿಯುತ್ತದೆ. ಅದು ಹಾದಿ ತೋರಿಸುತ್ತದೆ ಮತ್ತು ಉಳಿದ ಮೂರೂ ಮೋಕ್ಷದ ಕಡೆಗೆ ನಿನ್ನನ್ನು

ಕರೆದುಕೊಂಡು ಹೋಗುತ್ತದೆ!" ಎಂದು ಮಗಳಿಗೆ ಉಪದೇಶ ಮಾಡಿದ. ಸಂತನಾದ ಅಣ್ಣ ಜ್ಞಾನೇಶ್ವರ ಆಕೆಗೆ ಗುರುವಾಗಿದ್ದ. ಈ ಎಲ್ಲ ನಾಲ್ಕು ಸಂತರೂ ಒಂದೇ ಬಾರಿ ಈ ಜಗತ್ತಿಗೆ ಬಂದರು; ಒಟ್ಟಿಗೇ ಜೀವಿಸಿದರು ಮತ್ತು ಹೆಚ್ಚು ಕಡಿಮೆ ಒಂದೇ ಬಾರಿಗೆ ಕಣ್ಮರೆಯಾಗಿ ಹೋದರು.

* * * *

# ೩. ಹಿಂದೂ ಧಾರ್ಮಿಕ ಚಳವಳಿಯೊಂದಿಗೆ ಸಂಪರ್ಕ ಹೊಂದಿದ್ದ ಆಧ್ಯಾತ್ಮಿಕ ಗುರುಗಳು

ನಮ್ಮ ದೇಶದ ಆಧ್ಯಾತ್ಮಿಕ ಮತ್ತು ಸಾಮಾಜಿಕ ಮುನ್ನಡೆಗೆ ಕಾರಣವಾದ ಕೆಲವು ಧಾರ್ಮಿಕ ಚಳವಳಿಗಳಲ್ಲಿ ಬ್ರಹ್ಮಸಮಾಜ, ಆರ್ಯ ಸಮಾಜ, ಶ್ರೀರಾಮಕೃಷ್ಣ ಮಿಶನ್, ದಿವ್ಯ ಜೀವನ ಸಮಾಜ, ಚಿನ್ಮಯ ಮಿಶನ್ ಮತ್ತು ಅಂತಾರಾಷ್ಟ್ರೀಯ ಕೃಷ್ಣ ಜ್ಞಾನ ಸಮಿತಿ (ಇಸ್ಕಾನ್) ಬಹಳ ಮುಖ್ಯವಾದವು.

**ಬ್ರಹ್ಮಸಮಾಜ:** ೧೮೨೮ರಲ್ಲಿ ಸಮಾಜ ಸುಧಾರಕರಾದ ರಾಜಾ ರಾಮ್ ಮೋಹನ್ ರಾಯ್ ಎಂಬವರು ಕೊಲ್ಕತ್ತಾದಲ್ಲಿ ಬ್ರಹ್ಮಸಮಾಜವನ್ನು ಹುಟ್ಟುಹಾಕಿದರು. ಬ್ರಹ್ಮಸಮಾಜವೆಂದರೆ 'ದೇವರ ಸಮಾಜ' ಎಂದು ಅರ್ಥ.

**ರಾಜಾ ರಾಮ್‌ಮೋಹನ್ ರಾಯ್ (೧೭೭೪–೧೮೪೨), ಕೊಲ್ಕತ್ತಾ, ಪಶ್ಚಿಮ ಬಂಗಾಳ:**

ಸಂಸ್ಕೃತ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಅತ್ಯದ್ಭುತ ಪಂಡಿತರಾಗಿದ್ದ ಇವರು ಸಮಾಜ ಸುಧಾರಕರೆಂದೇ ಪ್ರಸಿದ್ಧಿಗೆ ಬಂದರು. ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಉನ್ನತಿಗಾಗಿ ಶ್ರಮಿಸಿದರು. ಆರಂಭದಲ್ಲಿ ಅವರು 'ಬ್ರಹ್ಮಸಭೆ' ಎಂಬ ಹೆಸರಿನಲ್ಲಿ ಆರಂಭಿಸಿದ ಚಳವಳಿಯು ಅನಂತರ ಬ್ರಹ್ಮಸಮಾಜವಾಗಿ ರೂಪು ತಳೆಯಿತು. ಒಬ್ಬ ದೇವರನ್ನು ಆರಾಧಿಸಬೇಕೆಂಬ ಹೆಬ್ಬಯಕೆಯಲ್ಲಿ ಆರಂಭಿಸಲಾದ ಈ ಚಳವಳಿಯ ಮೂಲಕ ಸಮಾಜ ಸುಧಾರಣೆಯ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಯಿತು. ಯಾವುದೇ ರೀತಿಯಲ್ಲೂ ವಿಗ್ರಹಾರಾಧನೆ ಬೇಡ ಎಂದು ತೀರ್ಮಾನಿಸಲಾಯಿತು. ಹಾಗಾಗಿ ಪೂಜಾ ಮಂದಿರಗಳಲ್ಲಿ ಯಾವುದೇ ದೇವರ ವಿಗ್ರಹ, ಮೂರ್ತಿ ಅಥವಾ ಭಾವಚಿತ್ರಗಳನ್ನು ಇಡುತ್ತಿರಲಿಲ್ಲ. ನೈವೇದ್ಯ, ಅರ್ಪಣೆಯೂ ಇರಲಿಲ್ಲ. ಬಹುಪತ್ನಿತ್ವ, ಬಾಲ್ಯವಿವಾಹ ಮೊದಲಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಜನಜಾಗೃತಿ ಮೊದಲಾಯಿತು. 'ಸತಿ' ಪದ್ಧತಿ ವಿರುದ್ಧ (ಸತ್ತ ಗಂಡನ ಚಿತೆಗೆ ಹಾರಿ ಪತ್ನಿ ಪ್ರಾಣಾರ್ಪಣೆ ಮಾಡಿಕೊಳ್ಳುವುದು) ಹೋರಾಡಿ, ೧೮೨೮ರಲ್ಲಿ ಕಾನೂನಿನ ಪ್ರಕಾರ ಅದನ್ನು ನಿಷೇಧಿಸುವಲ್ಲಿ ಬ್ರಹ್ಮಸಮಾಜವು ಮಹತ್ವದ ಪಾತ್ರ ವಹಿಸಿತು.

ಬ್ರಹ್ಮ ಸಮಾಜದ ಇತರ ಆರು ಮಂದಿ ಪ್ರಮುಖ ಮುಖಂಡರೆಂದರೆ ಮಹರ್ಷಿ ದೇವೇಂದ್ರನಾಥ ಠಾಕೂರ್ (೧೮೧೭–೧೯೦೫), ಕೇಶವ ಚಂದ್ರಸೇನ್ (೧೮೩೮–೧೮೮೪), ಪ್ರತಾಪಚಂದ್ರ ಮಜುಮ್‌ದಾರ್ (೧೮೪೦–೧೯೦೫), ಶಶಿಪಾದ ಬ್ಯಾನರ್ಜಿ (೧೮೪೦–೧೯೨೫), ಆನಂದ ಮೋಹನ ಬೋಸ್ (೧೮೪೬–೧೯೦೬) ಮತ್ತು ಪಂಡಿತ ಶಿವನಾಥ ಶಾಸ್ತ್ರಿ (೧೮೪೭–೧೯೨೫), ಮಹರ್ಷಿ ದೇವೇಂದ್ರನಾಥ ಠಾಕೂರ್ ಅವರು ಆದಿ ಬ್ರಹ್ಮ ಸಮಾಜವನ್ನು ಮುನ್ನಡೆಸಿದರೆ ಅನಂತರ ಕೇಶವ ಚಂದ್ರಸೇನ್ ಅವರು ಭಾರತೀಯ ಬ್ರಹ್ಮ ಸಮಾಜವನ್ನು ಮುನ್ನಡೆಸಿದರು. ಅದಕ್ಕೂ ಮೊದಲು ಅವರು 'ಹಿಂದೂ ಸಮಾಜ'ವನ್ನು ಸ್ಥಾಪಿಸಿದ್ದರು. ಹಿಂದೂ ಸಮಾಜದಿಂದ ಬ್ರಹ್ಮಸಮಾಜ ಹುಟ್ಟಿಬಂದಿತು. ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸಬೇಕೆಂಬ ಹೆಬ್ಬಯಕೆ ಸ್ವಲ್ಪಮಟ್ಟಿಗೆ ಈಡೇರಿತು.

**ಆರ್ಯಸಮಾಜ:** ಮುಂಬಯಿಯಲ್ಲಿ ಸ್ವಾಮಿ ದಯಾನಂದ ಎಂಬುವರು ೧೮೭೫ರಲ್ಲಿ ಆರ್ಯ ಸಮಾಜವನ್ನು ಆರಂಭಿಸಿದರು. ವೇದ ಪರಂಪರೆಯ ತಳಹದಿಯಲ್ಲಿ ಹತ್ತು ತತ್ವಗಳ ಆಧಾರದಲ್ಲಿ ಹಿಂದೂ ಧರ್ಮ ಪ್ರಚಾರಕ್ಕಾಗಿ ಅದನ್ನು ಸ್ಥಾಪಿಸಲಾಯಿತು. ಅದರ ಬೋಧನೆಗಳು ಇಡೀ ಮನುಕುಲವನ್ನು ವ್ಯಾಪಿಸುವಂಥದಾಗಿತ್ತು. ಹಿಂದೂ ಧರ್ಮವನ್ನು ಕೃತಕವಾದ ಮತ್ತು ಮನುಷ್ಯನಿರ್ಮಿತ ಮೂಢನಂಬಿಕೆಗಳಿಂದ ಬಿಡುಗಡೆಗೊಳಿಸಿ ವೇದಯುಗೀನ ನಂಬಿಕೆ ಮತ್ತು ಜೀವನ ಪದ್ಧತಿಗನುಸಾರವಾಗಿ ಪುನರುಜ್ಜೀವನಗೊಳಿಸುವುದು ಆರ್ಯ ಸಮಾಜದ ಗುರಿಯಾಗಿತ್ತು.

**ಸ್ವಾಮೀ ದಯಾನಂದ ಸರಸ್ವತಿ (೧೮೨೪–೧೮೮೩), ಗುಜರಾತ್:**

ಶ್ರೇಷ್ಠ ಸನ್ಯಾಸಿ ಮತ್ತು ವಿದ್ವಾಂಸರಾಗಿದ್ದ ಇವರು ರಾಜಕೀಯ ಚಿಂತಕರೂ ಸ್ವರಾಜ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದವರೂ ಆಗಿದ್ದಾರೆ. ಹಿಂದೂ ಸಮಾಜ ಸುಧಾರಕರಾಗಿ ಇವರು ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು. ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು. ಅವರ ಸಮಾಜ ಸುಧಾರಣಾ ಚಟುವಟಿಕೆಗಳು ಮತ್ತು ಶಿಕ್ಷಣ ಪ್ರಸಾರದ ಪ್ರಯತ್ನಗಳು ಸರ್ವತ್ರ ಶ್ಲಾಘನೆಗೆ ಗುರಿಯಾದವು. ಮತಾಂತರಗೊಂಡವರನ್ನು 'ಶುದ್ಧಿ' ಕಾರ್ಯಮಾಡಿ ಮರಳಿ ಮಾತೃಧರ್ಮಕ್ಕೆ ಸೇರಿಸಿಕೊಳ್ಳುವ ಕೆಲಸ ಮಾಡಿದರು. ಇವರ 'ಸತ್ಯಾರ್ಥ ಪ್ರಕಾಶ' ಎಂಬ ಕೃತಿ ಹಿಂದೂಗಳ ಮನಸ್ಸಿನಲ್ಲಿ ಒಂದು ಹೊಸ ಆತ್ಮವಿಶ್ವಾಸವನ್ನು ಮೂಡಿಸಿತು.

**ಶ್ರೀ ರಾಮಕೃಷ್ಣ ಮಿಶನ್:** ತನ್ನ ಗುರು ಸಂತ ಶ್ರೀರಾಮಕೃಷ್ಣ ಪರಮಹಂಸರ ಸ್ಮರಣಾರ್ಥ ಸ್ವಾಮೀ ವಿವೇಕಾನಂದರು ೧೮೯೭ರಲ್ಲಿ ಪಶ್ಚಿಮ ಬಂಗಾಳದ ಕೊಲ್ಕತ್ತಾದ



ಬಾರಾನಗರ ಎಂಬಲ್ಲಿ ಶ್ರೀರಾಮಕೃಷ್ಣ ಮಿಶನ್ ಸ್ಥಾಪಿಸಿದರು. ಅದರ ಉದ್ದೇಶ 'ಆತ್ಮೋನ್ನತಿ ಮತ್ತು ಜಗತ್ತಿನ ಕಲ್ಯಾಣ'. ಜಗತ್ತಿನಾದ್ಯಂತ ಇರುವ ೧೩೯ ಶಾಖೆಗಳ ಮೂಲಕ ಅದು ನಡೆಸುತ್ತಿರುವ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮಗಳು ಜನಮನ್ನಣೆ ಗಳಿಸಿವೆ. ಈ ಉದ್ದೇಶವನ್ನು ಸಾಧಿಸಲು ಮಿಶನ್ನಿಗೆ ಸಂತರ ನೇರಶಿಷ್ಯರ ಸಹಯೋಗ ಮತ್ತು ಮಾರ್ಗದರ್ಶನ ದೊರೆಯಿತು. ಸ್ವಾಮೀ ಅದ್ಭುದಾನಂದ, ಸ್ವಾಮೀ ಅಭುದಾನಂದ, ಸ್ವಾಮೀ ಅದ್ವೈತಾನಂದ, ಸ್ವಾಮೀ ಅಖಂಡಾನಂದ, ಸ್ವಾಮೀ ಬ್ರಹ್ಮಾನಂದ, ಸ್ವಾಮೀ ನಿರಂಜನಾನಂದ, ಸ್ವಾಮೀ ಪ್ರೇಮಾನಂದ, ಸ್ವಾಮೀ ರಾಮಕೃಷ್ಣಾನಂದ, ಸ್ವಾಮೀ ಶರಣಾನಂದ, ಸ್ವಾಮೀ ಶಿವಾನಂದ, ಸ್ವಾಮೀ ಸುಭೋದಾನಂದ, ಸ್ವಾಮೀ ತ್ರಿಗುಣಾತೀತಾನಂದ, ಸ್ವಾಮೀ ತುರೀಯಾನಂದ, ಸ್ವಾಮೀ ವಿಜಯಾನಂದ, ಸ್ವಾಮೀ ಯೋಗಾನಂದ ಮತ್ತು ಸ್ವಾಮೀ ವಿವೇಕಾನಂದ ಮೊದಲಾದವರು ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರಾಗಿದ್ದರು. ಶ್ರೀ ರಾಮಕೃಷ್ಣ ಮಿಶನ್‌ನ 'ಪುಣ್ಯ ತ್ರಿಮೂರ್ತಿ'ಗಳಲ್ಲಿ ಸ್ವಾಮೀ ವಿವೇಕಾನಂದ, ಶ್ರೀ ಶಾರದಾ ದೇವಿ ಮತ್ತು ಶ್ರೀ ರಾಮಕೃಷ್ಣ ಪರಮಹಂಸರು ಸೇರಿದ್ದಾರೆ.

**ಸ್ವಾಮಿ ವಿವೇಕಾನಂದ (೧೮೬೩–೧೯೦೨), ಕೊಲ್ಕತ್ತಾ, ಪಶ್ಚಿಮ ಬಂಗಾಳ:**

ವಿಶ್ವನಾಥ ದತ್ತ ಮತ್ತು ಭುವನೇಶ್ವರಿ ದೇವಿ ಎಂಬ ಶ್ರೀಮಂತ ದಂಪತಿಗಳ ಮಗನಾಗಿ ಹುಟ್ಟಿದ ಮಗುವಿಗೆ ನರೇಂದ್ರನಾಥ ಎಂದು ಹೆಸರಿಟ್ಟರು. ಸ್ವಭಾವತಃ ಅತ್ಯಂತ ಚೂಟಿಯಾಗಿದ್ದ ಹುಡುಗನಿಗೆ ಅಸಾಧಾರಣವಾದ ಜ್ಞಾಪಕಶಕ್ತಿ ಇತ್ತು. ಕಲಿಯುವುದರಲ್ಲಿ ಹೇಗೋ ಆಟಪಾಠದಲ್ಲೂ ಅಷ್ಟೇ ಚುರುಕಾಗಿದ್ದ. ವಿಶೇಷವಾಗಿ ಪುಸ್ತಕಗಳನ್ನು ಓದುತ್ತಿದ್ದ. ನಮ್ಮ ದೇಶದ ಉದ್ದಗಲ ಮಾತ್ರವಲ್ಲ, ಅಮೆರಿಕ, ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ದೇಶಗಳಲ್ಲೂ ಸಂಚರಿಸಿದ. ಪುರೋಗಾಮೀ ಮನೋಭಾವ ಹೊಂದಿದ್ದ ಈ ಯುವಕ ದೇವರಿದ್ದಾನೆ ಎಂದರೆ ಸುಮ್ಮಸುಮ್ಮನೆ ನಂಬುತ್ತಿರಲಿಲ್ಲ. ಅದಕ್ಕೆ ಸಾಕ್ಷ್ಯವೇನು, ಆಧಾರವೇನು ಎಂದು ಪ್ರಶ್ನಿಸುತ್ತಿದ್ದ. ರಾಮಕೃಷ್ಣ ಪರಮಹಂಸರ ಸಂಸರ್ಗದಲ್ಲಿ ಸುಮಾರು ಐದು ವರ್ಷ ವಾಸ ಮಾಡುವ ಸುಯೋಗ ಒದಗಿ ಬಂತು. ಬಾಲಕ ನರೇಂದ್ರನಾಥ ಅವರ ಪ್ರಭಾವಕ್ಕೊಳಗಾಗಿ ಮನೆ ಮಠ ಬಿಟ್ಟು ಬಂದು ಸನ್ಯಾಸಿಯಾದ.

ಶ್ರೀ ರಾಮಕೃಷ್ಣರ ಪರಮಶಿಷ್ಯರಲ್ಲಿ ಒಬ್ಬನಾದ. ಗುರು ರಾಮಕೃಷ್ಣ ಹಾಗೂ ಸಹ ಸನ್ಯಾಸಿಗಳೊಂದಿಗೆ ಸೇರಿಕೊಂಡು ಕೊಲ್ಕತ್ತಾ ಬಳಿ ಬೇಲೂರು ಎಂಬಲ್ಲಿ ಶ್ರೀ ರಾಮಕೃಷ್ಣ ಮಿಶನ್ ಹಾಗೂ ಅದರ ಮೊದಲ ಮಠವನ್ನು ಸ್ಥಾಪಿಸುವಲ್ಲಿ ವಿಶೇಷವಾಗಿ ಪ್ರಯತ್ನಪಟ್ಟ. ಎಲ್ಲಿ ಹೋದರೂ ಭಾರತ ದೇಶ, ಅದರ ಸನಾತನ ಸಂಸ್ಕೃತಿಯ ಶ್ರೇಷ್ಠತೆ, ಭವ್ಯತೆ, ಶ್ರೀಮಂತಿಕೆ, ಪರಂಪರೆಯ ಹೆಚ್ಚುಗಾರಿಕೆ ಮೊದಲಾದವುಗಳ

ಕುರಿತು ದೇಶಬಾಂಧವರ ಧಮನಿಗಳಲ್ಲಿ ಕೆಚ್ಚಿನ ರಕ್ತ ಹರಿಯುವಂತೆ ಭಾಷಣ ಮಾಡುತ್ತಿದ್ದ.

"ಪರಿಶ್ರಮವಂತನಾಗಿರು, ಇತರರಿಗೆ ಒಳಿತನ್ನುಂಟುಮಾಡು– ಇದೇ ಎಲ್ಲ ಆರಾಧನೆಗಳ ಮೂಲ ಮಂತ್ರ."

"ನಿನ್ನನ್ನು ನೀನು ತಿಳಿ. ಅದು ಆಗಬೇಕಾಗಿರುವ ಕೆಲಸ. ನೀನು ಹೇಗಿದ್ದೀಯೋ ಹಾಗೆಯೇ ನಿನ್ನನ್ನು ತಿಳಿದುಕೋ. ಅದೇ ಅನಂತವಾದ ಶಕ್ತಿ."

**ಶ್ರೀ ಅರವಿಂದ ಸಮಾಜ:**

೧೯೨೬ರಲ್ಲಿ ಮಹರ್ಷಿ ಅರವಿಂದ ಘೋಷರು ಅರವಿಂದ ಸಮಾಜವನ್ನು ಸ್ಥಾಪಿಸಿದರು.

**ಶ್ರೀ ಅರವಿಂದ ಘೋಷ್ (೧೮೭೨–೧೯೫೦), ಕೊಲ್ಕತ್ತಾ, ಪಶ್ಚಿಮ ಬಂಗಾಳ:**

ಶ್ರೀಮಂತ ಮನೆತನದಲ್ಲಿ ಹುಟ್ಟಿದ ಅರವಿಂದ ತುಂಬ ಬುದ್ಧಿವಂತನಾಗಿದ್ದ. ಭಾರತದಲ್ಲಿ ಮತ್ತು ವಿದೇಶದಲ್ಲಿ ಒಳ್ಳೆಯ ಶಿಕ್ಷಣ ದೊರೆಯಿತು. ದೊಡ್ಡ ವಿದ್ವಾಂಸನೂ ಕವಿಯೂ ಆಗಿದ್ದ. ಭಾರತ ದೇಶದಲ್ಲಿ ಆಗ ಪ್ರಚಲಿತವಿದ್ದ ಕ್ರಮದಂತೆ ಯುವಕರೆಲ್ಲ ಬ್ರಿಟಿಷರ ವಿರುದ್ಧ ಹೋರಾಡುತ್ತ ಸ್ವಾತಂತ್ರ್ಯಾಂದೋಲನಕ್ಕೆ ಧುಮುಕುತ್ತಿದ್ದರು. ಯುವಕ ಅರವಿಂದನು ಅದರಿಂದ ಹೊರತಾಗಲಿಲ್ಲ. ರಾಷ್ಟ್ರಭಕ್ತಿಯ ಕೆಚ್ಚು ಧಮನಿಗಳಲ್ಲಿ ಹರಿಯುತ್ತ ಭಾರತ ದೇಶವನ್ನು ಬ್ರಿಟಿಷರ ಹಿಡಿತದಿಂದ ಪಾರುಮಾಡುವುದೊಂದೇ ಪರಮಧ್ಯೇಯವಾಗಿ ಹೋಯಿತು. ಆದರೆ ಪರಿಸ್ಥಿತಿಯ ಕೈಗೂಸಾಗಿ ಅರವಿಂದರು ಆಧ್ಯಾತ್ಮ ಹಾಗೂ ಸಾಂಸ್ಕೃತಿಕ ಭಾರತವನ್ನು ಕಟ್ಟುವುದರ ಕಡೆಗೆ ಮನಸ್ಸು ಮಾಡಿದರು. ಅದರಿಂದಾಗಿ ಅವರು ಯೋಗಿಯೂ ಅಧ್ಯಾತ್ಮ ನೇತಾರರೂ ಆದರು. ಸನಾತನ ಪರಂಪರೆ ಮತ್ತು ಮೌಲ್ಯಗಳ ನೆಲೆಯಿಂದ ಕ್ರಾಂತಿಕಾರಕ ಭಾರತವನ್ನು ಕಟ್ಟುವ ದಿಸೆಯಲ್ಲಿ ಪ್ರಯತ್ನ ಮಾಡಿದರು. ೧೯೨೬ರಲ್ಲಿ ಪಾಂಡಿಚೆರಿಯಲ್ಲಿ ತೀರಾ ಭಿನ್ನವಾದ ಮತ್ತು ಹಲವಾರು ವಿಚಾರಗಳಲ್ಲಿ ಹೊಸತನದಿಂದ ಕೂಡಿದ ಆಶ್ರಮವೊಂದನ್ನು ಆರಂಭಿಸಿದರು. ಅವರ ಮಹಾಕಾವ್ಯ 'ಸಾವಿತ್ರಿ'ಯು ನಮ್ಮ ಪುರಾಣದಿಂದ ತೆಗೆದುಕೊಂಡ ಸತ್ಯವಾನ್–ಸಾವಿತ್ರಿಯ ಕಥೆಯಾಗಿದೆ. ಪ್ರಸ್ತುತ ಭಾರತದ ಪರಿಸ್ಥಿತಿಯೊಂದಿಗೆ ಹೋಲಿಸಿ ಬರೆದ ಅದ್ವಿತೀಯ ಕೃತಿ ಅದು. 'ದೈವಿಕ ಜೀವನ' ಎಂಬುದು ಗದ್ಯದಲ್ಲಿರುವ ಒಂದು ಮಹತ್ವದ ಕೃತಿ. ತಮ್ಮ ಚಿಂತನೆ ಮತ್ತು ತತ್ವಗಳನ್ನು ಅದರಲ್ಲಿ ಹೇಳಿದ್ದಾರೆ. 'ಸಂಯೋಜಿತ ಯೋಗ' ಎಂಬ ಕೃತಿಯಲ್ಲಿ ಅವರು ಯೋಗವನ್ನು ಹೇಗೆ ಕಂಡುಕೊಂಡಿದ್ದಾರೆ, ಅಳವಡಿಸಿಕೊಂಡಿದ್ದಾರೆ ಎಂಬುದನ್ನು ತಿಳಿಸಿದ್ದಾರೆ. 'ವೇದದ ರಹಸ್ಯ', 'ಗೀತೆಯ ಮೇಲಿನ ಪ್ರಬಂಧಗಳು' ಅವರ ಇನ್ನಿತರ



ಪಾಂಡಿತ್ಯಪೂರ್ಣ ಕೃತಿಗಳು. ಅವರು ಸುಮಾರು ಹನ್ನೆರಡು ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ. ಅವರ ನೂರಾರು ಲೇಖನಗಳು, ಪತ್ರಗಳು, ಚಾರಿತ್ರಿಕ ಮೌಲ್ಯಗಳಿಂದ ಕೂಡಿವೆ. "ಎಲ್ಲಾ ಬದುಕು ಯೋಗಕ್ಕಾಗಿ" ಎಂಬುದು ಅವರ ಇನ್ನೊಂದು ಮೌಲಿಕ ಗ್ರಂಥ. "ನಮ್ಮ ಯೋಗವೆಂದರೆ ಹಳೆಯ ಹಾದಿಯನ್ನು ಸವೆಸುವ ಕ್ರಮವಲ್ಲ; ಅದೊಂದು ಆಧ್ಯಾತ್ಮಿಕ ಸಾಹಸೋದ್ಯಮ" ಎಂದು ಒಂದು ಕಡೆ ಅವರು ಹೇಳಿಕೊಂಡಿದ್ದಾರೆ.

**ದಿವ್ಯ ಜೀವನ ಸಮಾಜ:**

ವೈದ್ಯಕೀಯ ಸೇವೆ ಮತ್ತು ಆಧ್ಯಾತ್ಮದ ಮೂಲಕ ಆತ್ಮೋನ್ನತಿಯನ್ನು ಧ್ಯೇಯವಾಗಿರಿಸಿಕೊಂಡು ಸ್ವಾಮಿ ಶಿವಾನಂದರು ೧೯೩೬ರಲ್ಲಿ ಋಷಿಕೇಶದಲ್ಲಿ ದಿವ್ಯಜೀವನ ಸಂಘವನ್ನು ಆರಂಭಿಸಿದರು. ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಹಲವಾರು ಹೊತ್ತಿಗೆಗಳನ್ನು ಈ ಸಂಘವು ಪ್ರಕಟಿಸಿದೆ.

**ಶ್ರೀ ಸ್ವಾಮೀ ಶಿವಾನಂದ (೧೮೮೭–೧೯೬೩), ತಿರುನಲ್ವೇಲಿ ಸಮೀಪ, ಪತ್ತಮಡೈ, ತಮಿಳ್ನಾಡು:**

ತಂದೆ–ತಾಯಿಯರು ಕುಪ್ಪುಸ್ವಾಮಿ ಎಂದು ಹೆಸರಿಟ್ಟಿದ್ದರು. ವೈದ್ಯಕೀಯ ಓದಿ ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದರೂ ಜನರ ಬಡತನ ಮತ್ತು ರೋಗ ರುಜಿನಗಳನ್ನು ಕಂಡು ಕಂಗೆಟ್ಟು ಅದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಹಿಮಾಲಯ ಪ್ರವಾಸ ಮಾಡಿ ಅಲ್ಲಿ ಸ್ವಾಮೀ ವಿಶ್ವಾನಂದ ಅವರನ್ನು ಭೇಟಿ ಮಾಡಿದರು. ಅವರು ಈತನಿಗೆ ಸನ್ಯಾಸ ದೀಕ್ಷೆಕೊಟ್ಟು ಕಾವಿ ಬಟ್ಟೆ ತೊಡಿಸಿದರು. ಸ್ವಾಮೀ ಶಿವಾನಂದ ಎಂದು ಹೆಸರಿಟ್ಟರು. ಚಿನ್ಮಯ ಮಿಶನ್ ಸ್ಥಾಪಿಸಿದ ಸ್ವಾಮೀ ಚಿನ್ಮಯಾನಂದರು ಇವರ ಶಿಷ್ಯ. ಋಷಿಕೇಶದಲ್ಲಿ ಶಿವಾನಂದ ಆಶ್ರಮ ಮತ್ತು ಶಿವಾನಂದ ಆಸ್ಪತ್ರೆ ಸ್ಥಾಪಿಸಿದರು. ಇವತ್ತಿಗೂ ಅವು ಮುಂದುವರಿಯುತ್ತಿವೆ. ಮತ್ತು ೧೯೩೬ರಲ್ಲಿ ಸ್ಥಾಪಿಸಲಾದ 'ದಿವ್ಯ ಜೀವನ ಸಂಘ'ದ ವ್ಯಾಪ್ತಿಗೆ ಅವನ್ನು ಒಳಪಡಿಸಿದರು. ಇದು ಟ್ರಸ್ಟಿನ ಆಡಳಿತದಲ್ಲಿ ನಡೆಯುತ್ತಿದೆ. ಇವರು ಒಬ್ಬ ಮಹಾನ್ ಲೇಖಕರೂ ಆಗಿದ್ದರು. ಅವರ ಧಾರ್ಮಿಕ ಕೃತಿಗಳಿಗೆ ವ್ಯಾಪಕ ಓದುಗರ ಬಳಗವಿದೆ. ಅವರ ಸಂದೇಶಗಳು ಕೆಲವು ಹೀಗಿವೆ:

* "ಸೇವೆ ಮಾಡು, ಪ್ರೀತಿಸು, ದಾನ ಮಾಡು, ಪರಿಶುದ್ಧನಾಗು, ಧ್ಯಾನ ಮಾಡು, ನಿನ್ನನ್ನು ನೀನು ಅರಿತುಕೋ."

* "ಪ್ರತಿಯೊಂದೂ ಸಾವು ನೆನಪಿನ ಸೂಚನೆಯಾಗಿದೆ; ಪ್ರತಿಯೊಂದು ಘಂಟಾನಾದವೂ ಅಂತ್ಯ ಸಮೀಪಿಸಿತೆಂಬುದನ್ನು ಸೂಚಿಸುತ್ತದೆ."

* "ಆಧ್ಯಾತ್ಮಿಕ ಪ್ರಗತಿಯೆಂಬುದು ಸುರುಳಿಸುತ್ತಿಕೊಂಡಂತೆ; ನೀನು ಹಲವಾರು ಪರ್ವತಗಳನ್ನು ಸುತ್ತಿ ಬಳಸಿ ಹತ್ತಬೇಕಾಗುವುದು."

* "ಎಲ್ಲ ಪ್ರಲೋಭನೆಗಳನ್ನು ನಿಗ್ರಹಿಸಬೇಕು, ಕೆಟ್ಟ ಆಲೋಚನೆಗಳನ್ನು ಮೆಟ್ಟಿ ನಿಲ್ಲಬೇಕು, ಆಸೆಗಳನ್ನು ಅದುಮಬೇಕು, ಕೆಟ್ಟ ಮಾತುಗಳನ್ನು ತಡೆಹಿಡಿಯಬೇಕು, ಯಾವುದೇ ಉದಾತ್ತ ಬಯಕೆಗಳನ್ನು ಉತ್ತೇಜಿಸಬೇಕು, ಮನಸ್ಸಿನ ದೃಢತೆ, ಬಲ, ಶಕ್ತಿ, ಒಳ್ಳೆಯ ನಡತೆ ಮತ್ತು ಶಾಶ್ವತ ಶಿವ ಸೌಂದರ್ಯವನ್ನು ಪಡೆಯುವ ದೈವೀ ಆಲೋಚನೆಗಳನ್ನು ಹೆಚ್ಚಿಸಿಕೊಳ್ಳಬೇಕು."

* "ಈಗಲೇ ಕಾರ್ಯಕ್ಷೇತ್ರಕ್ಕೆ ಧುಮುಕು. ಈಗಲೇ ನಿನ್ನನ್ನು ನೀನು ತಿಳಿದುಕೋ. ಈಗಲೇ ಅರ್ಥೈಸಿಕೋ. ಈಗಲೇ ಸಂತೋಷವಾಗಿರುವ ಹಾದಿಯನ್ನು ಕಂಡುಕೋ."

**ಚಿನ್ಮಯ ಮಿಶನ್:**

೧೯೫೧ರಲ್ಲಿ ಸ್ವಾಮೀ ಚಿನ್ಮಯಾನಂದರು ಚೆನ್ನೈನಲ್ಲಿ ಚಿನ್ಮಯ ಮಿಶನ್ ಸ್ಥಾಪಿಸಿದರು. ಇದೊಂದು ಆಧ್ಯಾತ್ಮಿಕ ಚಳುವಳಿಯಾಗಿದ್ದು, ಜನಸಾಮಾನ್ಯರ ಅಧ್ಯಾತ್ಮಿಕ ಪ್ರಗತಿಯನ್ನು ಗುರಿಯಾಗಿಟ್ಟುಕೊಂಡಿದೆ. ಮೊಗಲರು, ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ನೂರಾರು ವರ್ಷಗಳಿಂದ ನಮ್ಮನ್ನಾಳಿ ಹಿಂದೂಗಳ ನೈತಿಕ ಅಧಃಪತನಕ್ಕೆ ಕಾರಣರಾಗಿದ್ದಾರೆ. ಹಾಗೆ ಧೈರ್ಯಗೆಟ್ಟ ಹಿಂದೂಗಳಿಗೆ ವೇದಾಂತದ ಸಂದೇಶವನ್ನು ತುಂಬಿ ಅವರ ಅಭ್ಯುತ್ಥಾನ ಸಾಧಿಸುವುದು ಚಿನ್ಮಯ ಮಿಶನ್ ಸ್ಥಾಪನೆಯ ಹಿಂದಿನ ಉದ್ದೇಶವಾಗಿದೆ. ಋಷಿ ಮುನಿಗಳಿಂದ ಪ್ರಣೀತವಾದ ವೇದ ವೇದಾಂತದ ಸಾರವನ್ನು ಇಂಗ್ಲಿಷ್ ಹಾಗೂ ಸ್ಥಳೀಯ ಭಾಷೆಗಳಲ್ಲಿ ಪುಸ್ತಕ ಹಾಗೂ ಉಪನ್ಯಾಸಗಳ ಮೂಲಕ ಪ್ರಚುರಪಡಿಸುತ್ತ ಬಂದಿದೆ. ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸುವುದು, ಅವನ್ನು ಪ್ರಕಟಿಸುವುದು ಮೊದಲಾದ ಕೆಲಸಗಳನ್ನು ಮಾಡುತ್ತಿದೆ.

ಭಗವದ್ಗೀತೆ, ಉಪನಿಷತ್ತುಗಳ ಪ್ರಚಾರ ಮೊದಲಾದವು ಅವುಗಳಲ್ಲಿ ಸೇರಿವೆ. ಭಾರತದಾದ್ಯಂತ ಚಿನ್ಮಯ ಮಿಶನ್ ಆಶ್ರಯದಲ್ಲಿ ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ಟ್ರಸ್ಟ್‌ಗಳು, ಸೇವಾಯೋಜನೆಗಳು ಕಾರ್ಯಾಚರಿಸುತ್ತವೆ. ಭಾರತದ ಪ್ರಮುಖ ನಗರಗಳಲ್ಲಿ ನೂರಾರು "ಜ್ಞಾನಯಜ್ಞ"ಗಳು ನಡೆದಿವೆ. ಅವುಗಳಿಂದಾಗಿ ಲಕ್ಷಾಂತರ ಭಾರತೀಯರು ಹಾಗೂ ವಿದೇಶೀಯರು ಆಧ್ಯಾತ್ಮಿಕ ಅನುಭೂತಿಯ ಪ್ರಭಾವ ಪ್ರೇರಣೆ ಪಡೆದುಕೊಂಡಿದ್ದಾರೆ. ಚಿನ್ಮಯ ಮಿಶನ್‌ನ ಕಾರ್ಯಭಾರಗಳನ್ನು ವಿದೇಶಗಳಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ೧೯೭೫ರಲ್ಲಿ "ಚಿನ್ಮಯ ಮಿಶನ್–ಪಶ್ಚಿಮ" ಎಂಬ ವಿಭಾಗವೊಂದನ್ನು ತೆರೆಯಲಾಗಿದೆ.



**ಶ್ರೀಸ್ವಾಮೀ ಚಿನ್ಮಯಾನಂದ (೧೯೧೬–೧೯೯೩) ತ್ರಿಶ್ಯೂರ್, ಕೇರಳ:**

ಶ್ರೀಮಂತ ನಾಯರ್ ಕುಟುಂಬದಲ್ಲಿ ಹುಟ್ಟಿ ಕಲೆ ಮತ್ತು ಕಾನೂನು ವಿಷಯದಲ್ಲಿ ಉನ್ನತ ಶಿಕ್ಷಣ ಹೊಂದಿ, ಆಕರ್ಷಕವಾದ ಉದ್ಯೋಗ ರಂಗಕ್ಕೆ ಇನ್ನೇನು ಕಾಲಿಡಬೇಕು ಎಂಬ ಹಂತದಲ್ಲಿ ಎಲ್ಲವನ್ನೂ ತ್ಯಜಿಸಿ ಈ ಯುವಕ ಹಿಮಾಲಯ ಸೇರಿ ಆಧ್ಯಾತ್ಮಿಕ ರಂಗ ಪ್ರವೇಶಿಸಿಬಿಟ್ಟ. ಉತ್ತರ ಕಾಶಿಯ ಸ್ವಾಮೀ ತಪೋವನ ಮಹಾರಾಜ್ ಅವರ ಶಿಷ್ಯತ್ವ ಸ್ವೀಕರಿಸಿ ಸನ್ಯಾಸಿಯಾದ. ಅನಂತರ ದಿವ್ಯ ಜೀವನ ಸಂಘದ ಸ್ವಾಮೀ ಶಿವಾನಂದರ ಕೈಕೆಳಗೆ ತರಬೇತು ಪಡೆದ. ಉಪನಿಷತ್ ಮತ್ತು ಭಗವದ್ಗೀತೆಗಳ ಸಾರವನ್ನೆಲ್ಲ ಕರತಲಾಮಲಕ ಮಾಡಿಕೊಂಡು ಅಸ್ಖಲಿತವಾದ ಇಂಗ್ಲಿಷ್ ಭಾಷೆಯಲ್ಲಿ ಲಕ್ಷಾಂತರ ಮಂದಿ ಸಮ್ಮೋಹಗೊಳ್ಳುವಂತೆ ಉಪನ್ಯಾಸ ನೀಡಬಲ್ಲ ಸಾಮರ್ಥ್ಯ ಹೊಂದಿದ ಚಿನ್ಮಯಾನಂದರು ಅದೇ ಕಾರಣಕ್ಕೆ ದೇಶ ವಿದೇಶಗಳಲ್ಲಿ ಲಕ್ಷಾಂತರ ಅನುಯಾಯಿಗಳನ್ನು ಹೊಂದಿದ್ದಾರೆ. 'ಜ್ಞಾನಯಜ್ಞ' ಎಂಬ ಕಾರ್ಯಕ್ರಮಗಳ ಮೂಲಕ ಋಷಿ ಮುನಿಗಳಿಂದ ಪ್ರಣೀತವಾದ ಆಧ್ಯಾತ್ಮಿಕ ದಿವ್ಯಾಮೃತವನ್ನು ದುಃಖಾರ್ತ ಜನರ ಮನೆ ಬಾಗಿಲಿಗೆ ಕೊಂಡೊಯ್ದು ಸಾಂತ್ವನ ನೀಡಬಲ್ಲ ಸಾಮರ್ಥ್ಯವಿದ್ದುದರಿಂದಲೇ ಅವರಿಗೆ ಲಕ್ಷಾಂತರ ಜನರನ್ನು ಆಕರ್ಷಿಸಲು ಸಾಧ್ಯವಾಯಿತು. ೧೯೫೧ ಮತ್ತು ೧೯೯೩ರ ಮಧ್ಯೆ ಅಂತಹ ೫೦೦ ಜ್ಞಾನ ಯಜ್ಞಗಳನ್ನು ಅವರು ನಡೆಸಿಕೊಟ್ಟರು! ಅವರು ಒಬ್ಬ ಪಾಂಡಿತ್ಯಪೂರ್ಣ ಲೇಖಕರೂ ಹೌದು. ಉಪನಿಷತ್ ಮತ್ತು ಭಗವದ್ಗೀತೆಗೆ ಅವರು ಬರೆದ ಭಾಷ್ಯಗಳು ಉನ್ನತ ಸ್ಥಾನದಲ್ಲಿವೆ ಮತ್ತು ಜಗತ್ತಿನಾದ್ಯಂತ ಅವಕ್ಕೆ ಓದುಗರ ಬಳಗವಿದೆ. ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಹಿರಿಮೆಗರಿಮೆಗಳು ದೇಶ ವಿದೇಶಗಳಲ್ಲಿ ಮತ್ತೊಮ್ಮೆ ಮುನ್ನೆಲೆಗೆ ಬರುವಂತಾಯಿತು. ಅವರ ಉಪದೇಶದ ಸಾರವೆಂದರೆ–

* "ಆತ್ಮಕ್ಕೆ ಪ್ರಾರ್ಥನೆ ಅವಶ್ಯಕವಾಗಿರುವಷ್ಟು ದೇಹಕ್ಕೆ ಆಹಾರ ಅವಶ್ಯಕವಾಗಿಲ್ಲ."
* "ನೀನೇನು ಪಡೆದುಕೊಳ್ಳಬಲ್ಲೆ ಎಂಬುದಕ್ಕಿಂತ ನೀನೇನು ಕೊಡಬಲ್ಲೆ ಎಂಬುದರಲ್ಲೇ ಹೆಚ್ಚು ಸಂತೋಷ ಅಡಗಿದೆ."
* "ಅಂತಿಮ ತೀರ್ಪಿನ ಸಂದರ್ಭ ಬಂದಾಗ ನೀನೇನು ಓದಿದ್ದೀಯಾ ಎಂದು ಕೇಳುವುದಿಲ್ಲ, ನೀನೇನು ಮಾಡಿದ್ದೀಯಾ ಎಂದು ಕೇಳಲಾಗುತ್ತದೆ."
* "ವಿನಯ ಎಂಬುದು ಅದ್ಭುತವಾದದ್ದು. ಯಾವ ಕ್ಷಣ ಅದು ನಿಮ್ಮಲ್ಲಿ ಇರುವ ಬಗ್ಗೆ ಚಿಂತಿಸುತ್ತೀರೋ ಆ ಕ್ಷಣವೇ ಅದು ಮಾಯವಾಗಿಬಿಡುತ್ತದೆ."

**ಕೃಷ್ಣ ಪರಿಜ್ಞಾನದ ಅಂತಾರಾಷ್ಟ್ರೀಯ ಸಂಘ (ಇಸ್ಕಾನ್):**

ಅಮೆರಿಕಾ ಸಂಯುಕ್ತ ಸಂಸ್ಥಾನದ ನ್ಯೂಯಾರ್ಕ್ ಎಂಬಲ್ಲಿ ೧೯೬೬ರಲ್ಲಿ ಸ್ವಾಮೀ ಶ್ರೀಲಾ ಪ್ರಭುಪಾದ ಎಂಬವರು ಕೃಷ್ಣ ಪರಿಜ್ಞಾನದ ಅಂತಾರಾಷ್ಟ್ರೀಯ

ಸಂಸ್ಥೆ(ಇಸ್ಕಾನ್ ಎಂದೇ ಪ್ರಸಿದ್ಧ)ಯನ್ನು ಹುಟ್ಟು ಹಾಕಿದರು. ಹರೇ ಕೃಷ್ಣ ಪಂಥ ಎಂದೂ ಇದನ್ನು ಕರೆಯುತ್ತಾರೆ. ಹಿಂದೂ ಧರ್ಮದ ಬಹುಪ್ರಸಿದ್ಧ ಗ್ರಂಥ ಶ್ರೀಮದ್ ಭಗವದ್ಗೀತೆಯ ಸಾರವು ಈ ತತ್ವದ ತಳಪಾಯ. ಕೃಷ್ಣ ಪರಿಜ್ಞಾನವನ್ನು ವಿಶ್ವದೆಲ್ಲೆಡೆ ಹರಡಲು ಸಂತ ಚೈತನ್ಯ ಎಂಬವರು ಕೃಷ್ಣನಾಮ ಸಂಕೀರ್ತನೆಗಳನ್ನು ಸಾಮೂಹಿಕವಾಗಿ ಭಜಿಸುವ ಪರಿಪಾಠವನ್ನು ಬಳಕೆಗೆ ತಂದರು. ಆ ಮಂತ್ರವು "ಹರೇಕೃಷ್ಣ, ಹರೇಕೃಷ್ಣ, ಕೃಷ್ಣ ಕೃಷ್ಣ ಹರೇಹರೇ, ಹರೇರಾಮ ಹರೇರಾಮ, ರಾಮ ರಾಮ ಹರೇಹರೇ" ಎಂಬುದಾಗಿದೆ.

**ಶ್ರೀ ಶ್ರೀಲ ಪ್ರಭುಪಾದ (೧೮೯೬–೧೯೭೭), ಕೊಲ್ಕತ್ತಾ, ಪಶ್ಚಿಮಬಂಗಾಳ:**

ವೈಷ್ಣವ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಈತನಿಗೆ ಒಳ್ಳೆಯ ಶಿಕ್ಷಣ ದೊರೆಯಿತು. ವಿವಾಹಿತನೂ ಆದ. ಅತಿದೊಡ್ಡ ಧಾರ್ಮಿಕ ವಿದ್ವಾಂಸನಾಗಿ ರಾಜ್ಯದ ಹಲವು ಕಡೆಗಳಲ್ಲಿ ಒಟ್ಟು ೬೪ ಗೌಡಿಯ ಮಠಗಳನ್ನು (ವೇದ ಸಂಸ್ಥೆ) ಸ್ಥಾಪಿಸಿದ. ಒಮ್ಮೆ ಭಕ್ತಿ ಸಿದ್ಧಾಂತ ಸರಸ್ವತಿ ಎಂಬ ಇನ್ನೊಬ್ಬ ಕಿರಿಯ ಪಂಡಿತ ಭೇಟಿಯಾದ ಹಾಗೂ ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿಕೊಂಡ. ಹೀಗಿರಲು, ೧೯೫೯ರ ಒಂದು ದಿನ ತನ್ನ ಗುರುಗಳ ಹಿತೋಪದೇಶದಂತೆ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಪೂರ್ಣಾವಧಿ ಅಧ್ಯಯನ ಮತ್ತು ಬರವಣಿಗೆಯಲ್ಲಿ ತೊಡಗಿಸಿಕೊಂಡ.

ವ್ಯಾಪಕ ಪ್ರವಾಸ ಮಾಡಿದ ಶ್ರೀಲ ಪ್ರಭುಪಾದ ಒಬ್ಬ ಅದ್ಭುತ ಸಾಹಿತಿಯೂ ಹೌದು. ಇವರ ಬರವಣಿಗೆಯು ವೇದ, ತತ್ವಶಾಸ್ತ್ರ, ಧರ್ಮ, ಸಾಹಿತ್ಯ, ಸಂಸ್ಕೃತಿ ಹೀಗೆ ಆರ್ಷ ಪರಂಪರೆಯ ಎಲ್ಲವನ್ನೂ ಒಳಗೊಂಡಿದೆ. ಐವತ್ತಕ್ಕಿಂತ ಹೆಚ್ಚು ಸಂಪುಟಗಳಲ್ಲಿ ಬರವಣಿಗೆ ವ್ಯಾಪಿಸಿಕೊಂಡಿದೆ. 'ಶ್ರೀಮದ್ ಭಾಗವತಮ್' ಅಥವಾ 'ಭಾಗವತ ಪುರಾಣ'ಕ್ಕೆ ಬರೆದ ಭಾಷ್ಯವೇ ಹದಿನೆಂಟು ಸಂಪುಟಗಳಲ್ಲಿ ವ್ಯಾಪಿಸಿಕೊಂಡಿದೆ. ಇದು ಹಲವಾರು ಭಾಷೆಗಳಿಗೆ ಅನುವಾದವಾಗಿವೆ. 'ಭಗವದ್ಗೀತೆ' (ಮೂಲದಲ್ಲಿರುವಂತೆ) ಮತ್ತು 'ಶ್ರೀ ಚೈತನ್ಯ ಚರಿತಾಮೃತ' (ಒಂಬತ್ತು ಸಂಪುಟಗಳಲ್ಲಿ) ಮೊದಲಾದವು ಅವರ ಇತರ ಪ್ರಮುಖ ಕೃತಿಗಳು. ಹಲವಾರು ಭಾಷ್ಯ ಕೃತಿಗಳು (ವಿಶ್ಲೇಷಣೆ ವಿಮರ್ಶೆ), ಸಂಕ್ಷಿಪ್ತ ಅಧ್ಯಯನ ಕೃತಿಗಳು, ಅನುವಾದಗಳು, ಭಾರತದ ಧಾರ್ಮಿಕ ಮತ್ತು ತಾತ್ವಿಕ ಗ್ರಂಥ ಶ್ರೇಣಿಗಳ ಸಂಗ್ರಹಾನುವಾದಗಳು ಲೆಕ್ಕವಿಲ್ಲದಷ್ಟು ಇವೆ. ಕೊಲ್ಕತ್ತಾದಲ್ಲಿರುವ ಗೌಡಿಯ ಸಮಾಜವು "ಭಕ್ತಿ ವೇದಾಂತ" ಎಂಬ ಬಿರುದನ್ನಿತ್ತು ಅವರನ್ನು ಸನ್ಮಾನಿಸಿತು. ಮುಂಬಯಿಯಲ್ಲಿ "ಭಕ್ತಿ ವೇದಾಂತ ಬುಕ್ ಟ್ರಸ್ಟ್" ಸ್ಥಾಪನೆಯಾಯಿತು. ಆ ಟ್ರಸ್ಟ್ ಕೇವಲ ಪ್ರಭುಪಾದರ ಗ್ರಂಥಗಳನ್ನಷ್ಟೇ ಪ್ರಕಟಿಸಲು ಸೀಮಿತವಾಗಿದೆ. ಪ್ರಪಂಚದಾದ್ಯಂತ 'ಇಸ್ಕಾನ್' ತನ್ನ ವ್ಯಾಪಕ ಜಾಲದಲ್ಲಿ ನಡೆಸುತ್ತಿರುವ ನೂರಾರು ಆಶ್ರಮಗಳನ್ನು, ಶಾಲೆಗಳನ್ನು, ದೇವಸ್ಥಾನಗಳನ್ನು,



ಪ್ರಕಟಣೆಗಳನ್ನು, ಪ್ರಕಾಶನ ಸಂಸ್ಥೆಗಳನ್ನು 'ಇಸ್ಕಾನ್' ಅಥವಾ ಹರೇಕೃಷ್ಣ ಚಳವಳಿಯ ಅನುಯಾಯಿಗಳು ನಡೆಸಿಕೊಂಡು ಹೋಗುತ್ತಿದ್ದಾರೆ. ಪ್ರಪಂಚದಾದ್ಯಂತ ಅವರಿಗೆ ಶಿಷ್ಯವರ್ಗವಿದೆ.

* ಹರೇಕೃಷ್ಣ ಮಂತ್ರ ಜಪವೂ ಐಂದ್ರಿಕ, ಮಾನಸಿಕ ಮತ್ತು ಬೌದ್ಧಿಕ ಮುಂತಾದ ಕೆಳಗಿನ ಹಂತಗಳನ್ನು ಮೀರಿ ನೇರವಾಗಿ ಆಧ್ಯಾತ್ಮಿಕ ಸ್ತರದಿಂದ ಮಾಡಲಾಗುತ್ತದೆ.

* "ಕೃಷ್ಣ ಪರಿಜ್ಞಾನದ ರುಚಿ ಹತ್ತಿಸಿಕೊಂಡು ಆ ದಿಸೆಯಲ್ಲಿ ಯಾರು ಮುಂದುವರಿದು ಭಗವಾನ್ ಕೃಷ್ಣನ ದೈವಿಕ ಸೌಂದರ್ಯದಲ್ಲಿ ಮುಳುಗುತ್ತಾರೋ ಅಂಥವರಿಗೆ ಮತ್ತೆ ಪ್ರಾಪಂಚಿಕ ವಿಷಯಗಳಲ್ಲಿ ವ್ಯಾಮೋಹ ಉಳಿಯುವುದಿಲ್ಲ."

* "ಯಾವ ಜೀವಿ ಕೃಷ್ಣ ಪರಿಜ್ಞಾನದ ಸಂಪರ್ಕಕ್ಕೆ ಬಂದು ಆ ಚಳವಳಿಯಲ್ಲಿ ಗುರುತಿಸಿಕೊಳ್ಳಲು ಬಯಸುತ್ತಾನೋ ಆಗ ಎಲ್ಲರ ಹೃದಯದಲ್ಲಿ ನೆಲೆಸಿರುವ ಆ ಕೃಷ್ಣ ಭಗವಾನನು ದೈವಿಕ ಉತ್ತುಂಗತೆಯ ದರ್ಶನ ಮಾಡಿಸಿಬಿಡುತ್ತಾನೆ."

* "ಎಲ್ಲಿಯವರೆಗೆ ದೇಹದಲ್ಲಿ ಆತ್ಮದ ಉಪಸ್ಥಿತಿ ಇರುತ್ತದೋ ಅಲ್ಲಿಯವರೆಗೆ ಪ್ರಯೋಗಾತ್ಮಕವಾಗಿ ಆತನ ಉಪಸ್ಥಿತಿಯನ್ನು ಪರಿಶೀಲಿಸಬೇಕಾಗಿಲ್ಲ. ಇದು ಶ್ರುತಿಸಿದ್ಧವಾದುದು."

* "ಮನಸ್ಸಿನಲ್ಲಿ ಒಂದು ನಿರ್ವಾತ ಪ್ರದೇಶವನ್ನು ನಿರ್ಮಿಸಲು ಪ್ರಯತ್ನಿಸುವುದು ಕೃತಕವಾದುದು. ಆ ನಿರ್ವಾತ ಹಾಗೆಯೇ ಉಳಿಯುವುದಿಲ್ಲ. ಬದಲಾಗಿ ಯಾರು ಸದಾ ಕೃಷ್ಣನನ್ನು ಧ್ಯಾನಿಸುತ್ತಿರುತ್ತಾರೋ, ಎಷ್ಟು ಉತ್ತಮವಾಗಿ ಆತನ ಸೇವೆ ಮಾಡಬಹುದೆಂದು ಚಿಂತಿಸುತ್ತಿರುತ್ತಾರೋ ಅಂಥವರು ತಮ್ಮ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ."

* "ವಾಸ್ತವವಾಗಿ ಈ ಚಳವಳಿಯ ಮೂಲಕರ್ತೃ ಸ್ವತಃ ಕೃಷ್ಣ ಭಗವಾನನೇ ಆಗಿದ್ದಾನೆ. ಬಹಳ ಹಿಂದಿನ ಕಾಲದಿಂದ ಇದು ತೊಡಗಿರುವುದುದಾದ್ದರಿಂದ ಶಿಷ್ಯರ ಮುಖೇನ ಅದು ಈ ಭೂಮಿಗೆ ಹರಿದು ಬಂದಿದೆ."

* * * *

# ೪. ಜೀವಂತ ದೇವ ಮಾನವರು

ಪ್ರಾಪಂಚಿಕ ಜೀವನದ ಸಂಕಷ್ಟದಲ್ಲಿ ಮುಳುಗಿರುವ ಅಥವಾ ಹುಟ್ಟು ಸಾವುಗಳೆಂಬ ತಿರುಗಣೆಯಲ್ಲಿ ಸಿಲುಕಿರುವ ಮಾನವರನ್ನು ಕೈಹಿಡಿದೆತ್ತಿ ಉದ್ಧರಿಸಲು ಮಹಾತ್ಮರು ಅಥವಾ ದೈವಮಾನವರು ನಮ್ಮ ನಡುವೆ ಹುಟ್ಟುತ್ತಿರುತ್ತಾರೆ. ಅಂತಹ ಎರಡು ದಿವ್ಯಾತ್ಮಗಳು ಅಥವಾ ದೇವರುಗಳು ರಕ್ತ ಮಾಂಸಗಳ ಸಹಿತವಾಗಿ ಕೇವಲ ನರಮನುಷ್ಯನಾಗಿ ನಮಗೆ ಕರುಣೆಯ ದೈವ ಪ್ರೀತಿಯನ್ನು ಮತ್ತು ಮಂಗಳಕರ ಬೆಳಕನ್ನು ಹರಿಸುತ್ತಿದ್ದಾರೆ. ಒಬ್ಬರು–

**ಶ್ರೀ ಸತ್ಯಸಾಯಿ ಬಾಬಾ (೧೯೨೬ರಲ್ಲಿ ೮೦ ವರ್ಷ) ಪೆನುಗೊಂಡ ತಾಲೂಕು, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ:**

ಪುಟ್ಟಪರ್ತಿ ಎಂಬ ಗ್ರಾಮದಲ್ಲಿ ಪೆದ್ದರಾಜು ಮತ್ತು ಈಶ್ವರಮ್ಮ ದಂಪತಿಗಳಿಗೆ ಮಗನಾಗಿ ಹುಟ್ಟಿದ ಈತನಿಗೆ ಸತ್ಯನಾರಾಯಣ ಎಂಬ ನಾಮಕರಣವಾಯಿತು. ಆರಂಭಿಕ ಶಿಕ್ಷಣವನ್ನು ಅದೇ ಹಳ್ಳಿಯಲ್ಲಿ, ಅನಂತರ ಬುಕ್ಕಪಟ್ಟಣ ಹಾಗೂ ಉರುವ ಕೊಂಡದಲ್ಲಿ ಹೆಚ್ಚಿನ ಶಿಕ್ಷಣ ದೊರೆಯಿತು. ಶಾಲೆಯಲ್ಲಿ ಓದುತ್ತಿರುವಾಗ, ಅಂದರೆ ತನ್ನ ೧೪ನೇ ವಯಸ್ಸಿನಲ್ಲಿ ೧೯೪೦ರಲ್ಲಿ ಇದ್ದಕ್ಕಿದ್ದಂತೆ ಒಂದು ದಿನ "ನಾನು ನಿಮ್ಮ ಸತ್ಯ ಅಲ್ಲ, ನಾನು ಸಾಯಿಬಾಬಾ" ಎಂದು ಘೋಷಿಸಿದ ಅವರ ಆತ್ಮವು ಶಿರಡಿಯಲ್ಲಿ ೧೯೧೮ರಲ್ಲಿ ಸಮಾಧಿ ಹೊಂದಿದ ಸಾಯಿಬಾಬಾನದಾಗಿತ್ತು. (ಸಾಯಿ=ದೇವರು; ಆಯಿ=ಅಮ್ಮ; ಬಾಬಾ=ಅಪ್ಪ). ಕೆಲವರಿಗೆ ಅವರೇ ತಾಯಿಯಾಗಿದ್ದರು. ಭಾರತದ ಒಳಗಿನ ಮತ್ತು ಹೊರಗಿನ ಲಕ್ಷಾಂತರ ಜನರಿಗೆ ಆತ ದೇವರಾಗಿದ್ದರು. ಮನುಷ್ಯನ ರೂಪದಲ್ಲಿ ಈ ಹಿಂದೆ ಅವತಾರವೆತ್ತಿ ಬಂದಿದ್ದ ಯಾರಿಗೂ ಭರತ ಖಂಡದಲ್ಲಷ್ಟೇ ಅಲ್ಲ; ವಿಶ್ವದ ಎಲ್ಲ ಖಂಡಗಳಲ್ಲೂ ಸಾಯಿಬಾಬಾರಿಗಿರುವಷ್ಟು ಅನುಯಾಯಿಗಳು ಇರಲಿಲ್ಲ. ವಿಶ್ವದ ಎಲ್ಲ ಭಾಷೆ, ಧರ್ಮ, ಮತ–ಪಂಗಡ, ಲಿಂಗಭೇದವಿಲ್ಲದೆ ಸಮಾಜದ ಎಲ್ಲ ಸ್ತರಗಳ ಭಕ್ತರೂ ಅವರಿಗಿದ್ದಾರೆ. ಸಾಯಿಬಾಬಾ ಹೇಳುತ್ತಿದ್ದರು, "ದೇವರೆಡೆಗೆ ನೀವು ಒಂದು ಹೆಜ್ಜೆ ಇಡಿ; ಮುಂದಿನ ಹತ್ತು ಹೆಜ್ಜೆಗಳನ್ನು ಅವನೇ ಕರೆದೊಯ್ಯುತ್ತಾನೆ." ವಿಶ್ವದ ಯಾವುದೇ ಮೂಲೆಯ ಜನಸಾಮಾನ್ಯನಿಗೆ ತನ್ನೆಡೆಗೆ ಬರಲು ಆಕರ್ಷಕವಾಗಿ ಕೊಟ್ಟ ಹೇಳಿಕೆಯೇನೂ ಅಲ್ಲ ಅದು. ಹುಟ್ಟು ಸಾವಿನ ಅರ್ಥವನ್ನು ತಿಳಿಯಲು



ಮತ್ತು ಅದರಿಂದ ಹೊರಬರಲು ಕೊಟ್ಟ ಎಚ್ಚರಿಕೆಯ ಕರೆಯಾಗಿತ್ತು. ತನ್ನ ನಿತ್ಯ ಬದುಕಿನಲ್ಲಿ ನೀತಿ ಸಂಹಿತೆಯನ್ನು ಅಳವಡಿಸಿಕೊಂಡು ದೇವರೆಡೆಗೆ ಸಾಗಲು ಯೋಜನಾಬದ್ಧವಾದ ರೂಪುರೇಷೆ ಸಿದ್ಧಪಡಿಸಲು ಕೊಟ್ಟ ಕರೆಗಂಟೆಯಾಗಿತ್ತು ಅದು.

ಸಾಯಿಬಾಬಾ ಅವರ ಇನ್ನೊಂದು ಪ್ರಸಿದ್ಧ ಹೇಳಿಕೆ ಎಂದರೆ: "ಬರಿಗೈಯಿಂದ ನನ್ನೆಡೆಗೆ ಬನ್ನಿರಿ. ದಯೆಯ ಕೊಡುಗೆಯಿಂದ ಆ ಕೈಗಳನ್ನು ನಾನು ತುಂಬಿಸುತ್ತೇನೆ." ಅದು ಭರವಸೆ ಮತ್ತು ಕೊಡುಗೆಗಳ ಪರಮೋದ್ದೇಶದಿಂದ ಹೃದಯಪೂರ್ವಕವಾಗಿ ಕೊಡುವ ವಚನ. ಭರವಸೆಯೆಂದರೆ ಈ ಬದುಕಿನ ಜಂಜಡ ಕಷ್ಟ ಕೋಟಲೆಗಳಿಂದ ಹೊರಬರುವ ಹಾದಿ ಮತ್ತು ಕೊಡುಗೆಯೆಂದರೆ ದೇವರ ಸಾಕ್ಷಾತ್ಕಾರ.

ಅವರು ಪವಾಡಗಳ ಪುರುಷ. ತಮ್ಮ ಹತ್ತನೇ ವರ್ಷದಿಂದಲೇ ಬಹಳಷ್ಟು ಪವಾಡಗಳನ್ನು ಮೊದಲು ಆರಂಭಿಸಿದರು. ದೈನಿಕದ ಹತ್ತಾರು ವಸ್ತುಗಳನ್ನು ಭಕ್ತರ ಅಪೇಕ್ಷೆಯ ಮೇರೆಗೆ ಅಥವಾ ಕೆಲವೊಮ್ಮೆ ಅವರನ್ನು ಚಕಿತಗೊಳಿಸಲು ಅಥವಾ ನಂಬುವಂತೆ ಮಾಡಲು ಇಂತಹ ಪವಾಡಗಳನ್ನು ಮಾಡುತ್ತಿದ್ದರು. ಗಾಳಿಯಿಂದ ಕೆಲವೊಮ್ಮೆ, ನೆಲದೊಳಗಿಂದ ಯಾವುದೋ ವಸ್ತು ತನ್ನ ಕೈಗೆ ಬರುವಂತೆ ಪವಾಡ ಮೆರೆಯುತ್ತಿದ್ದರು. ಭಕ್ತರ ಮನೆಗಳಲ್ಲಿ ವಿಭೂತಿ, ಕುಂಕುಮ, ಗಂಧ, ಜೇನು ಮೊದಲಾದ ಪೂಜಾ ಪ್ರಸಾದಗಳು ಸಾಯೀಬಾಬಾರ ಭಾವಚಿತ್ರದಿಂದ ಉದುರುತ್ತಿದ್ದವು. ಎಲ್ಲ ಊಹೆ ಮತ್ತು ನಂಬಿಕೆಗಳನ್ನು ಮೀರಿ ಎಷ್ಟೋ ಬಾರಿ ಅಪಘಾತಗಳಲ್ಲಿ ತೀವ್ರವಾಗಿ ಗಾಯಗೊಂಡವರನ್ನು ಗಂಭೀರ ಕಾಯಿಲೆಗಳಿಗೆ ತುತ್ತಾದವರನ್ನು, ಜೀವನದ ಸಂಕಷ್ಟಮಯ ಸನ್ನಿವೇಶಗಳಿಂದಾಗಿ ಮುಂದೆ ದಾರಿ ಕಾಣದಂತಾದವರನ್ನು ಸಾಯಿಬಾಬಾ ಪವಾಡಸದೃಶವಾಗಿ ಪಾರುಮಾಡಿದ್ದುಂಟು. ಪರಮ ಭಕ್ತರ ಹೃದಯದ ಆಸೆಗಳನ್ನು ಸಾಯಿಬಾಬಾ ಪೂರೈಸಿದ ನಿದರ್ಶನಗಳಿವೆ.

ಸನಾತನ ಧರ್ಮದ ಮತ್ತು ಇತರ ಧರ್ಮಗ್ರಂಥಗಳ ಕುರಿತು ಸಾಯಿಬಾಬಾರಿಗೆ ಆಳವಾದ ಪಾಂಡಿತ್ಯವಿತ್ತು. ತಾತ್ವಿಕವಾಗಿ ಅವುಗಳ ವಿಶ್ಲೇಷಣೆ ಮಾಡುವ ಸಾಮರ್ಥ್ಯವಿತ್ತು.

ಜನಸಾಮಾನ್ಯರ ಬದುಕನ್ನು ಎತ್ತರಿಸಲು ಸಾಯಿಬಾಬಾ ಪಟ್ಟ ಪ್ರಯತ್ನ ಅಷ್ಟಿಷ್ಟಲ್ಲ. ಸಾವಿರಾರು ಹಳ್ಳಿಗಳಿಗೆ ಉಚಿತವಾಗಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿದರು. ಉಚಿತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಮತ್ತು ಅತ್ಯಂತ ಕಡಿಮೆ ಖರ್ಚಿನಲ್ಲಿ ಅಥವಾ ಉಚಿತವಾಗಿ ಆಸ್ಪತ್ರೆಗಳನ್ನು ಕಟ್ಟಿಸಿಕೊಟ್ಟರು. ಈ ಸಾಮಾಜಿಕ ಕೆಲಸಗಳಿಗೆ ಸಾಟಿಯಾದುದು ಯಾವುದೂ ಇಲ್ಲ. "ಯಾವಾಗಲೂ ಸಹಾಯ ಮಾಡು; ಯಾರನ್ನೂ ನೋಯಿಸದಿರು" ಎಂಬ ಅವರ ಘೋಷಣೆ ಪ್ರಸಿದ್ಧವಾಗಿದೆ. ಶಾಂತಿ, ಸಮಾಧಾನ ಮತ್ತು ಧೈರ್ಯ ಅವರು ನೀಡುತ್ತಿದ್ದ ಆಧ್ಯಾತ್ಮಿಕ ಅಭಯವಾಗಿದೆ.

ಅವರು ಹೇಳುತ್ತಿದ್ದ ವಿಚಾರಗಳು ಸನಾತನ ಧರ್ಮದ ಸಾರವೇ ಆಗಿತ್ತು. ಹೇಳುತ್ತಿದ್ದ ವಿಧಾನ ಮಾತ್ರ ನೂತನ. (೨೦೧೧ರಲ್ಲಿ ಇವರು ಸಮಾಧಿಸ್ಥರಾದರು.)

ಭೂಮಿಯ ಮೇಲಿರುವ ಇನ್ನೊಬ್ಬ ಆಧ್ಯಾತ್ಮಿಕ ಮಹಾತ್ಮ ಅಥವಾ ದೇವತೆಯೆಂದರೆ:–

**ಮಾತಾ ಅಮೃತಾನಂದಮಯಿ ದೇವಿ (೧೯೫೩), ವಲ್ಲಿಕ್ಕಡವು, ಕೊಲ್ಲಂ ಜಿಲ್ಲೆ, ಕೇರಳ:**

ಬೆಸ್ತರ ಕುಟುಂಬದಲ್ಲಿ ಹುಟ್ಟಿದ ಈ ಬಡಹುಡುಗಿ ತನ್ನ ೯ನೇ ವರ್ಷ ವಯಸ್ಸಿನವರೆಗೆ ಶಾಲೆ ಕಲಿತಳು. ಅನಂತರ ಬಡತನದಿಂದಾಗಿ ಶಿಕ್ಷಣ ಮುಂದುವರಿಸಲಾಗಲಿಲ್ಲ. ಚಿಕ್ಕವಳಿರುವಾಗಲೇ ತುಂಬಾ ಹೊತ್ತು ಹಾಡುತ್ತ ಕುಳಿತಿರುತ್ತಿದ್ದ ಈಕೆ, ಅದೇ ಸ್ಥಿತಿಯಲ್ಲಿ ಧ್ಯಾನಸ್ಥಳಾಗಿ ಬಿಡುತ್ತಿದ್ದಳು. ತನ್ನ ಜಾತಿಗೆ ಅಸಹಜವಾಗಿ ವರ್ತಿಸುತ್ತಿದ್ದ ಆಕೆಯ ವರ್ತನೆ ಕುಟುಂಬಸ್ಥರಿಗೆ ಮತ್ತು ಸಂಬಂಧಿಕರಿಗೆ ತಿಳಿಯಿತು. ಸಂಕಷ್ಟದಲ್ಲಿ ಮುಳುಗಿರುವ ಮನುಕುಲದ ಏಳಿಗೆಗಾಗಿ ಆಕೆ ಬಂದಿದ್ದಾಳೆ ಎಂಬುದು ಅವರಿಗೆ ಮನವರಿಕೆಯಾಯಿತು. ಅವಳ ದರ್ಶನಕ್ಕೆ ಬಂದವರನ್ನು ಅಪ್ಪಿ ಹಿಡಿದು ಸಮಾಧಾನಪಡಿಸುವ ಮೂಲಕ ಸಂಕಷ್ಟ ದೂರ ಮಾಡುವವಳು ಎಂದೇ ಪ್ರಸಿದ್ಧಳಾದವಳು. ಆಕೆಯ ಭಕ್ತರು 'ಅಮ್ಮಾ', 'ಅಮ್ಮಚ್ಚಿ' ಎಂದು ಕರೆಯುತ್ತಾರೆ. ತಾಯಿಯ ಮಮತೆಯಿಂದ, ಗುರುವಿನ ಕಾರುಣ್ಯದಿಂದ, ಹೃದಯದ ಭಾಷೆಯಲ್ಲಿ ಅಥವಾ ಪ್ರೀತಿಯ ಭಾಷೆಯಲ್ಲಿ ಆಕೆ ಮಾತಾಡುತ್ತಾರೆ. ಭಕ್ತರ ಅಪೇಕ್ಷೆಯ ಮೇರೆಗೆ ತೀರ್ಥವನ್ನು ಪಂಚಾಮೃತವನ್ನಾಗಿ ಪರಿವರ್ತಿಸುವ ಪವಾಡವನ್ನು ಆಕೆ ಮೆರೆದಿದ್ದಾರೆ. ಶಾಸ್ತ್ರ ಗ್ರಂಥಗಳ ಓದಿನ ಹಿನ್ನೆಲೆಯೂ ಸಾಂಪ್ರದಾಯಿಕ ಗುರೂಪದೇಶವೂ ಆಕೆಗಿಲ್ಲ. ಆದರೆ ಆಧ್ಯಾತ್ಮಿಕ ಶಕ್ತಿ ಮಾತ್ರ ದಂಗು ಬಡಿಸುವಂತಹುದು. ಎಂಥದ್ದೇ ಆಧ್ಯಾತ್ಮಿಕ ವಿಚಾರಗಳನ್ನೂ ಅವರು ವಿಶ್ಲೇಷಿಸುತ್ತಾರೆ. ಆಕೆಯ ವಿವರಣೆ ಮತ್ತು ವಿಶ್ಲೇಷಣೆ ಕತೆಗಳ ರೂಪದಲ್ಲಿರುತ್ತವೆ, ಹೃದಯವನ್ನು ಮುಟ್ಟುವ ವಿವರಣಾತ್ಮಕ ರೂಪದಲ್ಲಿರುತ್ತವೆ. ದೈನಂದಿನ ಬದುಕಿಗೆ ನೇರವಾಗಿ ಹೊಂದುವಂಥದಾಗಿರುತ್ತದೆ.

* "ಪ್ರೀತಿಯ ಮಕ್ಕಳೇ, ನಿಮ್ಮ ಹೃದಯದೊಳಗೇ ಇರುವ ಪ್ರೀತಿಯ ದೀಪವನ್ನು ಹಚ್ಚಿರಿ. ಮತ್ತು ಆ ಬೆಳಕಿನಲ್ಲಿ ಮುನ್ನಡೆಯಿರಿ."

* "ಓಂಕಾರದ ಸಾರಸರ್ವಸ್ವವಾದ ಮುದ್ದಿನ ಮಕ್ಕಳೇ ಬೇಗ ಬನ್ನಿ. ಎಲ್ಲ ದುಃಖಗಳನ್ನು ಬಿಟ್ಟುಬಿಡಿ. ಪ್ರೇಮಮಯಿಗಳಾಗಿ ಬೆಳೆಯಿರಿ. ಪವಿತ್ರವಾದ ಓಂ ಶಕ್ತಿಯಲ್ಲಿ ಒಂದಾಗಿ."



* "ದ್ವಂದ್ವಾತೀತವಾದ ತನ್ನರಿವು ಮಾತ್ರ ಹಗಲು ರಾತ್ರಿಗಳ ವ್ಯತ್ಯಾಸವನ್ನು ಅರಿಯದು. ಅದು ದೂರದಲ್ಲೆಲ್ಲೂ ಇಲ್ಲ. ಅತ್ಯಂತ ಶುಭ್ರವಾಗಿ, ಪ್ರಕಾಶಮಾನವಾಗಿ ಅದು ನಮ್ಮೊಳಗೇ ಇದೆ."

* "ಈ ಜಗತ್ತಿಗೆ ಯಾಕೆ ಬಂದಿದ್ದೇನೆ ಎಂಬ ಉದ್ದೇಶವನ್ನೇ ಮರೆತು ವ್ಯರ್ಥವಾಗಿ ಕಾಲಹರಣ ಮಾಡದಿರಿ. ನಿಮ್ಮೊಳಗಿನ ಶಕ್ತಿಯನ್ನು ಪ್ರತಿಕ್ಷಣವೂ ಎಚ್ಚರಾಗಿದ್ದು ಅನುಭವಿಸಿ."

* "ಮಕ್ಕಳೇ, ಭಗವಂತನ ಪಾದಾರವಿಂದಗಳಲ್ಲಿ ನಿಮ್ಮೆಲ್ಲ ದುಃಖಗಳನ್ನೂ ಅರ್ಪಿಸಿಬಿಡಿ. ಸರ್ವಾಂತರ್ಯಾಮಿಯಾದ ಆ ಭಗವಂತನು ನಿಮ್ಮೆಲ್ಲ ಅಪೇಕ್ಷೆಗಳನ್ನೂ ಈಡೇರಿಸುವನು."

* "ದೇವರೊಬ್ಬನೇ ನಿತ್ಯ, ಸತ್ಯ ಮತ್ತು ಶಾಶ್ವತ ಎಂಬ ನಂಬಿಕೆಯಿಂದ ಮನವನ್ನು ಆತನಲ್ಲಿ ನೆಲೆಗೊಳಿಸು. ಕೆಲಸದಲ್ಲಿರುವಾಗಲೂ ಸದಾ ಆತನ ನಾಮ ಸ್ಮರಣೆ ಮಾಡುತ್ತಿರು. ಹಾಗೆ ಮಾಡಿದರೆ ದೇವರನ್ನು ಧ್ಯಾನಿಸಲು ಬೇರೆ ಸಮಯವೇ ಬೇಕೆಂದಿಲ್ಲ. ಮಕ್ಕಳೇ, ನಿಮ್ಮ ಹೃದಯವು ಸದಾ ದೇವರನ್ನು ಬಯಸುತ್ತಿರಬೇಕು. ಅವನಿಗಾಗಿ ತುಡಿಯುತ್ತಿರಬೇಕು. ದೇವರನ್ನು ನೆನೆಯದಿರುವ ಒಂದೇ ಒಂದು ಕ್ಷಣವೂ ಇರಬಾರದು. ಹೀಗೆ ಮಾಡಿದರೆ ಖಂಡಿತಾ ಮೋಕ್ಷ ಪ್ರಾಪ್ತಿಯಾಗುತ್ತದೆ."

* "ಮಕ್ಕಳೇ, ದೇವರನ್ನು ಗೃಹಸ್ಥಾಶ್ರಮಿ, ಬ್ರಹ್ಮಚಾರಿ ಎಲ್ಲರೂ ಒಂದೇ ನಂಬಿಕೆಯಿಂದ ಧ್ಯಾನಿಸಬೇಕು. ಗುರುವಿಗೆ ಸಂಪೂರ್ಣ ಶರಣಾಗಬೇಕು.

* "ಮಗನೇ, ದೇವರಲ್ಲಿ ಸಂಪೂರ್ಣ ಶ್ರದ್ಧೆ ಇರಿಸಿ ಶರಣಾದರೆ ಆಧ್ಯಾತ್ಮಿಕವಾಗಿ ಹಾಗೂ ಲೌಕಿಕವಾಗಿ ಒಳ್ಳೆಯದಾಗುತ್ತದೆ. ಯಾವ ಒಬ್ಬ ಮಹಾತ್ಮ ಹಸಿವೆಯಿಂದ ಸತ್ತ ಒಂದೇ ಒಂದು ಉದಾಹರಣೆಯೂ ಇಲ್ಲ."

* "ಯಾವುದೇ ಅಪೇಕ್ಷೆ ಇಲ್ಲದೆ ಭಕ್ತಿಭಾವದಿಂದ ದೇವರಿಗೆ ಸಂಪೂರ್ಣ ಶರಣಾಗತನಾದರೆ ನಮಗೆ ಯಾವುದು ಬೇಕೋ ಅದನ್ನು ಬೇಕಾದ ಸಮಯಕ್ಕೆ ಕೊಟ್ಟು ಬಿಡುತ್ತಾನೆ. ನನ್ನ ಎಲ್ಲ ಜವಾಬ್ದಾರಿಯನ್ನು ನಿನಗೊಪ್ಪಿಸಿಬಿಟ್ಟಿದ್ದೇನೆ. ಭಗವಂತಾ ಎಂದು ಶರಣಾದರೆ ನೀನು ಯಾವುದಕ್ಕೂ ಹೆದರುವ ಅಗತ್ಯವಿಲ್ಲ."

* "ಹಣ್ಣು ಹಣ್ಣು ಮುದುಕನಾಗಿ ಕೈಲಾಗದೇ ಹೋಗುವತನಕ ಕಾಯಬೇಡ. ಈಗಲೇ ದೇವರನ್ನು ಧ್ಯಾನಿಸು. ನಿನ್ನ ಮರಣ ಶಯ್ಯೆಯಲ್ಲಿ ತಂದೆ, ತಾಯಿ, ಹೆಂಡತಿ, ಮಗ ಯಾರೂ ನಿನ್ನನ್ನು ರಕ್ಷಿಸಲಾರರು."

* * * *

# ೫. ಭಾರತದ ಇತರ ಧರ್ಮಗಳ ಆಧ್ಯಾತ್ಮಿಕ ಗುರುಗಳು

ಬೌದ್ಧ, ಜೈನ ಮತ್ತು ಸಿಕ್ಖ್ ಮತಗಳು ನಮ್ಮ ದೇಶದಲ್ಲಿ ಹುಟ್ಟಿದವು. ಹಿಂದೂ ಸಮಾಜದ ಪುರೋಹಿತ ಶಾಹಿಯ ಚಟುವಟಿಕೆಗಳ ವಿರುದ್ಧ ಹಾಗೂ ಮೂಢನಂಬಿಕೆ, ಪ್ರಾಣಿಬಲಿ ಇತ್ಯಾದಿಗಳನ್ನು ಪ್ರತಿಭಟಿಸಿ ಬೌದ್ಧಮತ ಸ್ಥಾಪನೆಯಾಯಿತು. ಇದೇ ರೀತಿ ಜೈನಮತವೂ ಹುಟ್ಟಿಕೊಂಡಿತು. ಮುಸ್ಲಿಂ ದಾಳಿಕೋರರು ಮತ್ತು ರಾಜರ ದಬ್ಬಾಳಿಕೆಯನ್ನು ಪ್ರತಿಭಟಿಸಿ, ಹಿಂದೂ ಧರ್ಮದ ರಕ್ಷಣೆಗಾಗಿ ಸಿಕ್ಖ್ ಮತ ಉದಯವಾಯಿತು. ಕರ್ಮ, ಧರ್ಮ, ಮೋಕ್ಷ ಮೊದಲಾದವುಗಳಿಗೆ ಸಂಬಂಧಿಸಿದಂತೆ ಈ ಮೂರಕ್ಕೂ ಹಿಂದೂ ಧರ್ಮವೇ ತಳಪಾಯ ಮತ್ತು ಮೂಲ. ಒಂದು ರೀತಿಯಲ್ಲಿ ಇವು ಮೂರೂ ಹಿಂದೂ ಧರ್ಮದ ವಿಸ್ತರಣೆಗಳಾಗಿವೆ.

**ಬೌದ್ಧಮತ:** ಕ್ರಿ.ಪೂ. ೬೨೩ರಲ್ಲಿ ಸಿದ್ಧಾರ್ಥ, ಗೌತಮ ಅಥವಾ ಬುದ್ಧನಿಂದ ಬೌದ್ಧಮತ ಉದಯವಾಯಿತು.

ಸಿದ್ಧಾರ್ಥ, ಗೌತಮ ಅಥವಾ ಬುದ್ಧ: **ಸುಮಾರು ಕ್ರಿ.ಪೂ. ೫೬೩–೪೮೩ರಲ್ಲಿ ಶಾಕ್ಯವಂಶದ** ರಾಜ ಶುದ್ಧೋದನ ಮತ್ತು ರಾಣಿ ಮಾಯಾಗೆ ಹುಟ್ಟಿದ. ಶ್ರೀಮಂತ ಬದುಕಿನ ರಾಜಕುಮಾರ ಸಿದ್ಧಾರ್ಥ ತನ್ನ ೨೯ನೇ ವರ್ಷದಲ್ಲಿ ಒಬ್ಬ ರೋಗಿಷ್ಠ, ಒಬ್ಬ ಮುದುಕ ಮತ್ತು ಒಬ್ಬ ಭಿಕ್ಷುಕನನ್ನು ಕಂಡು ಬದುಕಿನ ನಿಸ್ಸಾರತೆಗೆ ಜುಗುಪ್ಸೆ ಹೊಂದಿ, ಮಧ್ಯರಾತ್ರಿ ಹೆಂಡತಿ ಮತ್ತು ಪುಟ್ಟ ಮಗನನ್ನೂ ಬಿಟ್ಟು ತಪಸ್ಸಿಗಾಗಿ ಕಾಡಿಗೆ ಹೊರಟುಹೋದ. ಆರು ವರುಷಗಳ ಕಠಿಣ ತಪಸ್ಸಿನ ಪರಿಣಾಮವಾಗಿ ಬಿಹಾರದ ಬೋಧಗಯಾ ಎಂಬಲ್ಲಿ ಜ್ಞಾನೋದಯವಾಗಿ 'ಬುದ್ಧ' (ಬೋಧೆ ಅಥವಾ ಜ್ಞಾನ ಪಡೆದುಕೊಂಡವನು) ಎಂಬ ಅನ್ವರ್ಥನಾಮವನ್ನು ಗಳಿಸಿಕೊಂಡ. ತಥಾಗತ (ಸತ್ಯವನ್ನು ಕಂಡುಕೊಂಡವನು) ಮತ್ತು ಶಾಕ್ಯಮುನಿ (ಶಾಕ್ಯವಂಶದಲ್ಲಿ ಹುಟ್ಟಿಬಂದ ಮುನಿ) ಎಂಬ ಇತರ ಹೆಸರುಗಳೂ ಅವನಿಗೆ ಇವೆ. ಗೌತಮ ಎಂಬುದು ಅವನ ಗೋತ್ರನಾಮ. ಹಾಗಾಗಿ ಗೌತಮಬುದ್ಧನಾದ. ಹಿಂದೂ ಧರ್ಮದಲ್ಲಿರುವ ಜಾತಿ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದನಲ್ಲದೆ, ಸತ್ಯ ದರ್ಶನಕ್ಕೆ ಬ್ರಾಹ್ಮಣರನ್ನು ಅವಲಂಬಿಸಬೇಕಾಗಿ ಬಂದುದರ ವಿರುದ್ಧ ಪ್ರತಿಭಟಿಸಿ ನಿಂತ. 'ಪಂಚವರ್ಗೀಯ' ಎಂದು ಕರೆಸಿಕೊಂಡ ತನ್ನ ಐದು ಮಂದಿ ಶಿಷ್ಯರಿಗೆ ಅವನು



ಮೊದಲು ತನ್ನ ಉಪದೇಶವನ್ನು ನೀಡಿದ. ಆ ಐವರು ಕೌಂಡಿನ್ಯ, ಭದ್ರಿಯ, ವಪ್ಪಾ, ಮಹಾನಾಮ ಮತ್ತು ಅಶ್ವಜಿತ್.

ಜ್ಞಾನೋದಯ ಅಥವಾ ಮೋಕ್ಷ ಎಂಬುದು ಹೊರಗಿನ ಶಕ್ತಿಗಳಿಂದ ಬರುವುದಿಲ್ಲ. ಬದಲಾಗಿ ತನ್ನೊಳಗಿನಿಂದ, ಸ್ವಂತ ಪರಿಶ್ರಮದಿಂದ ಮೋಕ್ಷ ಪ್ರಾಪ್ತವಾಗುತ್ತದೆ ಎಂದು ಬುದ್ಧ ಪ್ರತಿಪಾದಿಸಿದ. ಅದಕ್ಕೆ ಸತ್ ಚಿಂತನೆ ಮತ್ತು ಸತ್ ಕರ್ಮ ಮುಖ್ಯ ಎಂದ. ಯಾವುದೇ ಮಾತು ಮತ್ತು ಕೃತಿಯ ಹಿಂದೆ ಮನಸ್ಸು ಕೆಲಸ ಮಾಡುತ್ತದೆ ಎಂದ. ನಾಲ್ಕು ದಿವ್ಯ ಸತ್ಯಗಳನ್ನು ಮತ್ತು ಅಷ್ಟಾಂಗ ಹಾದಿಯನ್ನು (ಎಂಟು ಪಥಗಳನ್ನು) ಬುದ್ಧ ಪ್ರತಿಪಾದಿಸಿದ. ಅವುಗಳೆಂದರೆ– ಸರಿಯಾದ ಆಲೋಚನೆ, ಅಥವಾ ಚಿಂತನೆ, ಸದ್ಭಯಕೆ, ಒಳ್ಳೆಯ ಮಾತು, ಒಳ್ಳೆಯ ನಡತೆ, ಒಳ್ಳೆಯ ಬದುಕು, ಒಳ್ಳೆಯ ಪ್ರಯತ್ನ, ಒಳ್ಳೆಯದನ್ನು ಹಾರೈಸುವುದು ಮತ್ತು ಒಳ್ಳೆಯ ಧ್ಯಾನ ಅಥವಾ ಅನುಸಂಧಾನ.

**ಬುದ್ಧನ ಆರು ಮಂದಿ ನೇರ ಶಿಷ್ಯರು:**

೧. ಸಾರಿಪುತ್ತ, ೨. ಮೊಗ್ಗಲಾನ, ೩. ಮಹಾ ಕಸ್ಸಪ, ೪. ಮಹಾ ಕಚ್ಚ ಯಾನ, ೫. ಪುನ್ನಮಂತಾನಿ ಪುತ್ತ, ೬. ಆನಂದ.

**ಜೈನ ಮತ:**

ಪಾರ್ಶ್ವನಾಥ ಎಂಬವನಿಂದ ಆರಂಭಗೊಂಡ ಜೈನ ಮತವು ಅನಂತರ ವರ್ಧಮಾನ ಮಹಾವೀರ (ಕ್ರಿ.ಪೂ. ೬೦೦–೫೦೦) ಎಂಬಾತನಿಂದ ಪ್ರವರ್ಧಮಾನಕ್ಕೆ ಬಂತು.

ಜೈನಮತದ ಆಧಾರಸ್ತಂಭಗಳಾಗಿ ಆರಂಭಕಾಲದಲ್ಲಿ ಬಂದ ಮಹಾ ಮುನಿಗಳನ್ನು ತೀರ್ಥಂಕರರೆಂದು ಕರೆಯುತ್ತಾರೆ. ಅಂತಹ ಒಟ್ಟು ೨೪ ಮಂದಿ ತೀರ್ಥಂಕರರಿದ್ದಾರೆ.

೧. ಋಷಭ (ಆದಿನಾಥ):– ಋಗ್ವೇದ ಮತ್ತು ವಿಷ್ಣು ಪುರಾಣದಲ್ಲಿ ಈತನ ಕುರಿತ ಉಲ್ಲೇಖವಿದೆ. ಶ್ರೀಮದ್ ಭಾಗವತ ಅಥವಾ ಭಾಗವತ ಪುರಾಣದ ಹೇಳಿಕೆಯಂತೆ ಋಷಭನು ಮಹಾವಿಷ್ಣುವಿನ ಅವತಾರವಾಗಿದ್ದಾನೆ. ೨. ಅಜಿತನಾಥ, ೩. ಸಂಭವನಾಥ, ೪. ಅಭಿನಂದನ ನಾಥ, ೫. ಸುಮತಿನಾಥ, ೬. ಪದ್ಮಪ್ರಭು, ೭. ಸುಪಾರ್ಶ್ವನಾಥ, ೮. ಚಂದ್ರಪ್ರಭ, ೯. ಸುವಿಧನಾಥ, ೧೦. ಶೀತಲನಾಥ, ೧೧. ಶ್ರೇಯಾಂಶನಾಥ, ೧೨. ವಸುಪೂಜ್ಯ, ೧೩. ವಿಮಲನಾಥ, ೧೪. ಅನಂತನಾಥ, ೧೫. ಧರ್ಮನಾಥ, ೧೬. ಶಾಂತಿನಾಥ, ೧೭. ಕುಂತುನಾಥ, ೧೮. ಅರ್ಹಂತ, ೧೯. ಮಲ್ಲಿ, ೨೦. ಮುನಿಸುವ್ರತ, ೨೧. ನಮಿನಾಥ, ೨೨. ನೇಮಿನಾಥ (ಕೃಷ್ಣದೇವರ

ಮಲಸಹೋದರ, ಶ್ರೀಮದ್ ಭಾಗವತದ ಪ್ರಕಾರ ಮಹಾವಿಷ್ಣುವಿನ ಅವತಾರ ಎಂದು ಹೇಳಲಾಗಿದೆ.)

ಪ್ರತಿಯೊಂದು ಹೆಸರಿನ ಮುಂದೆ 'ನಾಥ' (ಪ್ರಭು, ದೊರೆ) ಎಂಬ ಉಪನಾಮವನ್ನು ಸೇರಿಸಲಾಗುತ್ತದೆ.

**೨೩. ಪಾರ್ಶ್ವನಾಥ (ಕ್ರಿ.ಪೂ. ೮೫೦):**

ಬಿಹಾರದ ವೈಶಾಲಿ ರಾಜ್ಯದ ರಾಜಕುಮಾರನಾಗಿದ್ದ. ಮದುವೆಯಾಗಿ ೩೦ನೇ ವರ್ಷದ ತನಕ ಕೌಟುಂಬಿಕ ಜೀವನ ನಿರ್ವಹಿಸಿದ. ಐಹಿಕ ಜೀವನದಲ್ಲಿ ಜುಗುಪ್ಸೆ ಹೊಂದಿ ಆಧ್ಯಾತ್ಮಿಕ ಹಾದಿ ಹಿಡಿದ. ಆಳವಾದ ತಪಸ್ಸಿಗೆ ಕುಳಿತು "ಕೇವಲ ಜ್ಞಾನ' ಪಡೆದುಕೊಂಡ. ಈಗ ಬಿಹಾರದ ಗೋಮೋ ರೈಲ್ವೇ ನಿಲ್ದಾಣದ ಬಳಿ ಇರುವ ಸಮ್ಮೇತ (ಸಮ್ಮೇದ ಗಿರಿ) ಪರ್ವತದಲ್ಲಿ ಸಮಾಧಿ ಹೊಂದಿದ. ಆತನ ನಾಲ್ಕು ತತ್ವಗಳು ಜೈನಧರ್ಮದ ಆಧಾರಸ್ತಂಭಗಳಾಗಿವೆ. ಅವುಗಳೆಂದರೆ ಅಹಿಂಸೆ, ಸತ್ಯ, ಆಸ್ತೇಯ (ಕದಿಯದಿರುವುದು) ಮತ್ತು ಅಪರಿಗ್ರಹ (ಆಸೆ ಇಲ್ಲದಿರುವುದು, ಆಸ್ತಿಪಾಸ್ತಿ ಸಂಗ್ರಹಿಸದೇ ಇರುವುದು).

**೨೪ನೆಯವನು ವರ್ಧಮಾನ ಮಹಾವೀರ, (ಕ್ರಿ.ಪೂ. ೫೯೯), ಕುಂದಲಪುರ, ಕುಂದಗ್ರಾಮ: ಬಿಹಾರ**

ವರ್ಧಮಾನ ಎಂಬುದು ಅವನ ನಿಜವಾದ ಹೆಸರು. ಮಹಾವೀರ ಎಂಬುದು ಅನಂತರ ಬಂದ ಉಪಾಧಿ; ದೊಡ್ಡನಾಯಕ ಎಂಬರ್ಥದಲ್ಲಿ ಬಂತು. ಸಿದ್ಧಾರ್ಥ ಮತ್ತು ತ್ರಿಶಲಾ ಎಂಬ ರಾಜದಂಪತಿಗಳಿಗೆ ಹುಟ್ಟಿದ ರಾಜಕುಮಾರ. ಚಿಕ್ಕವನಿರುವಾಗಲೇ ಐಹಿಕ ಬದುಕಿನ ಬಗ್ಗೆ ವಿಮುಖನಾಗಿ ಆಧ್ಯಾತ್ಮದ ಕಡೆಗೆ ಆಕರ್ಷಿತನಾದ. ತನ್ನ ೩೦ನೇ ವರ್ಷಕ್ಕೆ ತಂದೆ ತಾಯಿ ತೀರಿಕೊಂಡ ಬಳಿಕ ರಾಜ್ಯ, ಕೋಶ, ಬಂಧು, ಬಳಗ ಎಲ್ಲವನ್ನೂ ತ್ಯಜಿಸಿ, ಹುಟ್ಟು ಸಾವಿನ ಬಂಧನ ಕಳೆಯುವ ಹಾದಿಯನ್ನರಸುತ್ತಾ ಮಧ್ಯ ಭಾರತದ ಎಲ್ಲ ಭಾಗದಲ್ಲೂ ಅಲೆದ. ಹೀಗೆ ತಪಸ್ಸು ಮಾಡುತ್ತಾ ಧಾರ್ಮಿಕ ಕೇಂದ್ರಗಳಲ್ಲಿ ಅಲೆಯುತ್ತ ಜ್ಞಾನಿಗಳನ್ನು ಭೇಟಿ ಮಾಡುತ್ತ ಹನ್ನೆರಡು ವರ್ಷಗಳನ್ನು ಕಳೆದು "ಕೇವಲಜ್ಞಾನಿ"ಯಾದ. ಎಲ್ಲ ಪ್ರಾಪಂಚಿಕ ಸುಖಗಳನ್ನು ತ್ಯಜಿಸಿ 'ಜಿನ'ನಾದ. ಕೊನೆಗೆ ಬಿಹಾರದ ಪಾವಪುರಿ ಎಂಬಲ್ಲಿ ತನ್ನ ೭೨ನೇ ವರ್ಷಕ್ಕೆ ದೇಹತ್ಯಾಗ ಮಾಡಿದ. ಮೂವತ್ತು ವರ್ಷಗಳ ಕಾಲ ಬರಿಗಾಲಲ್ಲಿ ಎಲ್ಲ ಕಡೆ ಓಡಾಡಿ ಮನುಷ್ಯ ಭವ ಬಂಧನದಿಂದ ಬಿಡುಗಡೆಗೊಂಡು ಮೋಕ್ಷ ಸಂಪಾದಿಸಬೇಕಾದರೆ, ಒಳ್ಳೆಯ ನಂಬಿಕೆ–ವಿಶ್ವಾಸ, ಒಳ್ಳೆಯ ತಿಳಿವಳಿಕೆ, ಜ್ಞಾನ ಮತ್ತು ಸನ್ನಡತೆ ತೀರಾ ಅವಶ್ಯವೆಂದು ಉಪದೇಶಿಸಿದ. ಎಲ್ಲ ಮಾನವರೂ ಒಂದೇ



ಜಾತಿ ಮತ್ತು ಎಲ್ಲ ಜೀವಿಗಳನ್ನೂ ಗೌರವಿಸಬೇಕು ಎಂದ. ಈ ಕೆಳಗೆ ಹೇಳಲಾದ ಅಂಶಗಳ ಆಧಾರದಲ್ಲಿ ಕರ್ಮ ಮಾಡಬೇಕು. ಅದೇ ದೇವಪೂಜೆ ಎಂದು ಹೇಳಿದ. ಅವುಗಳು ಯಾವುವೆಂದರೆ–

**೧. ಅಪರಿಗ್ರಹ:–** ಯಾವುದನ್ನೂ ಅಪೇಕ್ಷಿಸದಿರುವುದು. ಯಾವುದಕ್ಕೂ ಆಸೆ ಪಡದಿರುವುದು.

**೨. ಅಹಿಂಸೆ:–** ಎಲ್ಲರನ್ನೂ ಎಲ್ಲವನ್ನೂ ಒಂದೇ ಎಂದು ಭಾವಿಸಿ ನೋಯಿಸದಿರುವುದು.

**೩. ಅನೇಕಾಂತ:–** ಚಿತ್ತ ಸಮಭಾವ ಸ್ಥಿತಿ. ಭಾವೋದ್ವೇಗಕ್ಕೆ ಒಳಗಾಗದಿರುವುದು ಅಂದರೆ, ಬ್ರಹ್ಮಚರ್ಯ ಪಾಲನೆಯನ್ನು ಸೇರಿಸಿದ. ಮನುಷ್ಯನ ಅದೃಷ್ಟವನ್ನು ಅಥವಾ ವಿಧಿಯನ್ನು ಆತನೇ ಬರೆದುಕೊಳ್ಳುತ್ತಾನೆ. ಅದಕ್ಕೆ ದೇವರು ಅಥವಾ ಇನ್ನಾವುದೋ ಒಂದನ್ನು ಆರೋಪಿಸಿಕೊಳ್ಳಬೇಕಾಗಿಲ್ಲ ಎಂದು. ಅಂದರೆ ತನ್ನ ಭವಿಷ್ಯವನ್ನು ತಾನೇ ನಿರ್ಧರಿಸಿಕೊಳ್ಳಬೇಕು ಎಂಬುದು. ಜೈನ ತತ್ವವನ್ನು ನಾಲ್ಕು ಸಮೂಹಗಳುಳ್ಳ ಒಂದು ಸಂಘದ ಮೂಲಕ ಅಸ್ತಿತ್ವಕ್ಕೆ ತರಲಾಯಿತು. ಆ ನಾಲ್ಕು ಸಮೂಹ ಅಥವಾ ಗುಂಪುಗಳು ಯಾವುವೆಂದರೆ ಸನ್ಯಾಸಿಗಳು, ಸನ್ಯಾಸಿನಿಯರು, ಸಾಮಾನ್ಯರಾದ ಪುರುಷ ಭಕ್ತರು ಮತ್ತು ಸಾಮಾನ್ಯರಾದ ಸ್ತ್ರೀ ಭಕ್ತರು.

**ಸಿಕ್ಖ್ ಮತ:–** ಗುರುನಾನಕ್ ದೇವ್ ಎಂಬವರಿಂದ ಸಿಕ್ಖ್ ಮತಪ್ರಚಾರಕ್ಕೆ ಬಂತು.

**೧. ಶ್ರೀ ನಾನಕ್ ಅಥವಾ ಗುರುನಾನಕ್ ದೇವ, ೧೪೬೯–೧೫೩೯,** ತಳವಂಡಿ, ಪಂಜಾಬ್ (ಈಗ ಅದು ಪಶ್ಚಿಮ ಪಾಕಿಸ್ತಾನದಲ್ಲಿದೆ). ಕಲುಪಟ್ ವಾರಿ ಮತ್ತು ತೃಪ್ತಾ ಎಂಬ ದಂಪತಿಗಳ ಮಗನಾಗಿ ತಳವಂಡಿ ಎಂಬಲ್ಲಿ ಹುಟ್ಟಿದನು. (ಈ ಜಾಗವನ್ನು ಈಗ ನಾನ್‌ಕನಾ ಸಾಹಿಬ್ ಎಂದು ಕರೆಯಲಾಗುತ್ತಿದೆ.)

ಭಗವಾನ್ ಕೃಷ್ಣನ ಅವತಾರವೆಂದು ಆತನನ್ನು ಪೂಜಿಸಲಾಗುತ್ತದೆ. ಭಾರತದ ಒಳಗೆ ಮತ್ತು ವಿದೇಶಗಳಲ್ಲಿ ಹಲವಾರು ಪುಣ್ಯ ಸ್ಥಳಗಳ ಯಾತ್ರೆ ಕೈಗೊಂಡ. ಹಿಂದೂ ಧರ್ಮದಲ್ಲಿದ್ದ ಜಾತಿಪದ್ಧತಿ, ರೂಢಮೂಲ ಸಂಪ್ರದಾಯಗಳು ಆತನಿಗೆ ಸರಿಬರಲಿಲ್ಲ. ಹಿಂದೂ ಮತ್ತು ಇಸ್ಲಾಂ ಧರ್ಮದಲ್ಲಿದ್ದ ಒಳ್ಳೆಯ ಅಂಶಗಳನ್ನು ತೆಗೆದುಕೊಂಡು ವಿಶ್ವಭ್ರಾತೃತ್ವವನ್ನು ಸಾರಿದ. ದೇವರುಗಳನ್ನು ಒಂದು ಮಾಡಬೇಕು, ಒಬ್ಬನೇ ದೇವರನ್ನು ಪೂಜಿಸಬೇಕು. ಸತ್ಯದ ಹಾದಿಯಲ್ಲಿ ಜೀವನ ಮಾಡಬೇಕು. ಸೇವೆಯ ತಳಹದಿಯಲ್ಲಿ ಧರ್ಮ ನಿಲ್ಲಬೇಕು, ದುರ್ಬಲರನ್ನು ರಕ್ಷಿಸಬೇಕು ಎಂಬಿತ್ಯಾದಿಯಾಗಿ ಬೋಧಿಸಿದ. ಮುಸ್ಲಿಮರ ಆಕ್ರಮಣ ಮತ್ತು ಬಲವಂತದ ಮತಾಂತರದ ವಿರುದ್ಧ ಹೋರಾಡಲು ಮತ್ತು ಅಗತ್ಯವಿದ್ದರೆ ಹೋರಾಡಿ ಪ್ರಾಣತ್ಯಾಗಕ್ಕೂ ಸಿದ್ಧರಾದ ಹಿಂದೂಗಳ ಒಂದು ಸೇನೆಯನ್ನು ಸ್ಥಾಪಿಸಿದ. ಇದು ಹೊಸತೊಂದು ಮತ ಸ್ಥಾಪನೆಗೆ (ಸಿಕ್ಖ್ ಎಂದರೆ ಶಿಸ್ತು ಎಂದರ್ಥ) ನಾಂದಿ ಆಯಿತು. ಪ್ರಪಂಚದ ಆರನೇ ದೊಡ್ಡ ಮತವಾಗಿ,

ಭಾರತದಲ್ಲಿ ಹುಟ್ಟಿದ ನಾಲ್ಕನೇ ಮತವಾಗಿ (ಉಳಿದ ಮೂರು ಯಾವುದೆಂದರೆ ಸನಾತನ ಹಿಂದೂ ಧರ್ಮ, ಬೌದ್ಧ ಮತ ಮತ್ತು ಜೈನ ಮತ) ದೃಢವಾಯಿತು. ಒಂಬತ್ತು ಗುರುಗಳು ಕ್ರಮವಾಗಿ ಅದನ್ನು ಬಲಪಡಿಸಿದರು. ದೇವರನ್ನು ಅವರು 'ಸತ್ ಶ್ರೀ ಅಕಾಲ್' ಎಂದು ಹೆಸರಿಸಿದರು.

ಅನುಯಾಯಿಗಳಿಗೆ ಆತ ವಿಧಿಸಿದ ಅನುಶಾಸನವೆಂದರೆ, "ಸದಾ ದೇವರನ್ನು ಸ್ಮರಿಸು; ಅವನ ನಾಮಸ್ಮರಣೆ ಮಾಡುತ್ತಿರು." ಇನ್ನೊಂದು "ನಿನಗಿಂತ ಕಡಿಮೆ ಉಳ್ಳವರೊಂದಿಗೆ ನೀನು ಪಡೆದುದನ್ನು ಹಂಚು." ಆತ ಹೇಳಿದ ಇನ್ನೊಂದು ಮಾತೆಂದರೆ, "ನಂಬಿಕೆಯ ಪ್ರಚಾರಕ್ಕಾಗಿ ನಿನ್ನ ಖಡ್ಗ ಎತ್ತಬೇಡ" (ಬಲವಂತ ಮಾಡಬೇಡ) ಎಂಬುದಾಗಿತ್ತು. ಅವನು ಹೇಳಿದ– "ಅನ್ಯಾಯ, ಶೋಷಣೆ ಮತ್ತು ದಬ್ಬಾಳಿಕೆಯನ್ನು ತಡೆಯಲು ಎಲ್ಲ ಶಾಂತಿ ಮಾರ್ಗಗಳೂ ಮುಚ್ಚಿಕೊಂಡಾಗ ಮಾತ್ರ ಕೊನೆಯ ಹಾದಿಯಾಗಿ ಶಸ್ತ್ರವನ್ನೆತ್ತು!" ಗುರುನಾನಕನ ಮತ್ತು ಅವನ ನಂತರ ಬಂದ ಒಂಬತ್ತು ಗುರುಗಳ ಉಪದೇಶಗಳನ್ನು ಒಟ್ಟಾಗಿ ಸಂಗ್ರಹಿಸಿ "ಶ್ರೀ ಗುರು ಗ್ರಂಥಸಾಹಿಬ್" ಎಂದು ಕರೆಯಲಾಗಿದೆ. ಇದು ಸಿಕ್ಖರ ಪವಿತ್ರ ಗ್ರಂಥ. ಗುರುನಾನಕ್ ಹೇಳಿದ– "ದೇವರು ಒಬ್ಬನೇ. ಅವನ ಮಾತು ಸತ್ಯವಾದುದು. ಅವನು ಈ ವಿಶ್ವದ ನಿರ್ಮಾಪಕ. ಅವನು ಎಲ್ಲೆಲ್ಲೂ ವ್ಯಾಪಿಸಿದ್ದಾನೆ. ಭಯ ಅಥವಾ ದ್ವೇಷಭಾವದಿಂದ ಅವನು ರಹಿತನಾಗಿದ್ದಾನೆ. ಅವನು ಸಮಯಾತೀತನು. ಸಮಯದ ಮಿತಿಗೆ ಒಳಪಟ್ಟವನಲ್ಲ. ಅವನಿಗೆ ಹುಟ್ಟು ಸಾವುಗಳಿಲ್ಲ. ಅವನು ಸ್ವಪ್ರಕಾಶನು. ಗುರುವಿನ ದಯೆಯಿಂದ ನಾವು ಅವನನ್ನು ಕಾಣಬಹುದು."

**ಗುರುಗಳು:–** ಸಿಕ್ಖ್ ಮತದ ಆಧ್ಯಾತ್ಮಿಕ ನೇತಾರರನ್ನು 'ಗುರು' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಅವರ ಮಾತು, ನಿಲುವು ಮತ್ತು ಕೃತಿಗಳು ಸಂತರಂತೆ ಇರುತ್ತವೆ. ಪ್ರೀತಿ ಮತ್ತು ಆಕಾರರಹಿತ ದೇವರು, ಸರ್ವಭ್ರಾತೃತ್ವ, ಜಾತಿ, ಲಿಂಗ ತಾರತಮ್ಯವಿಲ್ಲದ ಸಮಾನತೆಯನ್ನು ಸಿಕ್ಖ್ ಮತ ಬೋಧಿಸುತ್ತದೆ. ಮತ ಧರ್ಮದ ಸಂರಕ್ಷಣೆಗೆ ಹೋರಾಟದ ಸಂದರ್ಭ ಬಂದರೆ ಕತ್ತಿಹಿಡಿದು ಯುದ್ಧ ಮಾಡಲು ಅಥವಾ ಆತ್ಮಬಲಿದಾನ ಮಾಡಿಯಾದರೂ ಅದನ್ನು ಸಂರಕ್ಷಿಸುವ ಹಟ ಅವರಲ್ಲಿದೆ. ಜನ ಸಮುದಾಯ ದ್ವೇಷ, ಶತ್ರುತ್ವ ಮತ್ತು ಅಸೂಯೆಯಲ್ಲಿ ಮುಳುಗಿದ್ದಾಗ ಜನಸಮುದಾಯದಲ್ಲಿ ಆಧ್ಯಾತ್ಮಿಕ ಬಲವನ್ನು ಸಿಕ್ಖ್ ಮತ ಒದಗಿಸಿತು.

**ಇತರ ಗುರುಗಳು:–** (ಗುರುನಾನಕನ ಅನಂತರದವರು)

**೨. ಗುರು ಅಂಗದ, (೧೫೦೪–೧೫೫೨), (ಗುರುಪದವಿ ೧೫೩೯–೧೫೫೨):**

ಪಂಜಾಬಿನ ಫಿರೋಜ್‌ಪುರದ ಹಾರಿಕೆ ಎಂಬಲ್ಲಿ ಭೈಫೇರು ಮತ್ತು ಖಿವಿ ಬಾಯಿ ದಂಪತಿಗಳಿಗೆ ಮಗನಾಗಿ ಹುಟ್ಟಿದ ಭೈಲಾನಾ ದುರ್ಗಾಮಾತೆಯ



ಪರಮಭಕ್ತನಾಗಿದ್ದ. ಮತ್ತು ಆ ವೇಳೆಗೆ ಅಲ್ಲಿಗೆ ಪ್ರವಾಸ ಬಂದಿದ್ದ ಗುರುನಾನಕನ ಸಂಪರ್ಕಕ್ಕೆ ಬಂದ. ನಿರಾಕಾರ ದೇವರ ಕುರಿತು ನಂಬಿಕೆ ಬಲಿಯಿತು ಹಾಗೂ ಗುರುನಾನಕ್ ದೇವನ ಪರಮಶಿಷ್ಯರಲ್ಲಿ ಒಬ್ಬನಾದ. ಆಗ ಅಸ್ತಿತ್ವದಲ್ಲಿದ್ದ ಪಂಜಾಬ್‌ನ ವರ್ಣಮಾಲೆಯನ್ನು ಪರಿಷ್ಕರಿಸಿ ಅದಕ್ಕೆ ಗುರುಮುಖೀ (ಗುರುವಿನ ಮುಖೇನ ಎಂಬರ್ಥದಲ್ಲಿ) ಎಂದು ಹೆಸರಿಸಿದ. ಮುಂದೆ ಬಂದ ಗುರು ಅರ್ಜುನ ದೇವ ಸಿಕ್ಖ್ ಪಂಥದ ಪವಿತ್ರ ಧರ್ಮಗ್ರಂಥಗಳನ್ನು ಈ ಭಾಷೆಯಲ್ಲಿ ಬರೆದ. ಗುರುದ್ವಾರಕ್ಕೆ ಭಕ್ತಾದಿಗಳಾಗಿ ಬರುವ ಎಲ್ಲರಿಗೂ ಜಾತಿ, ಮತ, ಭೇದವಿಲ್ಲದೆ ಭೋಜನ ಒದಗಿಸುವ 'ಲಂಗರ್' ಎಂಬ ಭೋಜನ ಶಾಲೆಯನ್ನು ಈತ ಸ್ಥಾಪಿಸಿದ. ಅವನ ನಂತರ ಬಂದ ಗುರುಗಳು ಆ ಪದ್ಧತಿಯನ್ನು ಬಲಪಡಿಸಿದರು.

**೩. ಗುರು ಅಮರ್‌ದಾಸ್ (೧೪೭೯–೧೫೭೪), (ಗುರು ಪದವಿ ೧೫೫೨–೧೫೭೪):**

ವೈಷ್ಣವ ತಂದೆ ತೇಜ್‌ಭಾನ್ ಮತ್ತು ತಾಯಿ ಲಕ್ಷ್ಮೀ ಎಂಬುವರ ಮಗನಾಗಿ ಪಂಜಾಬ್ ಅಮೃತಸರದ ಬಸಾರ್ಕಾ ಎಂಬಲ್ಲಿ ಹುಟ್ಟಿದ ಅಮರ್‌ದಾಸ್ ಕೃಷಿಕನಾಗಿದ್ದ ಮತ್ತು ಗುರು ಅಂಗದನೊಂದಿಗೆ ವಿಶೇಷವಾದ ಬಾಂಧವ್ಯವಿತ್ತು. ಕಾಲಾಂತರದಲ್ಲಿ ಆತನ ಪ್ರಭಾವಕ್ಕೊಳಗಾಗಿ ಶಿಷ್ಯನೇ ಆಗಿಬಿಟ್ಟ. ಶಿಷ್ಯನನ್ನಾಗಿ ಸ್ವೀಕರಿಸಿದ ಮೇಲೆ ಗುರು ಅಂಗದ ಹೀಗೆ ಹೇಳಿದ– "ನನ್ನ ಅಮರದಾಸ ಆಶ್ರಯ ಇಲ್ಲದವರಿಗೆ ಆಶ್ರಯದಾತನಾಗಿ, ಗೌರವ ಇಲ್ಲದವರಿಗೆ ಗೌರವ ಒದಗಿಸುವವನಾಗಿ, ಶಕ್ತಿ ಇಲ್ಲದವರಿಗೆ ಶಕ್ತಿ ನೀಡುವವನಾಗಿ, ಬೆಂಬಲ ಇಲ್ಲದವರಿಗೆ ಬೆಂಬಲ ಕೊಡುವವನಾಗಿ, ಬಂಧಿತರನ್ನು ಬಂಧಮೋಕ್ಷ ಮಾಡುವವನಾಗಿದ್ದಾನೆ." ಅಮರದಾಸನು ಅಸ್ಪೃಶ್ಯತೆಯ ವಿರೋಧಿಯಾಗಿದ್ದ; ಅಂತರ್ಜಾತಿಯ ವಿವಾಹಗಳನ್ನು ಪ್ರೋತ್ಸಾಹಿಸಿದ; ವಿಧವಾ ವಿವಾಹಗಳನ್ನು ಮಾಡಿಸಿದ್ದಲ್ಲದೆ, ಅದನ್ನು ಪ್ರೋತ್ಸಾಹಿಸುತ್ತ ಬಂದ.

**೪. ಗುರು ರಾಮದಾಸ್ (೧೫೩೪–೧೫೮೧), (ಗುರು ಪದವಿ ೧೫೭೪–೧೫೮೧):**

ಪಂಜಾಬ್‌ನ ಅಮೃತಸರದಲ್ಲಿ ಹುಟ್ಟಿದ ಗುರು ಅಮರದಾಸನ ಅಳಿಯ. ಸುವರ್ಣ ದೇವಾಲಯ ಸಂಕೀರ್ಣದ ಹರ್ಮಿಂದರ್ ದೇವಸ್ಥಾನ ಕಟ್ಟಡವನ್ನು ಮತ್ತು ಅದರ ಸುತ್ತಲಿನ ಸರೋವರವನ್ನು ಕಟ್ಟಿಸಲು ಆರಂಭಿಸಿದವನು ಈತ.

**೫. ಗುರು ಅರ್ಜುನ್ ದೇವ್ (೧೫೬೩–೧೬೦೬), (ಗುರು ಪದವಿ ೧೫೮೧–೧೬೦೬):**

ಗುರು ರಾಮದಾಸ್‌ನ ಕಿರಿಯ ಮಗ. ತನ್ನ ಹಿಂದಿನ ಗುರುಗಳ ಚಿಂತನೆ, ಭಾಷಣ ಮತ್ತು ಉಪದೇಶಗಳನ್ನೆಲ್ಲ ಸೇರಿಸಿ 'ಆದಿ ಗ್ರಂಥ' ಎಂಬ ಕೃತಿಯನ್ನು

ಸಂಪಾದಿಸಿದ. ಈತನ ಭಕ್ತಿಗೀತೆಗಳ ಸಂಕಲನ 'ಸುಖ್‌ಮಣಿ' ಆತನ ಅತ್ಯುತ್ತಮ ಕೃತಿಯಾಗಿದ್ದು, ಆದಿ ಗ್ರಂಥಕ್ಕೆ ಮಹತ್ವದ ಸೇರ್ಪಡೆಯೂ ಹೌದು. ಸಿಕ್ಖ್ ಧರ್ಮ ಮತ್ತು ಸಂಸ್ಕೃತಿಗೆ ಈತನ ಕೃತಿಗಳು ಬಹುಮಹತ್ವದ ಕೊಡಿಗೆಯಾಗಿವೆ. ತನ್ನ ಅನುಯಾಯಿಗಳಿಗೆ ನೀತಿ ನಿಯಮಗಳನ್ನು, ಅನುಸರಣೆ ಆದೇಶಗಳನ್ನು ಈತ ಹಾಕಿಕೊಟ್ಟ. ಇವನ ಕಾಲದಲ್ಲಿ ಸುವರ್ಣ ದೇವಾಲಯದ ಕಟ್ಟಡ ಕಾಮಗಾರಿ ಸಂಪೂರ್ಣವಾಯಿತು. ಅಕ್ಬರನ ಮಗ ದೊರೆ ಜಹಾಂಗೀರನಿಗೆ ತೆರಿಗೆ ಪಾವತಿಸಲು ನಿರಾಕರಿಸಿದ್ದಕ್ಕೆ ಸೈನಿಕರು ಅವನನ್ನು ಎಳೆದೊಯ್ದರು. ಕಾದ ಕಬ್ಬಿಣದ ಹಲಗೆಯ ಮೇಲೆ ಅವನನ್ನು ಕೂರಿಸಿ ಕಾದ ಮರಳನ್ನು ಆತನ ಮೈಮೇಲೆ ಸುರಿಯುವ ಶಿಕ್ಷೆ ವಿಧಿಸಿದರು. ಕುದಿಯುವ ನೀರು ಇರುವ ಹಂಡೆಯಲ್ಲಿ ಕೂರಿಸಿದರು. ಕೊನೆಗೆ ಆತನ ಶಿರವನ್ನು ಛೇದಿಸಿದರಲ್ಲದೆ, ಶಿರವನ್ನು ದೂರದ ಲಾಹೋರ್ ಸಮೀಪದ ರಾವಿ ನದಿಗೆ ಕೊಂಡೊಯ್ದು ಬಿಸಾಡಿದರು. ಅನಂತರ ಸಿಕ್ಖರು ಆ ಜಾಗದಲ್ಲಿ ಪವಿತ್ರವಾದ ಗುರುದ್ವಾರ "ದೇಹ್ರಾ ಸಾಹಿಬ್" ಕಟ್ಟಿಸಿದರು.

**೬. ಗುರು ಹರಗೋವಿಂದ್ (೧೫೯೫–೧೬೪೪), (ಗುರು ಪದವಿ ೧೬೦೬–೧೬೪೪):**

ಅಮೃತಸರ ಬಳಿ ವಡೇಲಿ ಎಂಬಲ್ಲಿ ಹುಟ್ಟಿದ. ಗುರು ಅರ್ಜುನ್ ದೇವನ ಮಗನಾದ ಈತ ಮೊಘಲರ ವಿರುದ್ಧ ಹೋರಾಡಲೆಂದು ಸಿಕ್ಖರ ಸೇನೆಯನ್ನೇ ಕಟ್ಟಿದ. ಅವನು ಎರಡು ಖಡ್ಗವನ್ನು ಇಟ್ಟುಕೊಂಡಿದ್ದ. ಒಂದು ಆಧ್ಯಾತ್ಮಿಕ ಸೇನೆ; ಇನ್ನೊಂದು ರಾಜಕೀಯ ಸೇನೆಯ ಸಂಕೇತವಾಗಿತ್ತು. ಅವನು ದೇವಾಲಯಕ್ಕೆ ಮುಖಮಾಡಿಕೊಂಡಿರುವ 'ಅಕಾಲ್ ತಖ್ತ್' ಅಥವಾ ದೇವ ಸಿಂಹಾಸನವನ್ನು ಸ್ಥಾಪಿಸಿದ. ಭಕ್ತರಿಗೆ ತತ್ವಸಾರ ಅಥವಾ ಉಪದೇಶಾಮೃತವನ್ನು ಬೋಧಿಸಲು ಈ ಸಿಂಹಾಸನ ಬಳಕೆಯಾಗುತ್ತಿತ್ತು. ಸಿಕ್ಖ್ ಮತಕ್ಕೆ ಒಂದು ಸ್ವರೂಪ ಮತ್ತು ಘನತೆಯನ್ನು ತಂದುಕೊಟ್ಟವನು ಗುರು ಹರ ಗೋವಿಂದ.

**೭. ಗುರು ಹರ್‌ರಾಯ್ (೧೬೩೦–೧೬೬೧), (ಗುರು ಪದವಿ ೧೬೪೪–೧೬೬೧):**

ಗುರು ಹರ್‌ಗೋವಿಂದನ ಮೊಮ್ಮಗನಾದ ಈತನ ತಂದೆಯ ಹೆಸರು ಬಾಬಾ ಗುರುದತ್ತ. ೧೪ನೇ ವಯಸ್ಸಿಗೆ ಇವನನ್ನು ನಾನಕ್‌ನ ಗುರುಪೀಠದಲ್ಲಿ ಕುಳ್ಳಿರಿಸಲಾಯಿತು. ಅವನದು ಅತ್ಯಂತ ಸರಳ ಬದುಕು. ಆದರೆ ಧೀರತೆಯ ಮತ್ತು ಶೌರ್ಯ ಪರಾಕ್ರಮದ ಬದುಕೂ ಆಗಿತ್ತು. ಹುಡುಗನಾಗಿದ್ದಾಗಲೂ ಅನಾವಶ್ಯಕ ಯಾರನ್ನೂ ನೋಯಿಸುತ್ತಿರಲಿಲ್ಲ. ಹಿಂದೂಗಳಿಗೆ ತಮ್ಮ ಧರ್ಮವನ್ನು ಅನುಸರಿಸುವ, ಇಚ್ಛೆಯಂತೆ ಪೂಜಿಸುವ ಹಕ್ಕು ಮೂಲಭೂತವಾದದ್ದು, ಅದನ್ನು ತಡೆಯಲು ಯಾರಿಂದಲೂ ಶಕ್ಯವಿಲ್ಲ. ಒಂದು ವೇಳೆ ತಡೆದದ್ದೇ ಆದರೆ, ಅದಕ್ಕಾಗಿ ಹೋರಾಡಿ



ಜೀವ ತ್ಯಜಿಸಲೂ ಅವರು ಸಿದ್ಧ; ಆದರೆ ಧರ್ಮವನ್ನು ಬಿಡಲೊಲ್ಲರು ಎಂದು ಘಂಟಾಘೋಷವಾಗಿ ಸಾರಿದ ಧೀರನೀತ.

**೮. ಗುರು ಹರ್‌ಕಿಶನ್ (೧೬೫೬–೧೬೬೪), (ಗುರು ಪದವಿ ೧೬೬೧–೧೬೬೪):**

ಈತ ಗುರು ಹರ್ ರಾಯ್‌ನ ಕಿರಿಯ ಮಗ. ತನ್ನ ೬ನೇ ವಯಸ್ಸಿನಲ್ಲೇ ಸಿಕ್ಖ್ ಮತದ ಆಧ್ಯಾತ್ಮಿಕ ಗುರುವಾಗಿಬಿಟ್ಟ. ಆ ಸ್ಥಾನದಲ್ಲಿ ಕೇವಲ ೪ ವರ್ಷ ಇದ್ದ. ಅಷ್ಟರಲ್ಲಿ ಎಲ್ಲ ಕಡೆ ಸಿಡುಬು ಖಾಯಿಲೆ ಹರಡಿ ಬಿಟ್ಟಿತು. ಜನ ಸಾಯತೊಡಗಿದರು. ಒಂದು ಪವಾಡ ಮಾಡಿ ಖಾಯಿಲೆಯನ್ನು ಓಡಿಸಬೇಕೆಂದೂ ಸತ್ತವರನ್ನು ಬದುಕಿಸಿಕೊಡಬೇಕೆಂದೂ ಅನುಯಾಯಿಗಳು ದುಂಬಾಲು ಬಿದ್ದರು. ಆದರೆ ಬಾಲಕನಾಗಿದ್ದ ಗುರು ಹರ್‌ಕಿಶನ್ ಖಾಯಿಲೆಯನ್ನು ತನ್ನ ಮೇಲೆಯೇ ಆಹ್ವಾನಿಸಿಕೊಂಡು ಜನರನ್ನು ಪಾರು ಮಾಡಿದ. ಗುರು ಗ್ರಂಥ ಸಾಹಿಬ್‌ನಲ್ಲಿ ಈತನ ಉಪದೇಶ ಕಂಡುಬರುವುದಿಲ್ಲ.

**೯. ಗುರು ತೇಗ್ ಬಹಾದ್ದೂರ್ (೧೬೨೧–೧೬೭೫), (ಗುರು ಪದವಿ ೧೬೬೪–೧೬೭೫):**

ಗುರು ಹರ್‌ಗೋವಿಂದನ ಕಿರಿಯ ಪುತ್ರನಾದ ಈತ ಪಂಜಾಬ್‌ನ ಅಮೃತಸರ ಬಳಿ ಗುರು ಕಾ ಮಹಲ್ ಎಂಬಲ್ಲಿ ಹುಟ್ಟಿದ. ತನ್ನ ಸಿದ್ಧಾಂತಕ್ಕಾಗಿ ತನ್ನ ಬದುಕನ್ನೇ ಬಲಿಕೊಟ್ಟ. ಮತಾಂಧ, ಔರಂಗಜೇಬ ಈ ಸಿಕ್ಖ್ ಗುರುವನ್ನು ಮಾತ್ರವಲ್ಲ ಇಬ್ಬರು ಪ್ರಮುಖ ಶಿಷ್ಯರಿಗೆ ಚಿತ್ರಹಿಂಸೆ ನೀಡಿ ಶಿರಚ್ಛೇದ ಮಾಡಿಸಿಬಿಟ್ಟ. ಔರಂಗಜೇಬನ ಈ ಹಿಂಸೆಯಿಂದಾಗಿ ಬಲಿದಾನವೇ ಸಾಂಕೇತಿಕವಾಗಿ ಸಿಕ್ಖ್‌ಮತ ಮತ್ತಷ್ಟು ಪ್ರಾಬಲ್ಯ ಹೊಂದಿತು. ಸಿಕ್ಖರ ಪವಿತ್ರಗ್ರಂಥ 'ಆದಿಗ್ರಂಥ'ದಲ್ಲಿ ಈತನ ಐವತ್ತೇಳು ಶ್ಲೋಕಗಳು ಸಂಗ್ರಹಗೊಂಡಿವೆ.

**೧೦. ಗುರು ಗೋವಿಂದ್ ಸಿಂಗ್, ೧೬೬೬–೧೭೦೮, (ಗುರುಪದವಿ ೧೬೭೫–೧೭೦೮):**

ಬಿಹಾರದ ಪಾಟ್ನಾದಲ್ಲಿ ಸಿಕ್ಖ್ ಮತದ ಹತ್ತನೆಯ ಹಾಗೂ ಕೊನೆಯ ಗುರು ಜನಿಸಿದ. ಗುರು ಪದವಿ ಸ್ವೀಕರಿಸಿದ ಬಳಿಕ ಸಿಕ್ಖರಲ್ಲಿ ವಿದ್ಯುತ್ ಸಂಚಾರ ವಾದಂತಾಯಿತು. ಸಿಕ್ಖರಿಗೆ ಹೊಸ ಶಕ್ತಿ ಮತ್ತು ಉತ್ಸಾಹವನ್ನು ತುಂಬಿದ ಗುರು ಈತ. ತನ್ನ ಗುರುಪದವಿಯನ್ನು ಮುಗಿಸುತ್ತ ಪವಿತ್ರಗ್ರಂಥ 'ಗುರುಗ್ರಂಥಸಾಹಿಬ್' ತೋರಿಸಿ "ಇದೇ ನಮ್ಮ ಕೊನೆಯ ಮತ್ತು ಶಾಶ್ವತಗುರು" ಎಂದು ಘೋಷಿಸಿದ. ಪ್ರತಿಯೊಬ್ಬರೂ ಐದು "ಕಾಕಾ"ಗಳನ್ನು ಧರಿಸಬೇಕೆಂದೂ ಹೆಸರಿನ ಮುಂದೆ

ಶೌರ್ಯ, ಸಾಹಸ, ಧೈರ್ಯವನ್ನು ಪ್ರದರ್ಶಿಸುವ 'ಸಿಂಗ್' (ಸಿಂಹ) ಉಪನಾಮವನ್ನು ಬಳಸಬೇಕೆಂದೂ ಆದೇಶಿಸಿದ.

೧೬೯೯ರಲ್ಲಿ, ಸಿಕ್ಖರ ಮೊದಲ ಗುರು ಹುಟ್ಟಿ ಸರಿಯಾಗಿ ೨೩೦ ವರ್ಷಗಳ ಬಳಿಕ, ಆನಂದ ಪುರಿ ಸಾಹಿಬ್‌ನಲ್ಲಿ ಐದು ಮಂದಿ ಸ್ವಯಂ ಸೇವಕರನ್ನು ಆರಿಸಿದ. ಅವರನ್ನು 'ಖಾಲ್ಸಾ' (ಶ್ರದ್ಧಾತ್ಮರು) ಎಂದೂ ಅವರನ್ನು ದೇವರು ಸ್ವತಃ ಆಯ್ಕೆ ಮಾಡಿದ್ದಾನೆಂದೂ ಹೇಳಿದ. ಅವರನ್ನು 'ಪಾಂಚ್ ಪ್ಯಾರಾಸ್' ಅಥವಾ ಐವರು ಪ್ರೀತಿಯ ಸೈನಿಕರು ಎಂದು ಕರೆದು, ಅವರ ಖಡ್ಗಗಳಿಗೆ ಪವಿತ್ರ ತೀರ್ಥ ಪ್ರೋಕ್ಷಿಸಿ ಧಾರ್ಮಿಕ ಮುಂದಾಳುಗಳನ್ನಾಗಿ ಮಾಡಿದ. ನ್ಯಾಯಕ್ಕಾಗಿ ಹೋರಾಡಬೇಕೆಂದೂ ಅಗತ್ಯಬಿದ್ದರೆ ಹೋರಾಡುತ್ತಲೇ ಪ್ರಾಣತ್ಯಾಗ ಮಾಡಬೇಕಾಗುತ್ತದೆಂದೂ ಅದರ ಅರ್ಥವಾಗಿತ್ತು. ಅವರೆಂದರೆ– ೧. ದಯಾಸಿಂಗ್–ಲಾಹೋರ್‌ನ ಒಬ್ಬ ಕ್ಷತ್ರಿಯ, ೨. ದೆಹಲಿಯ ಹಸ್ತಿನಾಪುರದ ಜಾಟ್ ಕುಲಸ್ಥ ಧರಂಸಿಂಗ್, ೩. ಗುಜರಾತಿನ ದ್ವಾರಕದ ಅಗಸಕುಲಕ್ಕೆ ಸೇರಿದ ಒಬ್ಬ ಮಹಾನ್ ಯೋಧ ಮೋಖಾಂ ಸಿಂಗ್, ೪. ಒರಿಸ್ಸದ ಪುರಿಯ ಜಗನ್ನಾಥದ ನೀರು ಸಾಗಿಸುವ ವೃತ್ತಿಯ (ಮಹಾನ್ ಶೂರ) ಹಿಮ್ಮತ್ ಸಿಂಗ್ ಮತ್ತು ೫. ಕರ್ನಾಟಕದ ಬೀದರ್‌ನ ಕ್ಷೌರಿಕ ವೃತ್ತಿಯ ಸಾಹಿಬ್ ಸಿಂಗ್.

**ಕೆಲವು ಮುಖ್ಯಧರ್ಮಗಳ ಪ್ರವರ್ತಕರು ಅಥವಾ ಮೂಲ ಪುರುಷರು:**

೧. ಸನಾತನ ಧರ್ಮ– ಯಾವನೇ ಒಬ್ಬನಿಂದ ಹುಟ್ಟಿದ್ದಲ್ಲ.
೨. ಪಾರ್ಸಿ– ಜಾರತುಷ್ಟ್ರ ಪ್ರವಾದಿ, ಕ್ರಿ.ಪೂ. ೧೩೦೦.
೩. ಯಹೂದ್ಯ– ಮೋಸೆಸ್ ದೇವರ ಶಿಷ್ಯ, ಕ್ರಿ.ಪೂ. ೯೮೩.
೪. ಜೈನ ಮತ– ಪಾರ್ಶ್ವನಾಥ 'ಜಿನ' ಅಥವಾ ಜಯಿಸಿದವನು, ಕ್ರಿ.ಪೂ. ೮೫೦.
೫. ಬೌದ್ಧ ಮತ– ಗೌತಮಬುದ್ಧ, ಕ್ರಿ.ಪೂ. ೫೬೦
೬. ಕ್ರಿಸ್ತಮತ– ಯೇಸು, ದೇವಪುತ್ರ, ಕ್ರಿ.ಶ. ೦೦೦೧
೭. ಇಸ್ಲಾಂ– ಮೊಹಮ್ಮದ್, 'ದೇವದೂತ', ಕ್ರಿ.ಶ. ೫೭೦
೮. ಸಿಕ್ಖ್ ಮತ– ನಾನಕ್ ದೇವ, 'ಸರ್ವಗುರು', ಕ್ರಿ.ಶ. ೧೪೬೯

**ವಿವಿಧ ಮತಗಳ ಪವಿತ್ರ ಗ್ರಂಥಗಳು:**

ಶಾಸ್ತ್ರ ಅಥವಾ ಮತಗ್ರಂಥದ ವಿವರಣೆ: 'ಧರ್ಮೋ ರಕ್ಷತಿ ರಕ್ಷಿತಃ' ಎಂಬಂತೆ ನಾವು ಅದನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಅಂದರೆ ಅದರ ಆದೇಶಗಳನ್ನು ನಾವು ಪಾಲಿಸತಕ್ಕದ್ದು. "ಶಾಸನಾತ್ ತ್ರಾಣನಾಚ್ಚೈವ ಶೈವ ಶಾಸ್ತ್ರ ಮಿತಿ ಅಭಿಧೀಯತೇ".



**ಹಿಂದೂ ಧರ್ಮ ಅಥವಾ ಸನಾತನ ಧರ್ಮ:**

**ಕೆಲವು ಪವಿತ್ರ ಗ್ರಂಥಗಳ ಹೆಸರುಗಳು:**

| ಶ್ರುತಿ | ದೈವಪ್ರಕಾಶನ ಮೌಖಿಕ | ಸ್ಮೃತಿಗಳು | ಸ್ಮರಣೆಯ ಮೂಲಕ ತಿಳಿದದ್ದು ಮಾನವ ಪ್ರಕಾಶಿತ |
|---|---|---|---|
| **ವೇದಗಳು**<br>ಋಗ್<br>ಯಜುರ್<br>ಸಾಮ<br>ಅಥರ್ವ<br>ಉಪನಿಷತ್ತುಗಳು<br>(ಪ್ರಮುಖ)<br>ಈಶ, ಕೇನ,<br>ಕಠ, ಪ್ರಶ್ನ,<br>ಮುಂಡಕ,<br>ಮಾಂಡೂಕ್ಯ,<br>ಐತರೇಯ,<br>ತೈತ್ತಿರೀಯ,<br>ಛಾಂದೋಗ್ಯ,<br>ಬೃಹದಾರಣ್ಯಕ<br><br>**ಉಪವೇದಗಳು**<br>ಆಯುರ್ವೇದ<br>ಗಾಂಧರ್ವ ವೇದ<br>ಧನುರ್‌ವೇದ<br>ಸ್ಥಾಪತ್ಯ ವೇದ | **ಮಹಾಕಾವ್ಯಗಳು**<br>ವಾಲ್ಮೀಕಿ–<br>ರಾಮಾಯಣ<br>ವ್ಯಾಸ–<br>ಮಹಾಭಾರತ | **ಪುರಾಣಗಳು**<br>**(ಒಟ್ಟು ೧೮)**<br>**ವೈಷ್ಣವ**<br>ವಿಷ್ಣು, ನಾರದ<br>ಭಾಗವತ, ಗರುಡ<br>ಪದ್ಮ, ವರಾಹ<br><br>**ಶೈವ**<br>ಮತ್ಸ್ಯ, ಕೂರ್ಮ, ಲಿಂಗ,<br>ವಾಯು, ಸ್ಕಂದ, ಅಗ್ನಿ<br><br>**ಬ್ರಹ್ಮ**<br>ಬ್ರಹ್ಮ, ಬ್ರಹ್ಮಾಂಡ,<br>ವಾಮನ, ಬ್ರಹ್ಮವೈವರ್ತ,<br>ಮಾರ್ಕಂಡೇಯ, ಭವಿಷ್ಯ<br><br>**ಉಪ ಪುರಾಣಗಳು**<br>ಸನತ್ಕುಮಾರ,<br>ನಾರಸಿಂಹ, ನಾರದೀಯ,<br>ಶಿವ, ದೂರ್ವಾಸ, ಕಪಿಲ,<br>ವಾಮನ, ಗುಶಾಸನ,<br>ವರುಣ, ಕಾಳಿಕಾ,<br>ಭಾರ್ಗವ, ನಂದಿ, ಸಾರ,<br>ಸಾಂಬ, ಮಾಹೇಶ್ವರ,<br>ಪರಾಶರ, ಗಣೇಶಂ,<br>ವಾಸಿಷ್ಠ | **ಧರ್ಮಶಾಸ್ತ್ರಗಳು**<br>**ಸ್ಮೃತಿಗಳು**<br>ವಿಷ್ಣು, ಪರಾಶರ,<br>ದಕ್ಷ, ಅತ್ರಿ,<br>ಸಂವರ್ತ,<br>ವ್ಯಾಸ, ಉಶಾನ,<br>ವಸಿಷ್ಠ, ಯಮ,<br>ಬೃಹಸ್ಪತಿ,<br>ಗೌತಮ, ಶಂಖ್ಯ,<br>ಲಿಖಿತ,<br>ಶತಾತಪ,<br>ಯಾಜ್ಞವಲ್ಕ್ಯ,<br>ಮನು,<br>ಆಂಗೀರಸ,<br>ದೇವಲ<br><br>**ಸೂತ್ರಗಳು**<br>ಆಪಸ್ತಂಭ,<br>ಬೋಧಾಯನ,<br>ಕಾತ್ಯಾಯನ,<br>ಜೈಮಿನೀಯ,<br>ಆಶ್ವಲಾಯನ,<br>ನಾರದ |

ಇವುಗಳನ್ನು ಬರೆದವರ ಹೆಸರುಗಳನ್ನೇ ಆಯಾ ಕೃತಿಗಳಿಗೂ ನೀಡಲಾಗಿದೆ. ಆಯಾ ಋಷಿಗಳು ತಾವು ಬರೆದ ಸ್ಮೃತಿಗಳಲ್ಲಿ ಎಲ್ಲರೂ ಅನುಸರಿಸಬೇಕಾದ 'ಧರ್ಮ' (ಕರ್ತವ್ಯ)ಗಳನ್ನು ಬರೆದಿರಿಸಿದರು. ಹಾಗಾಗಿಯೇ ಅವುಗಳನ್ನು 'ಧರ್ಮಶಾಸ್ತ್ರ' ಎಂದು ಕರೆಯಲಾಗಿದೆ. ಸ್ಮೃತಿ, ಸೂತ್ರ, ನಿಬಂಧನೆ ಮತ್ತು ವೃತ್ತಿಗಳನ್ನು (ಭಾಷ್ಯಗಳು ಅಥವಾ ವಿವರಣೆಗಳು) ಧರ್ಮಶಾಸ್ತ್ರ ಒಳಗೊಂಡಿದೆ.

ಮನುವಿನ ಪ್ರಕಾರ ಶ್ರುತಿ ಎಂದರೆ ಜ್ಞಾನ (ವೇದ); ಸ್ಮೃತಿ ಎಂದರೆ ಅನುಸರಿಸಬೇಕಾದ ಕರ್ತವ್ಯಗಳು ಅಥವಾ ನಿಯಮಗಳು.

**ಬೌದ್ಧರ ತ್ರಿಪಿಟಕ:**

ಬೌದ್ಧರ ಪವಿತ್ರಗ್ರಂಥವನ್ನು 'ತ್ರಿಪಿಟಕ' ಎಂದು ಕರೆಯಲಾಗಿದೆ. ತ್ರಿಪಿಟಕ ಎಂದರೆ ಮೂರು ಬುಟ್ಟಿಗಳು ಅಥವ ಗುಚ್ಛಗಳು. ಬುದ್ಧನ ಉಪದೇಶಗಳನ್ನು ಮೂರು ಸಂಪುಟಗಳಲ್ಲಿ ಬರೆದಿಡಲಾಗಿದೆ. ಅವೇ ತ್ರಿಪಿಟಕ. ಅವುಗಳೆಂದರೆ, ವಿನಯ ಪಿಟಕ (ಶಿಸ್ತುಗಳ ಪಿಟಕ), ಸುತ್ತ ಪಿಟಕ (ಉಪದೇಶಗಳ ಪಿಟಕ) ಮತ್ತು ಅಭಿದಮ್ಮ ಪಿಟಕ (ಅನುಶಾಸನಗಳ ಪಿಟಕ). ತನ್ನ ಐವರು ಬಿಕ್ಕುಗಳಿಗೆ ವಾರಣಾಸಿ ಬಳಿ ಇರುವ ಸಾರನಾಥ ಎಂಬಲ್ಲಿ ಬುದ್ಧ ತನ್ನ ಮೊದಲ ಉಪದೇಶ ನೀಡಿದ. ಮುಂದಿನ ನಲವತ್ತೈದು ವರ್ಷಗಳ ಕಾಲ ಅವನು ಪ್ರವಾಸ ಮಾಡುತ್ತ ಬೇರೆ ಬೇರೆ ಕಡೆ ಧರ್ಮೋಪದೇಶ ಮಾಡುತ್ತ ಸಾಗಿದ. ಅವನು ಹುಟ್ಟಿದ್ದು ವೈಶಾಖ ಪೂರ್ಣಿಮೆಯಂದು. ತೀರಿಕೊಂಡದ್ದು ಎಂಬತ್ತು ವರ್ಷಗಳ ಬಳಿಕ ಅದೇ ವೈಶಾಖ ಪೂರ್ಣಿಮೆಯಂದು. ನಾಲ್ಕು ಉದಾತ್ತ ಸತ್ಯಗಳನ್ನು, ಐದು ಸನ್ನಡತೆಗಳನ್ನು (ಪಂಚಶೀಲ) ಮತ್ತು ಅಷ್ಟಾಂಗ ಮಾರ್ಗ (ಸತ್ಯದ ಎಂಟು ಹಾದಿಗಳು)ಗಳನ್ನು ಅವನು ಉಪದೇಶಿಸಿದ. ಮೊದಲಿಗೆ ಅವನ ತತ್ವೋಪದೇಶಗಳು ಬಾಯ್ದೆರೆಯಲ್ಲೇ ಇದ್ದವು. ಅವನು ತೀರಿಕೊಂಡು ಎರಡುನೂರು ವರ್ಷಗಳ ಬಳಿಕ ಅವನ್ನೆಲ್ಲ ಬರೆದಿಡಲಾಯಿತು.

**ಜೈನ ಧರ್ಮ–ಆಗಮಗಳು (ಬೋಧನೆಗಳು) ಮತ್ತು ಸಿದ್ಧಾಂತಗಳು (ಅನುಶಾಸನಗಳು):**

ಜೈನ ಧರ್ಮಗ್ರಂಥಗಳನ್ನು ಆಗಮಗಳು (ಬೋಧನೆಗಳು) ಮತ್ತು ಸಿದ್ಧಾಂತಗಳು (ಅನುಶಾಸನಗಳು) ಎಂದು ವಿಭಾಗಿಸಲಾಗಿದೆ. ಆಗಮಗಳನ್ನು ಸೂತ್ರಾಂಗ ಮತ್ತು ಉಪಾಂಗಗಳೆಂದು ಎರಡಾಗಿ ವಿಭಾಗಿಸಲಾಗಿದ್ದು, ಪ್ರತಿಯೊಂದರಲ್ಲೂ ತಲಾ ಹನ್ನೆರಡು ವಿಭಾಗಗಳಿವೆ. ಮನುಷ್ಯ ಸಾಮಾನ್ಯವಾಗಿ ಮಾಡುವ ಪಾಪಕರ್ಮಗಳನ್ನು ಅಲ್ಲಿ ಬೆರಳೆತ್ತಿ ತೋರಿಸಲಾಗಿದ್ದು, ಅವುಗಳನ್ನು ತಡೆಯುವ ವಿಧಾನವನ್ನು ಹೇಳಿದೆ. ಜೀವನವು ಕಮ್ಮಿ ಅವಧಿಯದಾಗಿದ್ದು,



ಆಧ್ಯಾತ್ಮಿಕ ಮಹತ್ವ ಮತ್ತು ಸ್ವನಿಯಂತ್ರಣಗಳನ್ನು ಬೆಳೆಸಿಕೊಳ್ಳುವ ವಿಧಾನಗಳನ್ನು ಹೇಳಿದೆ.

**ಸಿಕ್ಖ್ ಮತ– 'ಗುರುಗ್ರಂಥ ಸಾಹಿಬ್':**

ಸಿಕ್ಖ್‌ರ ಪುಣ್ಯಗ್ರಂಥವನ್ನು 'ಗ್ರಂಥ ಸಾಹಿಬ್' ಅಥವಾ 'ಗುರುಗ್ರಂಥ ಸಾಹಿಬ್' ಎನ್ನಲಾಗುತ್ತದೆ. ಈ ಗ್ರಂಥವೇ ಅವರಿಗೆ ಗುರು ಸಮಾನ. ಹಾಗಾಗಿ ಗುರು ಗ್ರಂಥ ಎನ್ನುತ್ತಾರೆ. ಅವರ ಪವಿತ್ರ ಶ್ಲೋಕಗಳಾದ 'ಗುರ್ಬಾನಿ'ಗಳು (ಗುರುವಾಣಿ) ದೇವರಿಂದ ನೇರವಾಗಿ ಗುರುಗಳಿಗೆ ಬಂದಿದ್ದು, ಗುರುಗಳು ಅವನ್ನು ಬರೆದಿಟ್ಟರು. ಒಟ್ಟಿನಲ್ಲಿ, 'ಗ್ರಂಥ'ವು ಯಾವನೇ ಭಕ್ತನಿಂದ ಅಥವಾ ಭಕ್ತರಿಂದ ಬರೆಯಲ್ಪಟ್ಟುದಲ್ಲ. ಗ್ರಂಥದ ಬಹುತೇಕ ಭಾಗವನ್ನು ಗುರು ಅರ್ಜುನದೇವ ಸಂಗ್ರಹಿಸಿದ, ಸಂಪಾದಿಸಿದ ಮತ್ತು ಸ್ವತಃ ಬರೆದ. ಗುರುನಾನಕ್ ಅಂಗದ, ಅಮರ್‌ದಾಸ್, ರಾಮ್‌ದಾಸ್ ಮೊದಲಾದವರ ಉಪದೇಶಗಳನ್ನೆಲ್ಲ ಆಮೇಲೆ ಬರೆದು ಸಿಕ್ಖರ ಆದಿಗ್ರಂಥದಲ್ಲಿ ಸೇರಿಸಲಾಯಿತು.

೧೪೩೦ ಪುಟಗಳ ಈ ಗ್ರಂಥವು ಚರಿತ್ರೆಯಲ್ಲ, ಪುರಾಣವಲ್ಲ ಹಾಗೂ ಮಂತ್ರ ಸಂಕಲನವೂ ಅಲ್ಲ. ಅವು ಆಧ್ಯಾತ್ಮಿಕ ಕವಿತೆಗಳು. ಮತ್ತು ಉದಾತ್ತ ಜೀವನದ ಹಿತೋಪದೇಶಗಳು. ಕೇವಲ ಸಿಕ್ಖ್ ಗುರುಗಳ ಉಪದೇಶಗಳಲ್ಲದೆ ಹಿಂದೂಕವಿ, ಸಂತರಾದ ಬಂಗಾಳದ ಜಯದೇವ, ನಾಮದೇವನ ಅಭಂಗಗಳು, ಮಹಾರಾಷ್ಟ್ರದ ತ್ರಿಲೋಚನಾನಂದ ಪರಮಾನಂದ, ರಾಜಸ್ಥಾನದ ಧನ್ನ, ರಾಮಾನಂದ, ಕಬೀರ್‌ದಾಸ್, ಉತ್ತರಪ್ರದೇಶದ ರವಿದಾಸನ 'ಶಬ್ದದ್' ರಚನೆಗಳು, ಪಶ್ಚಿಮಪಂಜಾಬಿನ (ಈಗಿನ ಪಾಕಿಸ್ತಾನ) ಮುಸಲ್ಮಾನ ಪೀರ್ ಶೇಖ್‌ನ ಪದಗಳು ಮೊದಲಾದವು ಗುರುಗ್ರಂಥ ಸಾಹಿಬ್‌ನಲ್ಲಿ ಸ್ಥಾನ ಪಡೆದಿವೆ. ಪಂಜಾಬಿ ಭಾಷೆಯಲ್ಲಿ ಗುರುಮುಖೀ ಲಿಪಿಯಲ್ಲಿ (ಗುರುಗಳ ಬಾಯಿಯ ಮೂಲಕ ಬಂದ) ಈ ಗ್ರಂಥವನ್ನು ಬರೆಯಲಾಗಿದೆ.

**ಕ್ರೈಸ್ತಮತ– ಬೈಬಲ್:**

ಯೇಸುಕ್ರಿಸ್ತನಿಂದ ಕ್ರಿ.ಶ. ೩೩ರಲ್ಲಿ ಕ್ರಿಶ್ಚಿಯನ್ ಮತ ಆರಂಭಗೊಂಡಿತು. ಬೈಬಲ್ ಕ್ರೈಸ್ತರ ಪವಿತ್ರ ಗ್ರಂಥವಾಗಿದ್ದು, ಎರಡು ಭಾಗಗಳಲ್ಲಿ, ಅಂದರೆ ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳೆಂಬ ಭಾಗಗಳಲ್ಲಿ ಹರಡಿಕೊಂಡಿದೆ. ಹಳೆಯದರಲ್ಲಿ ೩೯ ಪುಸ್ತಕಗಳು ಮತ್ತು ಹೊಸದರಲ್ಲಿ ೨೭ ಪುಸ್ತಕಗಳಿವೆ. ಬೈಬಲ್ ಎಂದರೆ ಪುಸ್ತಕ ಎಂದರ್ಥ. ಈ ೬೬ ಪುಸ್ತಕಗಳನ್ನು ೧೬೦೦ ವರ್ಷಗಳ ಕಾಲಘಟ್ಟದಲ್ಲಿ ಬೇರೆ ಬೇರೆ ಜೀವನ ಹಿನ್ನೆಲೆಯಿಂದ ಬಂದ ಬೇರೆ ಬೇರೆ ವ್ಯಕ್ತಿಗಳು ಬರೆಯುತ್ತ

ಕಲೆ ಹಾಕಿದ್ದಾಗಿದೆ. ಈ ಕೆಲಸ ಕ್ರಿ.ಪೂ. ೧೫೧೩ರಿಂದ ಆರಂಭಗೊಂಡು ಕ್ರಿ.ಶ. ೯೮ರವರೆಗೂ ಸಾಗಿತು.

ಮೋಸಸ್ ಎಂಬ (ಕ್ರಿ.ಪೂ. ೧೪೯೩) ಯಹೂದಿ ನೇತಾರ ಕ್ರಿ.ಪೂ. ೧೫೧೩ರಲ್ಲಿ ಹಳೆಯ ಒಡಂಬಡಿಕೆಯ ಐದು ಪುಸ್ತಕಗಳನ್ನು ಬರೆದನೆಂದು ಹೇಳಲಾಗಿದೆ. ಹಾಗೆಯೇ ಅದರ ಕೊನೆಯ ಭಾಗವನ್ನು ಮಲಾಚಿ ಎಂಬವನು ಕ್ರಿ.ಪೂ. ೪೦೦ರ ಸುಮಾರಿಗೆ ಬರೆದಿರಬೇಕೆಂದು ಭಾವಿಸಲಾಗಿದೆ.

ಹೊಸ ಒಡಂಬಡಿಕೆಯ ಮೊದಲ ಭಾಗಗಳನ್ನು ಕ್ರಿ.ಶ. ೪೫ರ ಸುಮಾರಿಗೆ ಜೇಮ್ಸ್ ಎಂಬಾತ ಬರೆದಿರಬೇಕೆಂದೂ ಅದರ ಈಚಿನ ಭಾಗವನ್ನು ಜಾನ್ ಎಂಬಾತ ಕ್ರಿ.ಶ. ೯೫ರಲ್ಲಿ ಬರೆದನೆಂದೂ ತಿಳಿದುಬರುತ್ತದೆ. ಹೊಸ ಒಡಂಬಡಿಕೆಯ ೨೭ ಪುಸ್ತಕಗಳ ಪೈಕಿ ೧೪ನ್ನು ಅಪೋಸಲ್ ಪಾಲ್ ಎಂಬಾತ ಬರೆದ.

**ಇಸ್ಲಾಂ: ಕುರಾನ್:**

ಮುಸ್ಲಿಮರ ಪವಿತ್ರ ಗ್ರಂಥ ಕುರಾನ್. ಕುರಾನ್ ಎಂದರೆ ಹಾಡುವುದು ಅಥವಾ ಕಂಠಪಾಠ ಮಾಡುವುದು ಎಂದರ್ಥ. ಗ್ಯಾಬ್ರಿಯಲ್ ಎಂಬಾತ ಪ್ರವಾದಿ ಮುಹಮ್ಮದನಿಗೆ ಉಪದೇಶಿಸಿದಂತೆ ಕ್ರಿ.ಶ. ೬೧೦ರಲ್ಲಿಗೇ ರಂಜಾನ್ ಸಮಯದಲ್ಲಿ ಈ ಪವಿತ್ರ ಗ್ರಂಥವನ್ನು ಆತ ಬರೆಯ ತೊಡಗಿದನಂತೆ. ಮುಹಮ್ಮದನಿಗೆ ೪೦ ವರ್ಷ ವಯಸ್ಸಾದಾಗ ಆ ಸತ್ಯ ವಾಕ್ಯಗಳನ್ನು ಸ್ವಲ್ಪ ಸ್ವಲ್ಪವೇ ಬರೆಯುತ್ತ ಮುಂದಿನ ೨೦-೨೨ ವರ್ಷಗಳ ಅವಧಿಯಲ್ಲಿ ಅಂದರೆ ಆತನ ಮರಣದ ಕ್ರಿ.ಶ. ೬೩೨ರ ವೇಳೆಗೆ ಬರೆದು ಮುಗಿಸಿದನಂತೆ.

ತನ್ನ ಅನುಯಾಯಿಗಳಿಗೆ ಮುಹಮ್ಮದ್ ಬಾಯ್ದೆರೆಯಾಗಿ ಹೇಳುತ್ತಿದ್ದುದನ್ನು ಅವರೆಲ್ಲ ನೆನಪಿಟ್ಟುಕೊಂಡು ಅನಂತರದವರಿಗೆ ಹೇಳಿದರು. ಮುಹಮ್ಮದನ ಮರಣದ ಸ್ವಲ್ಪ ಸಮಯದ ಅನಂತರ ಅವನ್ನೆಲ್ಲಾ ಕ್ರೋಢೀಕರಿಸಿ ಆ ಕಾಲದ ಬರವಣಿಗೆಯ ಸಾಧನಗಳಾದ ತಾಳೆಗರಿಯಲ್ಲಿ, ಮರದಲ್ಲಿ, ಒಂಟೆಯ ಚರ್ಮದ ಮೇಲೆ ಬರೆದಿಟ್ಟರು. ಎಲ್ಲ ಸೇರಿ ೧೧೪ 'ಸೂರ'(ಅಧ್ಯಾಯ)ಗಳಿವೆ. ಸುನ್ನ ಅಥವಾ ಹಡಿತ್ ಮತ್ತು ಶಾರಿಯಾ ಎಂಬೆರಡು ಬೇರೆ ಪವಿತ್ರ ಗ್ರಂಥಗಳು ಇವೆ. ಮೊದಲಿನದರಲ್ಲಿ ಮುಹಮ್ಮದನ ಆಸೆ ಅಪೇಕ್ಷೆಗಳು, ಮಾತುಗಳು ಮತ್ತು ಮೌನ ಸಮ್ಮತಿಗಳು ಸೇರಿವೆ. ಎರಡನೆಯದರಲ್ಲಿ ಕುರಾನಿನ ಆಧಾರದಲ್ಲಿ ಅನುಸರಿಸಬೇಕಾದ ಸಾಮಾನ್ಯ ನಿಯಮಾವಳಿಗಳಿವೆ. ಇವುಗಳು ಇಸ್ಲಾಮಿನ ಆಚರಣೆಯ ಅನುಷಂಗಿಕ ಪವಿತ್ರಗ್ರಂಥಗಳೆಂದು ಭಾವಿಸಲಾಗಿದೆ.



**ವಿವಿಧ ಧರ್ಮಗಳ ಪ್ರಾರ್ಥನಾ ಮಂದಿರಗಳನ್ನು ಹೀಗೆ ಕರೆಯಲಾಗುತ್ತದೆ:**

ಬೌದ್ಧ – ವಿಹಾರ, ಪಗೋಡ, ದಗೋಬಾ

ಕ್ರೈಸ್ತ – ಚರ್ಚ್

ಹಿಂದೂ – ಕ್ಷೇತ್ರ, ಮಂದಿರ, ದೇವಾಲಯ, ಗುಡಿ, ಅಂಬಲಮ್, ಕೋಯಿಲ್ ಇತ್ಯಾದಿ

ಇಸ್ಲಾಂ – ಮಸೀದಿ

ಯಹೂದಿ – ಸಿನಗಾಗ್

ಜೈನ – ಚೈತ್ಯ, ಬಸದಿ

ಸಿಕ್ಖ್ – ಗುರುದ್ವಾರ

* * * *